12 March 2026 Thursday

SINCE 1957

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

# ವರ್ತಮಾನ

ಸಂಪಾದಕ: ಕೆ.ಎನ್.ರವಿ

ಭವಿಷ್ಯದ ಮುನ್ನುಡಿ

**ಭಾವನಾಂತರಂಗ**

ಯಾವಾಗಲೂ ಮೌನದಿಂದಿದ್ದರೆ
ಸಮ್ಮತಿಯ ಸೂಚನೆ ಎನಿಸುತ್ತದೆ!
ಹೀಗಾಗಿ ಆಡುವ ಮಾತು, ವಹಿಸುವ ಮೌನ
ಎರಡಕ್ಕೂ ಅದರದೇ ಆದ ಬೆಲೆ ಇದೆ!

-ಸ್ನೇಹಾ ಆನಂದ್

info.varthaman@gmail.com



ಪ.ಜಾತಿಗೆ ಸೇರಿಸುವಂತೆ ಮಾ.16ರಿಂದ ಮಡಿವಾಳರ ಧರಣಿ ಪುಟ ಸಂ. 2



ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ ಕಾರ್ಯಗತಕ್ಕೆ ನಿರಂತರ ಪ್ರಯತ್ನ ಪುಟ ಸಂ. 4



ಮೈಸೂರು: 30.366.00 ಲೀಟರ್ ಬಿಯರ್ ನಾಶ ಪುಟ ಸಂ. 4

9742504916 | ಮೈಸೂರು | ಮಂಡ್ಯ | ಬೆಂಗಳೂರು | ಹಾಸನ | ಚಾಮರಾಜನಗರ | ರಾಮನಗರ | ಬೆಂಗಳೂರು ಗ್ರಾಮಾಂತರ | ಕೊಡಗು | ಕಾರ್ಯನಿರ್ವಾಹಕ ಸಂಪಾದಕ - ಕೆ.ಆರ್.ಮಿಹಿರ್ ಆಕಾಶ್

VARTHAMAN | Volume: 69 | Issue: 120 | Pages: 06 | KA/SK/MYS/1098/2023-2025 | R.N.I. No.3577/1957 | www.varthaman.in | Price-3

# ಬೆಸ್ತ ಉಪಪಂಗಡ: ಎಸ್‌ಟಿಗೆ ಸೇರ್ಪಡೆ


## ಗಂಗಾಮತ ಉಪಜಾತಿಗಳನ್ನು ಪರಿಶಿಷ್ಟ ಪಂಗಡಕ್ಕೆ ಸೇರಿಸಲು ಕೇಂದ್ರಕ್ಕೆ ಶೀಘ್ರ ಶಿಫಾರಸು

**ಬೆಂಗಳೂರು:** ಕೋಲಿ, ಕಬ್ಬಲಿಗ, ಬೆಸ್ತ, ಅಂಬಿಗ, ಬಾರ್ಕಿ ಜಾತಿಗಳನ್ನು ಪರಿಶಿಷ್ಟ ಪಂಗಡಕ್ಕೆ (ಎಸ್‌ಟಿ) ಸೇರಿಸಲು ಕೇಂದ್ರಕ್ಕೆ ಶೀಘ್ರವೇ ಶಿಫಾರಸು ಮಾಡಲಾಗುವುದು ಎಂದು ಸಚಿವ ಬೋಸರಾಜು ತಿಳಿಸಿದರು.

ವಿಧಾನ ಪರಿಷತ್‌ನಲ್ಲಿ ಬುಧವಾರ ಕಾಂಗ್ರೆಸ್‌ನ ತಿಪ್ಪಣ್ಣಪ್ಪ ಕಮಕನೂರು, ಬಿಜೆಪಿ ಸದಸ್ಯ ತಳವಾರ್ ಸಾಬಣ್ಣ ವಿಷಯ ಪ್ರಸ್ತಾಪ ಮಾಡಿದರು. ಕೋಲಿ, ಕಬ್ಬಲಿಗ, ಬೆಸ್ತ, ಅಂಬಿಗ ಮತ್ತು ಬಾರ್ಕಿ ಜಾತಿಗಳನ್ನು ಎಸ್‌ಟಿ ಸಮುದಾಯಕ್ಕೆ ಸೇರಿಸಿ. ಈ ಸಮುದಾಯಗಳು ಹಿಂದುಳಿದ ಸಮುದಾಯಗಳು. ಕೇಂದ್ರಕ್ಕೆ ಪ್ರಸ್ತಾವನೆ ಸಲ್ಲಿಸಿ ಎಂದು ಮನವಿ ಮಾಡಿದರು.

ಮುಖ್ಯಮಂತ್ರಿಗಳ ಪರವಾಗಿ ಸಭಾನಾಯಕ ಬೋಸರಾಜು ಉತ್ತರ ನೀಡಿದರು. ರಾಜ್ಯದಲ್ಲಿನ ಗಂಗಾಮತ ಮತ್ತು ಅದರ ಉಪ ಜಾತಿಗಳನ್ನು ರಾಜ್ಯದ ಪರಿಶಿಷ್ಟ ಪಂಗಡದ ಪಟ್ಟಿಗೆ ಸೇರಿಸಲು ಕನ್ನಡ ವಿಶ್ವವಿದ್ಯಾಲಯ ಹಂಪಿ ಇವರ ಮೂಲಕ ಕುಲಶಾಸ್ತ್ರೀಯ ಅಧ್ಯಯನ ಕೈಗೊಂಡಿರುವ ವರದಿ ಪಡೆದು ಸಲ್ಲಿಸಲು ಆದೇಶಿಸಲಾಗಿದೆ. ಸರ್ಕಾರದ ಆದೇಶದನ್ವಯ ಗಂಗಾಮತ ಮತ್ತು ಅದರ ಉಪ ಜಾತಿಗಳ ಕುಲಶಾಸ್ತ್ರೀಯ ಅಧ್ಯಯನದ ಅಂತಿಮ ವರದಿಯನ್ನು 2014ರ ಫೆ.17ರಂದು ಮೈಸೂರಿನಲ್ಲಿರುವ ಕರ್ನಾಟಕ ರಾಜ್ಯ ಬುಡಕಟ್ಟು ಸಂಶೋಧನಾ ಸಂಸ್ಥೆ ಮೂಲಕ ಸರ್ಕಾರಕ್ಕೆ ಸಲ್ಲಿಸಲಾಗಿತ್ತು.





ರಾಜ್ಯ ಸರ್ಕಾರದ ಶಿಫಾರಸಿನೊಂದಿಗೆ ದೆಹಲಿಯ ಕೇಂದ್ರ ಬುಡಕಟ್ಟು ವ್ಯವಹಾರಗಳ ಮಂತ್ರಾಲಯಕ್ಕೆ 2014ರ ಮಾರ್ಚ್ 3ರಂದು ಮೊದಲ ಬಾರಿಗೆ ಕಳುಹಿಸಲಾಗಿತ್ತು. ಕರ್ನಾಟಕ ರಾಜ್ಯ ದಲ್ಲಿ ಗಂಗಾಮತ ಮತ್ತು ಅದರ ಉಪ ಜಾತಿ ಗಳನ್ನು ಪರಿಶಿಷ್ಟ ಪಂಗಡದ ಪಟ್ಟಿಗೆ ಸೇರಿಸುವ ಬಗ್ಗೆ ಸಲ್ಲಿಸಲಾದ ಪ್ರಸ್ತಾವನೆಗೆ ಕೇಂದ್ರ ರಿಜಿ ಸ್ಟ್ರಾರ್ ಜನರಲ್ ಆಫ್ ಇಂಡಿಯಾ ಪ್ರಸ್ತಾಪಿಸಿ ರುವ ಅಂಶಗಳ ಬಗ್ಗೆ, ಪರಿಶೀಲಿಸಿ ಸ್ಪಷ್ಟೀಕರಣ /ದಾಖಲಾತಿಗಳೊಂ ದಿಗೆ ವರದಿ ಸಲ್ಲಿಕೆ ಮಾಡಲಾಗಿದೆ ಎಂದು ಮಾಹಿತಿ ನೀಡಿದರು.

ಅಂತಿಮವಾಗಿ ಕೇಂದ್ರ ರಿಜಿ ಸ್ಟ್ರಾರ್ ಜನರಲ್ ಆಫ್ ಇಂಡಿಯಾವು 2023ರ ಅಕ್ಟೋಬರ್ 30ರಂದು ಪತ್ರದಲ್ಲಿ ಪ್ರಸ್ತಾಪಿಸಿರುವ ಅಂಶಗಳ ಬಗ್ಗೆ ಪರಿಶೀ ಲಿಸಿ ಮತ್ತೊಮ್ಮೆ ಸ್ಪಷ್ಟೀ ಕರಣ/ ದಾಖಲಾತಿಗ ಳೊಂದಿಗೆ ವರದಿಯನ್ನು ಸಲ್ಲಿಸುವಂತೆ ಹಂಪಿಯ ಕನ್ನಡ ವಿವಿ ಕುಲಸಚಿವರಿಗೆ ಕೋರಲಾಗಿದೆ. ಕುಲಸಚಿವರಿಂದ ವರದಿ ಬಂದ ತಕ್ಷಣ ಕೇಂದ್ರ ಸರ್ಕಾ ರಕ್ಕೆ ಮಾಹಿತಿ ಸಲ್ಲಿಸಲಾಗುವುದು ಎಂದು ಹೇಳಿದರು. ಈಗಾಗಲೇ ಕರ್ನಾಟಕದ ಪರಿಶಿಷ್ಟ ಪಂಗಡದ ಪುಟ 2ಕ್ಕೆ

## ಅಂಗನವಾಡಿ ಹುದ್ದೆ ಭರ್ತಿಗೆ ಕ್ರಮ: ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಭರವಸೆ

**ಬೆಂಗಳೂರು:** ರಾಜ್ಯದ ಅಂಗನವಾಡಿಗಳ ಯಾವುದೇ ಹುದ್ದೆ ಖಾಲಿಯಾದ 90 ದಿನಗಳ ಒಳಗಾಗಿ ಭರ್ತಿ ಮಾಡಬೇಕು ಎಂದು ಜಿಲ್ಲಾಧಿಕಾರಿ ಹಾಗೂ ಜಿಪಂ ಮುಖ್ಯ ಕಾರ್ಯನಿರ್ವಹಣಾ ಧಿಕಾರಿಗಳಿಗೆ ಸೂಚಿಸಲಾಗಿದೆ ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಸಚಿವೆ ಲಕ್ಷ್ಮೀ ಹೆಬ್ಬಾಳಕರ್ ತಿಳಿಸಿದರು.



ವಿಧಾನಸಭೆಯಲ್ಲಿ ಬುಧವಾರ ಪ್ರಶ್ನೋತ್ತರ ಕಲಾಪದಲ್ಲಿ ಕಾಪು ಕ್ಷೇತ್ರದ ಶಾಸಕ ಗುರ್ಮೆ ಸುರೇಶ್ ಶೆಟ್ಟಿ ಕೇಳಿದ ಪ್ರಶ್ನೆಗೆ ಉತ್ತರಿಸಿದ ಸಚಿವರು, ಅಂಗನವಾಡಿ ಕಾರ್ಯಕರ್ತೆ ಮತ್ತು ಸಹಾಯಕಿಯರ ಖಾಲಿ ಹುದ್ದೆಗಳನ್ನು ಭರ್ತಿ ಮಾಡಲು ಆನ್‌ಲೈನ್ ತಂತ್ರಾಂಶ ಅಭಿವೃದ್ಧಿಪಡಿಸಲಾಗಿದೆ. ಜಿಲ್ಲಾಧಿಕಾರಿ ಅಧ್ಯಕ್ಷತೆಯಲ್ಲಿ ಜಿಲ್ಲಾ ಆಯ್ಕೆ ಸಮಿತಿ ಮೂಲಕ ನೇಮಕಾತಿ ಪ್ರಕ್ರಿಯೆ ಕೈಗೊಳ್ಳಲಾಗುತ್ತಿದೆ ಎಂದರು.

ಕಾರ್ಯಕರ್ತೆಯರು ಹಾಗೂ ಸಹಾಯಕಿಯರ ಆಯ್ಕೆ ಮಾಡುವಾಗ ಸ್ಥಳೀಯರಿಗೆ ಆದ್ಯತೆ ನೀಡಲಾಗುತ್ತಿದೆ. ಆ ಊರಿನ ನಿವಾಸಿಗಳು ಇಲ್ಲದಿದ್ದರೆ, ಗ್ರಾಮ ಪಂಚಾಯಿತಿ ಅಥವಾ ಹೋಬಳಿ ವ್ಯಾಪ್ತಿಯಲ್ಲಿ ವಾಸವಾಗಿದ್ದರೂ ಅಂಥ ಅಭ್ಯರ್ಥಿಗಳನ್ನು ಪರಿಗಣಿಸಲಾಗುವುದು ಎಂದು ಮಾಹಿತಿ ನೀಡಿದರು.

ಮುಂದಿನ ಎರಡು ತಿಂಗಳಲ್ಲಿ 2023–24 ಮತ್ತು 2024–25ನೇ ಉದ್ಯೋಗಿನಿ ಯೋಜನೆಯ ಫಲಾನುಭವಿಗಳಿಗೆ ಸಹಾಯಧನ ಬಿಡುಗಡೆ ಮಾಡಲಾಗುವುದು ಎಂದು ಲಕ್ಷ್ಮಿ ಹೆಬ್ಬಾಳ್ಕರ್ ಹೇಳಿದರು.

# ಸದನದಲ್ಲೂ ಗ್ಯಾಸ್ ಗದ್ದಲ

## ಬಿಜೆಪಿ ಮತ್ತು ಕಾಂಗ್ರೆಸ್ ಸದಸ್ಯರ ನಡುವೆ ವಾಗ್ವಾದ । ಸಿದ್ದರಾಮಯ್ಯ ಗರಂ



**ಬೆಂಗಳೂರು:** ವಿಧಾನಸಭೆಯಲ್ಲಿ ಬುಧವಾರ ಗ್ಯಾಸ್ ಸಮಸ್ಯೆ ಕುರಿತು ಆಡಳಿತ ಪಕ್ಷ ಕಾಂಗ್ರೆಸ್ ಮತ್ತು ವಿಪಕ್ಷ ಬಿಜೆಪಿ ಸದಸ್ಯರ ನಡುವೆ ಗದ್ದಲಕ್ಕೆ ಕಾರಣವಾಯಿತು.

ಸದನದಲ್ಲಿ ಶೂನ್ಯ ವೇಳೆಯಲ್ಲಿ ಶಾಸಕ ಕುಣಿಗಲ್ ರಂಗನಾಥ್ ಗ್ಯಾಸ್ ಪ್ರಾಬ್ಲಂ ಕುರಿತು ಪ್ರಸ್ತಾಪಿಸಿದರು. ರಾಜ್ಯದ ಹಲವೆಡೆ ಮತ್ತು ಬೆಂಗಳೂರಲ್ಲಿ ಗ್ಯಾಸ್ ಸಮಸ್ಯೆ ಇದೆ. ಬ್ಲಾಕ್ ಮಾರ್ಕೆಟ್ ಶುರುವಾಗಿದೆ. ಇದಕ್ಕೆ ಮೋದಿ ವಿದೇಶಾಂಗ ನೀತಿಯೇ ಕಾರಣ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಇದಕ್ಕೆ ಬಿಜೆಪಿ ಸದಸ್ಯರು ಆಕ್ಷೇಪ ವ್ಯಕ್ತಪಡಿಸಿದರು. ಯುದ್ಧದ ಸಂದರ್ಭದಲ್ಲಿ ರಾಜಕೀಯ ಏಕೆ ಮಾಡುತ್ತೀರೆಂದು ಆಕ್ರೋಶ ವ್ಯಕ್ತಪಡಿಸಿದರು. ಬಿಜೆಪಿ, ಕಾಂಗ್ರೆಸ್ ಸದಸ್ಯರ ನಡುವೆ ವಾಕ್ಸಮರ ಜೋರಾಗಿ ನಡೆಯಿತು.

ಮೋದಿ ಅವರಿಗೆ ಟ್ರಂಪ್ ಬೆಸ್ಟ್ ಫ್ರೆಂಡ್. ನಿಮ್ಮ ವಿದೇಶಾಂಗ ನೀತಿ ಏನಾಯ್ತು? ನಿಮಗೆ ಯೋಗ್ಯತೆ ಇಲ್ಲ. ಎಸ್ಮಾ ಏಕೆ ಜಾರಿ ಮಾಡಿದ್ದೀರಾ? ಎಂದು ಸಚಿವ ಪ್ರಿಯಾಂಕ್ ಖರ್ಗೆ ಕಿಡಿಕಾರಿದರು. ಇದೇ ವೇಳೆ ಸಿದ್ದರಾಮಯ್ಯ ಮಧ್ಯಪ್ರವೇಶ ಮಾಡಿ ಗರಂ ಆದರು. ಕೇಂದ್ರ ಸರ್ಕಾರ ಅಂದ ತಕ್ಷಣ ಎದ್ದು ನಿಂತುಕೊಂಡರೆ ಹೇಗೆ? ಗ್ಯಾಸ್ ಸಿಲಿಂಡರ್ ಸಪ್ಲೈ ಮಾಡೋರು ಕೇಂದ್ರ ಸರ್ಕಾರ ಅಲ್ಲವೇ ಎಂದು ಕಿಡಿಕಾರಿದರು.

ಆಗ ಬಿಜೆಪಿ ಶಾಸಕ ಸುನಿಲ್ ಕುಮಾರ್ ತಿರುಗೇಟು ನೀಡಿದರು. ಯುದ್ಧದ ಕಾರಣಕ್ಕೆ ಆಗಿರುವ ಸಮಸ್ಯೆ ಎಲ್ಲ ಕಡೆಗಳಲ್ಲೂ ಇದೇ ಸಮಸ್ಯೆ ಆಗಿದೆ. ನೀವು ಎಲ್ಲಾ ವಿಚಾರಕ್ಕೂ ರಾಜಕಾರಣ ಮಾಡಿದರೆ ಹೇಗೆ? ಈ ಸರ್ಕಾರಕ್ಕೆ ಯೋಗ್ಯತೆ ಇಲ್ಲ. ಸರ್ವರ್ ಸಮಸ್ಯೆ ಸರಿ ಮಾಡಿಲ್ಲ ಎಂದು ಕಿಡಿಕಾರಿದರು.

ಶಾಸಕ ಸುನಿಲ್ ಕುಮಾರ್ ವಿರುದ್ಧ ಸಿಎಂ ಸಿದ್ದರಾಮಯ್ಯ ಆಕ್ರೋಶ ವ್ಯಕ್ತಪಡಿಸಿದರು. ನಿಮಗೆ ಯೋಗ್ಯತೆ ಪುಟ 2ಕ್ಕೆ

# ಗೃಹಬಳಕೆ ಸಿಲಿಂಡರ್ ಸಮಸ್ಯೆ ಇಲ್ಲ

## ಅನಿಲ ಪೂರೈಕೆ ಸಂಸ್ಥೆಗಳ ಜೊತೆ ಸಚಿವ ಕೆ.ಎಚ್.ಮುನಿಯಪ್ಪ ಸಭೆ

**ಬೆಂಗಳೂರು:** ರಾಜ್ಯದಲ್ಲಿ ಗೃಹಬಳಕೆ ಗ್ಯಾಸ್ ಸಿಲಿಂಡರ್ ಸಮಸ್ಯೆ ಇಲ್ಲ. ಗ್ರಾಹಕರು ಯಾವುದೇ ಆತಂಕಕ್ಕೆ ಒಳಗಾಗಬಾರದು ಎಂದು ಆಹಾರ ಸಚಿವ ಕೆ.ಎಚ್.ಮುನಿಯಪ್ಪ ಭರವಸೆ ನೀಡಿದರು.

ನಗರದ ಆಹಾರ ಭವನದಲ್ಲಿ ಬುಧವಾರ ಅನಿಲ ಪೂರೈಕೆ ಎಚ್‌ಪಿ. ಇಂಡೇನ್, ಭಾರತ್ ಗ್ಯಾಸ್ ಸಂಸ್ಥೆಗಳ ಅಧಿಕಾರಿಗಳೊಂದಿಗೆ ಸಭೆ ಬಳಿಕ ಮಾತನಾಡಿದ ಸಚಿವರು, ಅರಬ್ ರಾಷ್ಟ್ರಗಳಾದ ಯುಎಇ, ಗಲ್ಫ್ ರಷ್ಯಾದ ದೇಶಗಳಿಂದ ನಮ್ಮ ದೇಶಕ್ಕೆ ಅನಿಲ ಉತ್ಪನ್ನಗಳನ್ನು ನಾವು ಆಮದು ಮಾಡಿಕೊಳ್ಳುತ್ತಿದ್ದು, ಅಂತಾರಾಷ್ಟ್ರೀಯ ಮಟ್ಟದಲ್ಲಿ ಯುದ್ಧದ ಕಾರಣದಿಂದ ಅನಿಲದ ವೆಸೆಲ್ (ಶಿಪ್ ಗಳಿಗೆ) ಹಾನಿ ಉಂಟಾದ ಹಿನ್ನಲೆಯಲ್ಲಿ ನಮಗೆ ಅನಿಲ ಸಮಸ್ಯೆ ಉಂಟಾಗಿದೆ ಎಂದು ಸಚಿವರು ಹೇಳಿದರು.


ಸಾಮಾನ್ಯವಾಗಿ ಜನರು ಉಪಯೋಗಿಸುವ ಡೊಮೆಸ್ಟಿಕ್ ಗ್ಯಾಸ್ ಮತ್ತು ಕಮರ್ಷಿಯಲ್ ಗ್ಯಾಸ್ ಬಗ್ಗೆ ನಾವು ಚರ್ಚೆ ಮಾಡಿದ್ದೇವೆ. ಸುಮಾರು 1000 ಮೆಟ್ರಿಕ್ ಟನ್ ಅಂದರೆ ಒಂದು ದಿನಕ್ಕೆ ಸುಮಾರು 50,000 ಕಮರ್ಷಿಯಲ್ ಸಿಲಿಂಡರ್ (19ಕೆಜಿ) ಬೇಕಾಗುತ್ತದೆ. ಡೊಮೆಸ್ಟಿಕ್ ಬಳಕೆಗೆ ಸುಮಾರು 5,000 ಮೆಟ್ರಿಕ್ ಟನ್ ಅಂದರೆ ದಿನಕ್ಕೆ ಸುಮಾರು 3,50,000 ಸಿಲಿಂಡರ್ (14.2 ಕೆಜಿ) ಬೇಕಾಗುತ್ತದೆ. ಇದು ಕರ್ನಾಟಕ ರಾಜ್ಯದ ಪ್ರತಿ ದಿನದ ಅವಶ್ಯಕತೆಯಾಗಿದೆ ಎಂದು ವಿವರಿಸಿದರು.



ಜನರು ಆತಂಕ ಪಡಬೇಕಾಗಿಲ್ಲ. ಕೇಂದ್ರ ಸರ್ಕಾರದ ಸೂಚನೆಯಂತೆ ಒಂದು ಕುಟುಂಬದ ಬಳಕೆಗೆ 25 ದಿನಕ್ಕೆ ಒಂದು ಸಿಲಿಂಡರ್ ನೀಡಲಾಗುತ್ತದೆ. ಹಳ್ಳಿಗಳಾಗಲಿ, ನಗರದಲ್ಲಿರಲಿ ಜನರು ಮಿತವಾಗಿ ಗ್ಯಾಸ್ ಅನ್ನು ಉಪಯೋಗಿಸಬೇಕು. ತೀರಾ ಅವಶ್ಯಕತೆ ಇದ್ದದ್ದನ್ನು ಮಾತ್ರ ಬಳಸಬೇಕು. ಆತಂಕಪಟ್ಟು ಗ್ರಾಹಕರು ಹೆಚ್ಚು ಹೆಚ್ಚು ಸಿಲಿಂಡರ್ ಪುಟ 2ಕ್ಕೆ

## ಮದುವೆಗಳಿಗೂ ಗ್ಯಾಸ್ ಕಂಟಕ

**ಬೆಂಗಳೂರು:** ಕಲ್ಯಾಣ ಮಂಟಪಗಳಿಗೂ ಈಗ ಗ್ಯಾಸ್ ಟ್ರಬಲ್ ಆಗಿದೆ. ಮದುವೆ ಮನೆಯವರೇ ಗ್ಯಾಸ್ ಸಿಲಿಂಡರ್ ತರಬೇಕೆಂದು ಕಲ್ಯಾಣ ಮಂಟಪಗಳು ಹೇಳುತ್ತಿವೆ. ಹೀಗಾಗಿ ಮದುವೆಗಳಿಗೆ ಗ್ಯಾಸ್ ಕಂಟಕವಾಗಿದೆ.



ಕಲ್ಯಾಣ ಮಂಟಪಗಳಿಗೆ ವಾಣಿಜ್ಯ ಗ್ಯಾಸ್ ಸಿಗುತ್ತಿಲ್ಲ ಹೀಗಾಗಿ ಮದುವೆ ಬುಕ್ಕಿಂಗ್ ಮಾಡಿದ ವಧು/ ವರನ ಕಡೆಯವರಿಗೆ ಸಿಲಿಂಡರ್ ತರುವಂತೆ ಕಲ್ಯಾಣ ಮಂಟಪಗಳ ಸಿಬ್ಬಂದಿ ಸೂಚಿಸುತ್ತಿದ್ದಾರೆ. ಶುಭ ಕಾರ್ಯಕ್ರಮಗಳಿಗೆ ಕಲ್ಯಾಣ ಮಂಟಪಗಳೇ ವಾಣಿಜ್ಯ ಸಿಲಿಂಡರ್‌ಗಳನ್ನು ನೀಡುತ್ತಿದ್ದವು. ಆದರೆ ಈಗ ಸಿಲಿಂಡರ್ ನೀಡಲು ಸಾಧ್ಯ ವಿಲ್ಲ ಎಂದು ಹೇಳಿದ್ದರಿಂದ ಮದುವೆ ಕಾರ್ಯ ಕ್ರಮಗಳಿಗೆ ಬುಕ್ಕಿಂಗ್ ಮಾಡಿದವರು ಪರದಾ ಡುತ್ತಿದ್ದಾರೆ. ವಾಣಿಜ್ಯ ಸಿಲಿಂಡರ್‌ಗಳ ಲಭ್ಯತೆ ಕಡಿಮೆಯಾದ ಕಾರಣ ಹಲವು ಹೋಟೆಲ್‌ಗಳು ಮೆನು ಬದಲಾವಣೆ ಮಾಡಿಕೊಂಡಿವೆ.

## ಆತಂಕದಿಂದ ಗೃಹಬಳಕೆ ಸಿಲಿಂಡರ್ ಬೇಡಿಕೆ ಹೆಚ್ಚಳ

**ಬೆಂಗಳೂರು:** ಗೃಹಬಳಕೆ ಗ್ಯಾಸ್ ಸಿಲಿಂಡರ್ ಸಹ ಕೊರತೆ ಉಂಟಾಗಿದೆ. ಹಲವು ಗ್ರಾಹಕರು ಬುಕಿಂಗ್‌ಗೆ ಯತ್ನಿಸಿದರೂ ಬುಕಿಂಗ್ ಆಗುತ್ತಿಲ್ಲ. ಬುಕಿಂಗ್ ನಂಬರ್ ಸ್ವಿಚ್ ಆಫ್ ಆಗಿದೆ. ಹೀಗಾಗಿ ಗ್ರಾಹಕರು ತೀವ್ರ ಆತಂಕಗೊಂಡಿದ್ದಾರೆ.



ಗೃಹಬಳಕೆ ಎಲ್‌ಪಿಜಿ ಸಿಲಿಂಡರ್‌ಗಳ ಪೂರೈಕೆಯಲ್ಲಿ ಯಾವುದೇ ಅಡಚಣೆ ಇಲ್ಲ. ಪ್ರತಿದಿನ ನಮಗೆ ಲೋಡ್‌ಗಳು ಬರುತ್ತಿವೆ. ಪೂರೈಕೆಯಲ್ಲಿ ಯಾವುದೇ ಅಡಚಣೆ ಇಲ್ಲ. ಆದರೆ, ಸಾಕಷ್ಟು ಸ್ಟಾಕ್ ಇದೆಯೇ ಎಂದು ವಿಚಾರಿಸಲು ಗ್ರಾಹಕರಿಂದ ನಮಗೆ ಹಲವಾರು ಪ್ಯಾನಿಕ್ ಕರೆಗಳು ಬರುತ್ತಿವೆ. ಬುಕಿಂಗ್‌ಗಾಗಿ ಕರೆಗಳು ಸಹ ಹೆಚ್ಚಿವೆ ಎಂದು ಗ್ಯಾಸ್ ಏಜೆನ್ಸಿ ಸಿಬ್ಬಂದಿ ತಿಳಿಸಿದ್ದಾರೆ. ಯಾರೂ ಭಯಪಡುವ ಅಗತ್ಯವಿಲ್ಲ ಎಂದು ಅವರು ಗ್ರಾಹಕರಿಗೆ ಭರವಸೆ ನೀಡಿದ್ದಾರೆ. ಪಶ್ಚಿಮ ಏಷ್ಯಾ ಸಂಘರ್ಷ ಹೆಚ್ಚುತ್ತಿರುವ ಕಾರಣ ಪೂರೈಕೆಯಲ್ಲಿ ಅಡ್ಡಿ ಉಂಟಾಗಬಹುದೆಂಬ ಭಯದಿಂದ ಅನೇಕ ಗ್ರಾಹಕರು ಮುಂಚಿತವಾಗಿಯೇ ಗ್ಯಾಸ್ ಬುಕಿಂಗ್ ಮಾಡುತ್ತಿದ್ದಾರೆ. ತುರ್ತು ಆಧಾರದ ಮೇಲೆ ತಲುಪಿಸುತ್ತೇವೆ ಎಂದು ಹೇಳಿದರು.

## ರಾಜ್ಯದಲ್ಲಿ ಕುಟುಂಬಕ್ಕೆ ತಿಂಗಳಿಗೆ 1 ಸಿಲಿಂಡರ್

**ಬೆಂಗಳೂರು:** ರಾಜ್ಯದಲ್ಲಿ ಒಂದು ಕುಟುಂಬಕ್ಕೆ ತಿಂಗಳಿಗೆ ಒಂದು ಸಿಲಿಂಡರ್ ನೀಡಲು ನಿರ್ಧರಿಸಲಾಗಿದೆ. ಒಬ್ಬ ಗ್ರಾಹಕ ಒಂದು ಬಾರಿ ಎಲ್‌ಪಿಜಿ ಖರೀದಿ ಮಾಡಿದ ನಂತರ ಇನ್ನೊಂದು ಎಲ್‌ಪಿಜಿ ಸಿಲಿಂಡರ್ ಖರೀದಿ ಮಾಡಲು ಒಂದು ತಿಂಗಳು ಕಾಯಬೇಕು ಎಂಬ ನಿಯಮ ಜಾರಿ ಮಾಡಲಾಗಿದೆ.

ದೇಶದಾದ್ಯಂತ ಈ ಕಾಯುವಿಕೆ ಅವಧಿ 25 ದಿನ ಎಂಬ ನಿಯಮ ವಿಧಿಸಲಾಗಿದೆ. ಆದರೆ, ರಾಜ್ಯದಲ್ಲಿ ಗ್ರಾಹಕರು ಮತ್ತೊಂದು ಸಿಲಿಂಡರ್ ಖರೀದಿಸಲು 30 ದಿನ ಕಾಯಬೇಕಿದೆ. ಅಲ್ಲದೆ, ಅವರು ಕಡ್ಡಾಯವಾಗಿ ಒಟಿಪಿಯನ್ನು ನೀಡುವಂತೆಯೂ ಸೂಚನೆ ನೀಡಲಾಗಿದೆ ಎಂದು ತೈಲೋತ್ಪನ್ನ ಕಂಪನಿಯ ಅಧಿಕಾರಿ ತಿಳಿಸಿದ್ದಾರೆ. ವಾಣಿಜ್ಯ ಸಿಲಿಂಡರ್ ಹಂಚಿಕೆ ಪ್ರಮಾಣ ಶೇ 20ರಷ್ಟು ಕಡಿಮೆಯಾಗಿದೆ. ಅದನ್ನು ಗೃಹ ಬಳಕೆಗೆ ವರ್ಗಾಯಿಸಲಾಗಿದೆ ಎಂದು ಎಚ್‌ಪಿಸಿಎಲ್ ಕಂಪನಿ ತಿಳಿಸಿದೆ.

## ಗಾಂಜಾ ಮಾರಾಟ: ಇಬ್ಬರಿಗೆ 4 ವರ್ಷ ಶಿಕ್ಷೆ

**ಮೈಸೂರು:** ಗಾಂಜಾ ಮಾರಾಟ ಮಾಡುತ್ತಿದ್ದ ಇಬ್ಬರಿಗೆ ನ್ಯಾಯಾಲಯ 4 ವರ್ಷ ಕಠಿಣ ಶಿಕ್ಷೆ ವಿಧಿಸಿದೆ. ಮಹಮದ್ ಷಬಾಜ್ ಹಾಗೂ ಫರ್ಮಾನ್ ಪಾಷಗೆ ಮೈಸೂರಿನ ಏಳನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯ ನಾಲ್ಕು ವರ್ಷಗಳ ಕಠಿಣ ಜೈಲು ಶಿಕ್ಷೆ ಹಾಗೂ 40 ಸಾವಿರ ದಂಡ ವಿಧಿಸಿ ತೀರ್ಪು ನೀಡಿದೆ.




ಬೆಂಗಳೂರು–ಮೈಸೂರು ರಸ್ತೆಯ ಅಜೀಜ್ ಸೇಠ್ ವೃತ್ತದ ಸಿದ್ದಿಖ್ ನಗರಕ್ಕೆ ಹೋಗುವ ಮರದ ಬಳಿಯಲ್ಲಿ 2023ರ ಫೆ.18ರಂದು ಸ್ಕೂಟ ರ್‌ನಲ್ಲಿ ಗಾಂಜಾ ಮಾರಾಟ ಮಾಡಲು ಬಂದಿದ್ದ ಮಹಮದ್ ಷಬಾಜ್ ಹಾಗೂ ಫರ್ಮಾನ್‌ನನ್ನು ಪೊಲೀಸರು ಬಂಧಿಸಿದ್ದರು. ಆರೋಪಿಗಳಿಂದ ಪುಟ 2ಕ್ಕೆ

## 13 ವರ್ಷದಿಂದ ಕೋಮಾ: ವ್ಯಕ್ತಿಗೆ ದಯಾಮರಣಕ್ಕೆ ಸುಪ್ರೀಂ ಅನುಮತಿ

**ನವದೆಹಲಿ:** 13 ವರ್ಷದಿಂದ ಕೋಮಾದಲ್ಲಿರುವ 32 ವರ್ಷದ ವ್ಯಕ್ತಿಯ ದಯಾಮರಣಕ್ಕೆ ಅನುಮತಿ ನೀಡಿ ಸುಪ್ರೀಂ ಕೋರ್ಟ್ ಮಹತ್ವದ ತೀರ್ಪು ನೀಡಿದೆ. ಕಳೆದ 13 ವರ್ಷಗಳಿಂದ ಕೋಮಾದಲ್ಲಿರುವ 32 ವರ್ಷದ ತನ್ನ ಮಗನಿಗೆ ದಯಾಮರಣಕ್ಕೆ ಕೋರಿ ತಂದೆ ಸಲ್ಲಿಸಿದ್ದ ಅರ್ಜಿಯ ವಿಚಾರಣೆ ನಡೆಸಿದ ಸುಪ್ರೀಂ ಕೋರ್ಟ್ ಬುಧವಾರ ತೀರ್ಪು ನೀಡಿದೆ.


ಘನತೆ ಕಾಪಾಡಿಕೊಳ್ಳುವುದರ ಜತೆಗೆ ಸೂಕ್ತ ಯೋಜನೆಯೊಂದಿಗೆ ಹರೀಶ್ ರಾಣಾ ಅವರ ವೈದ್ಯಕೀಯ ಚಿಕಿತ್ಸೆಯನ್ನು ಹಿಂಪಡೆಯಬಹುದು ಎಂದು ನ್ಯಾಯಮೂರ್ತಿಗಳಾದ ಜೆ.ಬಿ.ಪಾರ್ದೀವಾಲಾ ಮತ್ತು ಕೆ.ವಿ.ವಿಶ್ವನಾಥನ್ ಅವರ ಪೀಠವು ದೆಹಲಿಯ ಏಮ್ಸ್‌ಗೆ ನಿರ್ದೇಶನ ನೀಡಿದೆ.



2013ರಲ್ಲಿ ವಸತಿ ಕಟ್ಟಡದ ನಾಲ್ಕನೇ ಮಹಡಿಯಿಂದ ಬಿದ್ದು ತಲೆಗೆ ಪೆಟ್ಟಾಗಿ ಹರೀಶ್ ರಾಣಾ ಅವರು ಕೋಮಾಗೆ ಹೋಗಿದ್ದರು. ತಕ್ಷಣ ಅವರನ್ನು ದೆಹಲಿಯ ಏಮ್ಸ್ ದಾಖಲಿಸಲಾಗಿತ್ತು. ಹರೀಶ್ ಒಂದು ಪುಟ 2ಕ್ಕೆ

## ಹಿರಿಯ ಪತ್ರಕರ್ತ ಕೆ.ಜೆ. ಕುಮಾರ್ ನಿಧನ


**ಮೈಸೂರು:** ಮೈಸೂರಿನ ಹಿರಿಯ ಪತ್ರಕರ್ತ ಕೆ.ಜೆ.ಕುಮಾರ್ ಬುಧವಾರ ಸಂಜೆ ಹೃದಯಾಘಾತದಿಂದ ನಗರದ ಖಾಸಗಿ ಆಸ್ಪತ್ರೆಯಲ್ಲಿ ನಿಧನರಾದರು. ಅವರಿಗೆ 74 ವರ್ಷ ವಯಸ್ಸಾಗಿತ್ತು.



ಉಡುಪಿ ಜಿಲ್ಲೆ ಕೊರಂದರ ಪಾಳ್ಯದಲ್ಲಿ ರಘುರಾಮ್ ಶೆಟ್ಟಿ ಮತ್ತು ಶಾರದಾ ಅವರ ಜ್ಯೇಷ್ಠ ಪುತ್ರರಾಗಿ 1952ರ ನವೆಂಬರ್ 6 ರಂದು ಜನಿಸಿದರು. ಸುಮಾರು 56 ವರ್ಷಗಳಿಂದ ಮೈಸೂರಿನ ಪ್ರಮುಖ ಪತ್ರಿಕಾ ವಿತರಕರಾಗಿ ಹಾಗೂ ಪತ್ರಕರ್ತರಾಗಿ ಸೇವೆ ಪುಟ 2ಕ್ಕೆ

## ಸೌದೆ ಒಲೆ ಮೊರೆಹೋದ ಹೋಟೆಲ್ ಮಾಲೀಕರು

**ಬೆಂಗಳೂರು:** ಇರಾನ್ ಮತ್ತು ಇಸ್ರೇಲ್ ವಾರ್ ಎಫೆಕ್ಟ್‌ನಿಂದಾಗಿ ಸಂಪೂರ್ಣವಾಗಿ ಕಮರ್ಷಿಯಲ್ ಗ್ಯಾಸ್ ಬಂದಾಗಿದೆ. ಸಿಲಿಂಡರ್ ಸಿಗದೇ ಹೋಟೆಲ್ ಮಾಲೀಕರು ಅಕ್ಷರಶಃ ಪರದಾಡುತ್ತಿದ್ದಾರೆ. ಕೆಲವು ಹೋಟೆಲ್‌ಗಳಲ್ಲಿ ಸೌದೆ ಒಲೆ ಮೊರೆಹೋಗಿದ್ದಾರೆ.



ಗ್ಯಾಸ್ ಸಿಲಿಂಡರ್ ಬಂದ್ ಆದ ಹಿನ್ನೆಲೆ ಸಂಪೂರ್ಣವಾಗಿ ಹೋಟೆಲ್ ಮಾಲೀಕರು ಸೌದೆ ಒಲೆಗಳ ಮೊರೆ ಹೋಗಿದ್ದಾರೆ. ಸೌದೆ ಮೇಲೆಯೇ ಉಪಹಾರ, ಊಟ ತಯಾರಿಸುತ್ತಿದ್ದಾರೆ. ಗ್ಯಾಸ್ ಸಿಲಿಂಡರ್ ಸಿಗದೇ 10–15 ಕ್ವಿಂಟಾಲ್ ಸೌದೆಯನ್ನು ಹೋಟೆಲ್ ಮಾಲೀಕರು ಸ್ಟಾಕ್ ಮಾಡಿಕೊಂ ಡಿದ್ದಾರೆ. ಹೋಟೆಲ್ ಉದ್ಯಮ ಬಂದ್ ಮಾಡದೇ ಸೌದೆ ಬಳಸಿಕೊಂಡು ಉಪಹಾರ, ಊಟ ಪುಟ 2ಕ್ಕೆ

## ಟಿಕೆಟ್ ಫೈಟ್: ಮಲ್ಲಿಕಾರ್ಜುನ್–ಜಮೀರ್ ನಡುವೆ ಸಿಎಂ ಸಂಧಾನ



**ಬೆಂಗಳೂರು:** ಡಿಸಿಎಂ ಡಿ.ಕೆ.ಶಿವಕುಮಾರ್ ಆಯೋಜಿಸಿದ್ದ ಔತಣಕೂಟದಲ್ಲಿ ಸಚಿವರಾದ ಎಸ್.ಎಸ್ ಮಲ್ಲಿಕಾರ್ಜುನ್ ಮತ್ತು ಜಮೀರ್ ಅಹಮದ್ ಮಧ್ಯೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ರಾಜಿ ಸಂಧಾನ ಮಾಡಿಸಿದ್ದಾರೆ.

ಸಿದ್ದರಾಮಯ್ಯ ಅವರು ಇಬ್ಬರನ್ನೂ ಅಕ್ಕಪಕ್ಕ ಕೂರಿಸಿಕೊಂಡು ಮಾತನಾಡಿಸಿದ್ದಾರೆ. ಬಹಿರಂಗವಾಗಿ ದಾವಣಗೆರೆ ದಕ್ಷಿಣ ಕ್ಷೇತ್ರದ ಉಪಚುನಾವಣೆ ಟಿಕೆಟ್ ಹಂಚಿಕೆ ಬಗ್ಗೆ ಮಾತನಾಡದಂತೆ ಸಿಎಂ ಸೂಚಿಸಿದ್ದಾರೆ. ದಾವಣಗೆರೆ ದಕ್ಷಿಣ ಕ್ಷೇತ್ರದ ಟಿಕೆಟ್ ಅಲ್ಪಸಂಖ್ಯಾತರಿಗೆ ನೀಡಬೇಕೆಂದು ಜಮೀರ್ ಹೇಳಿದ್ದರು. ಇದಕ್ಕೆ ಸಿಟ್ಟಾದ ಎಸ್.ಎಸ್ ಮಲ್ಲಿಕಾರ್ಜುನ್ ಅವರು, ನಮ್ಮ ಕ್ಷೇತ್ರದಲ್ಲಿ ಬಂದು ಮಾತನಾಡಲು ಅವನ್ಯಾರು ಪುಟ 2ಕ್ಕೆ

# ಮಂಡ್ಯ ಅರ್ಚಕನ ಕೊಲೆ ಪ್ರಕರಣ: ಪತ್ನಿ ಸೇರಿದಂತೆ ಮೂವರ ಬಂಧನ

## ಪ್ರಿಯಕರನ ಜೊತೆ ಸೇರಿ ಅಕ್ರಮ ಸಂಬಂಧಕ್ಕೆ ಅಡ್ಡಿಯಾಗಿದ್ದ ಪತಿ ಕೊಲೆ

**ಮಂಡ್ಯ:** ಅರ್ಚಕನ ಅನುಮಾನಾಸ್ಪದ ಸಾವಿನ ಪ್ರಕರಣಕ್ಕೆ ಬಿಗ್ ಟ್ವಿಸ್ಟ್ ಸಿಕ್ಕಿದೆ. ತನ್ನ ಅಕ್ರಮ ಸಂಬಂಧಕ್ಕೆ ಅಡ್ಡಿಯಾಗುತ್ತಿದ್ದ ಪತಿಯನ್ನು ಪ್ರಿಯಕರನೊಂದಿಗೆ ಸೇರಿ ಕೊಲೆಗೈದಿದ್ದ ಪತ್ನಿ ಹಾಗೂ ಇತರ ಮೂವರನ್ನು ಪೊಲೀಸರು ಬುಧವಾರ ಬಂಧಿಸಿದ್ದಾರೆ.

ಮಂಡ್ಯ ಜಿಲ್ಲೆಯ ಮರಳಗಾಲ ಗ್ರಾಮದ ಬಳಿ ಕೊಲೆ ನಡೆದಿತ್ತು. ಮೃತರನ್ನು ಸಿದ್ದಲಿಂಗಪ್ಪ ಎಂದು ಗುರುತಿಸಲಾಗಿದೆ. ಅವರು ಸ್ಥಳೀಯ ದೇವಾಲಯದಲ್ಲಿ ಅರ್ಚಕರಾಗಿ ಕೆಲಸ ಮಾಡುತ್ತಿದ್ದರು. ಅವರನ್ನು ಹತ್ಯೆಗೈದ ಆರೋಪದಡಿ ಪತ್ನಿ ಶಾಲಿನಿ, ಆಕೆಯ ಪ್ರೇಮಿ ಹರೀಶ ಹಾಗೂ ಎಂಆರ್ ಸಂತೋಷ್ ಕುಮಾರ್, ಬಿ.ಗಣೇಶ್ ಎಂಬುವರನ್ನು ಬಂಧಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.



ಪೊಲೀಸರ ತನಿಖೆ ಪ್ರಕಾರ, ಶಾಲಿನಿ ಹಾಗೂ ಅದೇ ಗ್ರಾಮದ ಹರೀಶ್ ನಡುವೆ ಅಕ್ರಮ ಸಂಬಂಧವಿತ್ತು. ಪುಟ 2ಕ್ಕೆ

### ಅಪಘಾತದಂತೆ ತೋರಿಸಲು ಯತ್ನ

ಸಿದ್ದಲಿಂಗಪ್ಪ ಹತ್ಯೆಯ ಬಳಿಕ ಆರೋಪಿಗಳು ಮೃತದೇಹವನ್ನು ನಾಲೆಗೆ ಎಸೆದು, ಅಪಘಾತದಂತೆ ತೋರಿಸಲು ಯತ್ನಿಸಿದ್ದಾರೆ. ಸಿದ್ದಲಿಂಗಪ್ಪ ಮನೆಗೆ ವಾಪಸ್ ಆಗದ ಹಿನ್ನೆಲೆಯಲ್ಲಿ ಕುಟುಂಬಸ್ಥರು ಹುಡುಕಾಟ ಆರಂಭಿಸಿದ್ದರು. ಹುಡುಕಾಟದ ವೇಳೆ ಚಿಕ್ಕದೇವರಾಯ ಸಾಗರ ನಾಲೆ ದಡದಲ್ಲಿ ಪುಟ 2ಕ್ಕೆ

# ಪ.ಜಾತಿಗೆ ಸೇರಿಸುವಂತೆ ಮಾ.16ರಿಂದ ಮಡಿವಾಳರ ಧರಣಿ

ಎಚ್.ಡಿ.ಕೋಟೆ: ಮಡಿವಾಳ ಜನಾಂಗವನ್ನು ಪ.ಜಾತಿ(ಎಸ್.ಸಿ) ಗೆ ಸೇರಿಸುವಂತೆ ಮಾ.16ರಿಂದ ಬೆಂಗಳೂರಿನ ಫ್ರೀಡಂ ಪಾರ್ಕ್ ನಲ್ಲಿ ಶ್ರೀಬಸವ ಮಾಚಿದೇವ ಮಹಾಸ್ವಾಮಿ ಮತ್ತು ಶ್ರೀ ಮುಕ್ತಾನಂದ ಸ್ವಾಮೀಜಿ ನೇತೃತ್ವದಲ್ಲಿ ಅಹೋರಾತ್ರಿ ಧರಣಿ ಕೈಗೊಂಡಿರುವುದರಿಂದ ಎಚ್.ಡಿ.ಕೋಟೆ, ಸರಗೂರು ತಾಲೂಕಿನ ವೀರಮಡಿವಾಳ ಜನಾಂಗದವರು ಹೆಚ್ಚಿನ ಸಂಖ್ಯೆಯಲ್ಲಿ ಧರಣಿಯಲ್ಲಿ ಭಾಗವಹಿಸುವಂತೆ ಮಡಿವಾಳರ ಕ್ಷೇಮಾಭಿವೃದ್ಧಿ ಸಂಘದ ರಾಜ್ಯಾಧ್ಯಕ್ಷ ಹನುಮಂತಪ್ಪ ಆಹ್ವಾನ ನೀಡಿದ್ದ ಹಿನ್ನೆಲೆ ತಾಲೂಕಿನ ಮಡಿವಾಳ ಸಮಾಜದವರು ಬುಧವಾರ ಮಧ್ಯಾಹ್ನ ಸಭೆ ನಡೆಸಿದರು.

ಪಟ್ಟಣದ ಪ್ರವಾಸಿ ಮಂದಿರದಲ್ಲಿ ತಾಲೂಕು ವೀರ ಮಡಿವಾಳ ಸಂಘದ ಅಧ್ಯಕ್ಷ ಎಲೆಹುಂಡಿ ಚಂದ್ರ ಶೆಟ್ಟಿ ಅಧ್ಯಕ್ಷತೆಯಲ್ಲಿ ಸಮುದಾಯದ ಮುಖಂಡರ ಸಭೆ ಸೇರಿ ಮಹಿಳೆಯರು, ಪುರುಷರು ಎಂಬ ಬೇಧವಿಲ್ಲದೇ ಪ್ರತಿಯೊಬ್ಬರೂ ಧರಣಿಯಲ್ಲಿ ಪಾಲ್ಗೊಳ್ಳುವಂತೆ ನಿರ್ಣಯ ಕೈಗೊಳ್ಳಲಾಯಿತು. ಎಲೆಹುಂಡಿ ಚಂದ್ರಶೆಟ್ಟಿ ಮಾತನಾಡಿ,



ದೇಶದ 17 ರಾಜ್ಯಗಳು, 3 ಕೇಂದ್ರಾಡಳಿತ ಪ್ರದೇಶಗಳಲ್ಲಿ ನಮ್ಮ ಜನಾಂಗವನ್ನು ಪರಿಶಿಷ್ಟ ಜಾತಿಯ ಪಟ್ಟಿಗೆ ಸೇರಿಸಲಾಗಿದೆ. ಕರ್ನಾಟಕದಲ್ಲಿ ನಮ್ಮನ್ನು ಹಿಂದುಳಿದ ವರ್ಗಕ್ಕೆ ಸೇರಿಸಿ ಶೈಕ್ಷಣಿಕ, ಸಾಮಾಜಿಕವಾಗಿ ಹಾಗೂ ರಾಜಕೀಯವಾಗಿ ಮುಂದುವರೆಯದಂತೆ ಮಾಡಲಾಗಿದೆ. ನಮ್ಮ ಜನಾಂಗ ಹಿಂದುಳಿದಿರುವುದನ್ನು ಅರಿತಿದ್ದ ಮೈಸೂರಿನ ಮಹಾರಾಜರು 1921ರಲ್ಲಿ ದುಂಡುಮೇಜಿನ ಸಭೆ ನಡೆಸಿ ಪ.ಜಾತಿಗೆ ಸೇರಿಸಲು ಆದೇಶ ಮಾಡಿರುವುದೇ ನಮ್ಮ ಜನಾಂಗ ಹಿಂದುಳಿದಿ ರುವಿಕೆಯನ್ನು ತೋರುತ್ತದೆ ಎಂದು ಸ್ಮರಿಸಿದರು.

ಪರಿಶಿಷ್ಟ ಜಾತಿಗೆ ಸೇರಿಸಬೇಕೆಂಬ ಕೂಗು ಹಲವಾರು ದಶಕಗಳಿಂದ ಕೇಳಿ ಬರುತ್ತಿದೆ. ಆದರೆ, ಈ ಬಗ್ಗೆ ನಮಗೆ ಸಿಗಬೇಕಾದ ಸ್ಥಾನಮಾನವಾಗಲೀ, ನಮ್ಮ ಬೇಡಿಕೆ ಈಡೇರಿಕೆಗೆ ಇಲ್ಲಿಯವರೆಗೂ ಯಾವುದೇ ಸರ್ಕಾರಗಳು ಪ್ರಾಮಾಣಿಕ ಪ್ರಯತ್ನ ಮಾಡಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು.

ಮಾಜಿ ಅಧ್ಯಕ್ಷ ಕೆಂಪಶೆಟ್ಟಿ ಮಾತನಾಡಿ, ಪ.ಜಾತಿ(ಎಸ್.ಸಿ)ಗೆ ಸೇರಿಸುವಂತೆ ಕರ್ನಾಟಕ ರಾಜ್ಯ ಮಡಿವಾಳರ ಸಂಘವು ಸರ್ಕಾರಕ್ಕೆ ಒತ್ತಡ ಏರಿದ್ದರಿಂದ ಅಂದಿನ ಮುಖ್ಯಮಂತ್ರಿ ಬಿ.ಎಸ್ ಯಡಿಯೂರಪ್ಪ ಅವರು ಪರಿಶಿಷ್ಟರ ಜಾತಿಗೆ ಸೇರಿಸಬೇಕೆ? ಬೇಡವೇ? ಎಂಬುದನ್ನು ಕುಲಶಾಸ್ತ್ರ ಅಧ್ಯಯನ ಮತ್ತು ಸಂಶೋಧನೆ ಮಾಡಿ ವರದಿ ನೀಡುವಂತೆ ಮೈಸೂರು ವಿಶ್ವ ವಿದ್ಯಾಲಯದ ಪ್ರೊಫೆಸರ್ ಡಾ. ಅನ್ನಪೂರ್ಣ ನೇತೃತ್ವದ ಸಮಿತಿ ರಚಿಸಿದ್ದರು ಎಂದರು. 2009ರಲ್ಲಿ ರಾಜ್ಯದ 28 ಜಿಲ್ಲೆಗಳಿಗೆ ಖುದ್ದು ಭೇಟಿ ನೀಡಿ ಪರಿಶೀಲಿಸಿದ ಈ ಸಮಿತಿಯು ಜನಾಂಗದ ಮುಖಂಡರು, ವೃತ್ತಿಯಲ್ಲಿ ತೊಡಗಿಸಿ ಕೊಂಡವರು, ಮಡಿಕಟ್ಟೆಗಳು, ಕುಲಕಸಬು ಮಾಡುವವು ವರು ಇತ್ಯಾದಿ ಅನೇಕರನ್ನು ಭೇಟಿ ಮಾಡಿ, ಕುಲಶಾಸ್ತ್ರ ಅಧ್ಯಯನ ಮಾಡಿ ವರದಿ ನೀಡಿದ್ದಾರೆ ಎಂದರು.

## 2011ರಲ್ಲಿ ವರದಿ ಸಲ್ಲಿಕೆ: ಎಸ್.ಸಿಗೆ ಸೇರಿಸಲು ನಿರ್ಲಕ್ಷ್ಯ

ಸಾಮಾಜಿಕವಾಗಿ, ಶೈಕ್ಷಣಿಕವಾಗಿ, ಸಾಂಸ್ಕೃತಿವಾಗಿ ಹಾಗೂ ಆರ್ಥಿಕ, ರಾಜಕೀಯವಾಗಿ ಹಿಂದುಳಿದಿರುವ ಮಡಿವಾಳ ಜಾತಿಯನ್ನು ಪ. ಜಾತಿಗೆ ಸೇರಿಸಿ ಎನ್ನುವ ಕುಲಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವರದಿಯನ್ನು 2011ರಲ್ಲಿ ಸರ್ಕಾರಕ್ಕೆ ಸಲ್ಲಿಸಲಾಗಿದೆ. ಇಲ್ಲಿಯವರೆಗೆ ಬಂದಿರುವ ಎಲ್ಲಾ ಸರ್ಕಾರಗಳು ಪರಿಗಣಿಸಿ ಪ.ಜಾತಿಗೆ ಮಡಿವಾಳ ಸಮಾಜವನ್ನು ಸೇರ್ಪಡೆ ಮಾಡಿಲ್ಲ. ಕುಲಶಾಸ್ತ್ರ ಅಧ್ಯಯನ ವರದಿ ಕಡತವು ಸಮಾಜ ಕಲ್ಯಾಣ ಇಲಾಖೆಯಲ್ಲಿಯೇ ಖಫಆ 505 ಖಐಕ22 ಇಂದಿಗೂ ಕೊಳೆಯುತ್ತಿದೆ. ಈ ವರದಿಯನ್ನು ಈ ಕೂಡಲೇ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಪರಿಶೀಲಿಸಿ ನಮ್ಮ ಜನಾಂಗದ ಬಹು ವರ್ಷಗಳ ನಮ್ಮ ನ್ಯಾಯಯುತ ಬೇಡಿಕೆಯನ್ನು ಈಡೇರಿಸುವಂತೆ ತಾಲೂಕು ಮಡಿವಾಳ ಸಮಾಜದ ಮುಖಂಡರಾದ ರಂಗಸ್ವಾಮಿ, ಬಸವರಾಜು,ಸ್ವಾಮಿಶೆಟ್ಟಿ, ಮಹದೇವ ಶೆಟ್ಟಿ, ನಾಗಣ್ಣ, ಹೇಮಂತ್ ಕುಮಾರ್, ರಮೇಶ್ ಕೋಟೆ, ವಸಂತ್ ಕುಮಾರ್, ವಿಜಯ ಕುಮಾರ್, ಬಸವರಾಜ ಕೋಟೆ, ತಿಮ್ಮ ಶೆಟ್ಟಿ, ಮಧು, ಸಾಗರ್, ನಂದಕುಮಾರ್, ಸಂತೋಷ್ ಸೇರಿದಂತೆ ಅನೇಕರು ಸರ್ಕಾರಕ್ಕೆ ವರ್ತಮಾನ ಪತ್ರಿಕೆಯ ಮೂಲಕ ಮನವಿ ಮಾಡಿದ್ದಾರೆ.

ಮೊದಲ ಪುಟದಿಂದ

## ಸದನದಲ್ಲೂ ಗ್ಯಾಸ್ ಗದ್ದಲ

ಇಲ್ಲ, ಬೆಲೆ ಹೆಚ್ಚಳ ಮಾಡಿದವರು ನೀವು. ಎಸ್ಮಾ ಜಾರಿ ಮಾಡಿದವರು ಯಾರು? ಗ್ಯಾಸ್ ಸಮಸ್ಯೆಗೆ ಕೇಂದ್ರ ಸರ್ಕಾರವೇ ಜವಾಬ್ದಾರಿ ಎಂದು ಆಕ್ರೋಶ ಹೊರಹಾಕಿದರು.

ಇದಾದ ಬಳಿಕ ಅಶೋಕ್ ಮಾತನಾಡಿ, ಸಿಎಂ ಅವರೇ ಸ್ಟೈಕ್ ಮಾಡಿ ಅಂತಾ ಹೇಳುತ್ತಾರೆ. ಇದು ಸರೀನಾ ಎಂದು ವಾಗ್ದಾಳಿ ನಡೆಸಿದರು. ಆಗ ಸಿಎಂ ಸ್ಪಷ್ಟನೆ ನೀಡಿ ನಾನು ಸ್ಟೈಕ್ ಮಾಡಿ ಅಂತಾ ಹೇಳಿಲ್ಲ. ಆದರೆ ಹೋಟೆಲ್ ಮಾಲೀಕರು ಸ್ಟೈಕ್ ಮಾಡ್ತಾರೆ ಎಂದು ಕೇಳಿದಾಗ ಸರಿ ಇದೆ ಅಂದಿದ್ದೇನೆ. ಅವರು ಸ್ಟೈಕ್ ಮಾಡೋದು ಸರಿ ಇದೆ ಎಂದು ತಿರುಗೇಟು ನೀಡಿದರು.

## 13 ವರ್ಷದಿಂದ ಕೋಮಾ: ವ್ಯಕ್ತಿಗೆ ದಯಾಮರಣಕ್ಕೆ ಸುಪ್ರೀಂ ಅನುಮತಿ

ದಶಕಕ್ಕೂ ಹೆಚ್ಚು ಕಾಲ ಕೋಮಾದಲ್ಲಿದ್ದರು. 2025ರ ಡಿಸೆಂಬರ್ 11ರಂದು ಹರೀಶ್ ಚೇತರಿಸಿಕೊಳ್ಳುವ ಸಾಧ್ಯತೆ ತೀರಾ ಕಡಿಮೆ ಎಂದು ಏಮ್ಸ್ ವೈದ್ಯಕೀಯ ಮಂಡಳಿ ಹೇಳಿತ್ತು.

## ಗಾಂಜಾ ಮಾರಾಟ: ಇಬ್ಬರಿಗೆ 4 ವರ್ಷ ಶಿಕ್ಷೆ

40 ಸಾವಿರ ಮೌಲ್ಯದ 1 ಕೆಜಿ 560 ಗ್ರಾಂ. ಗಾಂಜಾ ವಶಕ್ಕೆ ಪಡೆದು ನ್ಯಾಯಾಲಯಕ್ಕೆ ದೋಷಾ ರೋಪ ಪಟ್ಟಿ ಸಲ್ಲಿಸಿದ್ದರು. ವಿಚಾರಣೆ ನಡೆಸಿದ ನ್ಯಾಯಾಧೀಶ ಎಂ.ಹೇಮಂತ್ ಶಿಕ್ಷೆ ವಿಧಿಸಿದ್ದಾರೆ. ಸರ್ಕಾರಿ ಅಭಿಯೋಜಕಿ ಎಸ್.ಬಿ. ವಿಜಯಲಕ್ಷ್ಮೀ ವಾದ ಮಂಡಿಸಿದ್ದರು.

## ಟಿಕೆಟ್ ಫೈಟ್: ಮಲ್ಲಿಕಾರ್ಜುನ್–ಜಮೀರ್ ನಡುವೆ ಸಿಎಂ ಸಂಧಾನ

ಎಂದು ಪ್ರಶ್ನಿಸಿ ತರಾಟೆಗೆ ತೆಗೆದುಕೊಂಡಿದ್ದರು.

ಡಿ.ಕೆ.ಶಿವಕುಮಾರ್ ಕೆಪಿಸಿಸಿ ಅಧ್ಯಕ್ಷರಾಗಿ 6 ವರ್ಷ ತುಂಬಿದ ಹಿನ್ನೆಲೆಯಲ್ಲಿ ಮಂಗಳವಾರ ರಾತ್ರಿ ಪಕ್ಷದ ಶಾಸಕರಿಗೆ ಭೋಜನಕೂಟ ಆಯೋಜಿಸಿದ್ದರು. ಸಿಎಂ ಸಿದ್ದರಾಮಯ್ಯ ಸೇರಿದಂತೆ ಸಚಿವರು ಹಾಗೂ ಶಾಸಕರು ಇಂದಿನ ಭೋಜನ ಕೂಟದಲ್ಲಿ ಭಾಗಿಯಾಗಿದ್ದರು. ಬಿಜೆಪಿ ಶಾಸಕರಾದ ಎಸ್‌ಟಿ ಸೋಮಶೇಖರ್, ಶಿವರಾಮ್ ಹೆಬ್ಬಾರ್ ಡಿನ್ನರ್ ಪಾರ್ಟಿಗೆ ಹಾಜರಾಗಿದ್ದರು.

## ಅಪಘಾತದಂತೆ ತೋರಿಸಲು ಯತ್ನ

ಸಿದ್ದಲಿಂಗಪ್ಪನ ಚಪ್ಪಲಿ ಹಾಗೂ ಬಟ್ಟೆಗಳು ಪತ್ತೆಯಾಗಿದ್ದವು. ನಂತರ ನಾಲೆಯಲ್ಲೇ ಮೃತದೇಹ ಹಾಗೂ ಬೈಕ್ ಪತ್ತೆಯಾಯಿತು. ಪೊಲೀಸರು ಸ್ಥಳ ಪರಿಶೀಲನೆ ನಡೆಸಿದಾಗ ಚಪ್ಪಲಿ ಸಿಕ್ಕಿದ್ದ ಸ್ಥಳದಲ್ಲಿ ರಕ್ತದ ಕಲೆಗಳು ಕಂಡುಬಂದಿದ್ದವು. ಇದರಿಂದ ಪ್ರಕರಣದ ಮೇಲೆ ಅನುಮಾನ ಮೂಡಿದ ಹಿನ್ನೆಲೆಯಲ್ಲಿ ಪೊಲೀಸರು ಶಾಲಿನಿ ಹಾಗೂ ಹರೀಶ್ ಅವರನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಿದರು. ತೀವ್ರ ವಿಚಾರಣೆಯ ವೇಳೆ ಕೊಲೆ ಸಂಚಿನ ಸಂಪೂರ್ಣ ರಹಸ್ಯ ಬಯಲಾಗಿದೆ. ನಂತರ ಪತ್ನಿ ಶಾಲಿನಿ, ಪ್ರಿಯಕರ ಹರೀಶ್ ಹಾಗೂ ಇತರರನ್ನು ಬಂಧಿಸಲಾಗಿದೆ.

## ಪತ್ರಕರ್ತ ಕೆ.ಜೆ. ಕುಮಾರ್ ನಿಧನ

ಸಲ್ಲಿಸುತ್ತಿದ್ದರು. 1969ರಲ್ಲಿ ಸೋದರ ಮಾವ ವಿಧಾನ ಪರಿಷತ್ ಮಾಜಿ ಸದಸ್ಯ ಹಾಗೂ ಸ್ವಾತಂತ್ರ ಹೋರಾಟಗಾರ ಎ. ರಾಮಣ್ಣ ಸಂಪಾದಕತ್ವದ "ವಿಜಯ" ದಿನ ಪತ್ರಿಕೆಯಲ್ಲಿ ಪತ್ರಕರ್ತರಾಗಿ ವೃತ್ತಿ ಬದುಕು ಆರಂಭಿಸಿದರು. ನಂತರ ವಿಜಯ ದಿನ ಪತ್ರಿಕೆ ಪ್ರಕಾಶಕ – ಮುದ್ರಕರಾಗಿದ್ದರು.

ನಂತರ ಅವರು ಸಿನಿಮಾ ಪತ್ರಕರ್ತರಾಗಿ ಸುಧಾ ವಾರ ಪತ್ರಿಕೆ, ವಿಜಯ ಚಿತ್ರ ಸಿನಿಮಾ ಮಾಸ ಪತ್ರಿಕೆಗಳಲ್ಲಿ ಸೇವೆ ಸಲ್ಲಿಸಿದ ನಂತರ, 1978ರಿಂದ ರೂಪಾತಾರ ಸಿನಿಮಾ ಮಾಸ ಪತ್ರಿಕೆಗೆ ಮೂರೂ ದಶಕಗಳ ಕಾಲ ಸೇವೆ ಸಲ್ಲಿಸಿದರು. 1993ರಲ್ಲಿ ಉದಯವಾಣಿ ದಿನ ಪತ್ರಿಕೆ ಬೆಂಗಳೂರು ಆವೃತ್ತಿ ಆರಂಭವಾದಾಗ ಮೈಸೂರಿನ ಪ್ರತಿನಿಧಿಯಾಗಿ ಸುಮಾರು ಒಂದೂವರೆ ದಶಕಗಳ ಕಾಲ ಸೇವೆ ಸಲ್ಲಿಸಿದರು. ಕಳೆದ ಒಂದೂವರೆ ದಶಕಗಳಿಂದ ಹೊಸ ದಿಗಂತ ದಿನ ಪತ್ರಿಕೆ ಸಿನಿಮಾ ವಿಭಾಗ ನೋಡಿ ಕೊಳ್ಳುತ್ತಿದ್ದರು. ಪತ್ರಿಕಾ ಕ್ಷೇತ್ರವಲ್ಲದೆ ಹೋಟೆಲ್ ಉದ್ಯಮದಲ್ಲೂ ತೊಡಗಿಸಿಕೊಂಡಿದ್ದ ಅವರು ಮೈಸೂರಿನ ಸರಸ್ವತಿ ಪುರಂನಲ್ಲಿ ಕುಠೀರ ಮನೆ ಎಂಬ ಹೋಟೆಲ್ ಸ್ಥಾಪಿಸಿದ್ದರು.

ಕನ್ನಡ ಚಿತ್ರೋದ್ಯಮದಲ್ಲಿ ಪತ್ರಕರ್ತರಾಗಿ ಹೆಸರಾಗಿದ್ದ ಕೆ. ಜೆ. ಕುಮಾರ್, ಕನ್ನಡ ಚಿತ್ರ ರಂಗದ ದಿಗ್ಗಜರಾದ ಡಾ.ರಾಜ್ ಕುಮಾರ್, ಡಾ.ವಿಷ್ಣುವರ್ಧನ್, ಅಂಬರೀಷ್, ರಜನಿ ಕಾಂತ್, ಶಶಿಕುಮಾರ್, ನಿರ್ಮಾಪಕರಾದ ದ್ವಾರಕೀಶ್, ವೀರಸ್ವಾಮಿ, ನಿರ್ದೇಶಕರಾದ ಪುಟ್ಟಣ್ಣ ಕಣಗಾಲ್, ಸಿದ್ದಲಿಂಗಯ್ಯ, ಎಸ್.ವಿ. ರಾಜೇಂದ್ರ ಸಿಂಗ್ ಬಾಬು ಅವರೊಂದಿಗೆ ಆತ್ಮೀಯ ಒಡನಾಟ ಇಟ್ಟುಕೊಂಡಿದ್ದರು. ಶ್ರೀಯುತರು ಪತ್ನಿ ಉಷಾ, ಪುತ್ರಿ ಸುನಯ ಶೆಟ್ಟಿ, ಸೋದರಿ ನಗರ ಪಾಲಿಕೆ ಮಾಜಿ ಸದಸ್ಯೆ ಪ್ರಮೀಳಾ ಪ್ರಕಾಶ್ ಸೇರಿದಂತೆ ಅಪಾರ ಬಂಧು ಮಿತ್ರರನ್ನು ಅಗಲಿದ್ದಾರೆ. ನಾಳೆ(ಗುರುವಾರ) ಮಧ್ಯಾಹ್ನದ ನಂತರ ಮೈಸೂರಿನ ಚಾಮುಂಡಿ ಬೆಟ್ಟದ ತಪ್ಪಲಿನಲ್ಲಿರುವ ಹರಿಶ್ಚಂದ್ರ ಘಾಟ್ ನಲ್ಲಿ ಅಂತ್ಯ ಸಂಸ್ಕಾರ ನೆರವೇರಲಿದೆ ಎಂದು ಕುಟುಂಬದವರು ತಿಳಿಸಿದ್ದಾರೆ.

**ನನ್ನ ಬಹುಕಾಲದ ಸ್ನೇಹಿತರು ಹಾಗೂ ಖ್ಯಾತ ಸಿನಿಮಾ ಪತ್ರಕರ್ತರಾದ ಕೆ.ಜೆ.ಕುಮಾರ್ ಅವರು ನಿಧನರಾದ ಸುದ್ದಿ ತಿಳಿದು ನನಗೆ ಅತೀವ ನೋವುಂಟಾಗುದೆ. ಖ್ಯಾತ ಚಿತ್ರನಟರ ನಿಕಟವರ್ತಿಯಾಗಿದ್ದ ಕುಮಾರ್ ಅವರು, ಚಲನಚಿತ್ರಗಳ ಅತ್ಯುತ್ತಮ ವಿಶ್ಲೇಷಣೆ, ಇತಿಹಾಸ ಮತ್ತು ಫೀಚರ್ ಲೇಖನಗಳಿಗೆ ಹೆಸರುವಾಸಿಯಾಗಿದ್ದರು.'ವಿಜಯ' ಪತ್ರಿಕೆಯ ಸಂಪಾದಕರಾಗಿ ಪತ್ರಿಕೋದ್ಯಮದಲ್ಲಿ ಸುದೀರ್ಘಕಾಲ ಅನುಭವ ಹೊಂದಿದ್ದ ಅವರು, ಯುವ ಪತ್ರಕರ್ತರಿಗೆ ಅವಕಾಶ ನೀಡಿ ಪ್ರೋತ್ಸಾಹಿಸುತ್ತಿದ್ದರು. ಅವರ ಕುಟುಂಬಕ್ಕೆ ಅಗಲಿಕೆಯ ದುಃಖವನ್ನು ಭರಿಸುವ ಶಕ್ತಿ ನೀಡಲಿ ಹಾಗೂ ಅವರ ಆತ್ಮಕ್ಕ ಚಿರಶಾಂತಿ ದೊರಕಲೆಂದು ಎಂದು ಪ್ರಾರ್ಥಿಸುತ್ತೇನೆ.**

**ಕೆ.ಶಿವಕುಮಾರ್** ವಿಧಾನ ಪರಿಷತ್ ಸದಸ್ಯರು.

# ಪ್ರಶಸ್ತಿಯಿಂದ ಹೆಚ್ಚಿನ ಹುರುಪು

### ಡಿಸಿ ಜಿ.ಲಕ್ಷ್ಮೀಕಾಂತ ರೆಡ್ಡಿ ಹೇಳಿಕೆ | ಸರ್ವೋತ್ತಮ ಸೇವಾ ಪ್ರಶಸ್ತಿ ಪ್ರದಾನ



ಮೈಸೂರು: ಖಾಸಗಿ ಸಂಸ್ಥೆಗಳಲ್ಲಿ ಉತ್ತಮವಾಗಿ ಕೆಲಸ ನಿರ್ವಹಿಸುವವರಿಗೆ ಬೋನಸ್ ಸೇರಿದಂತೆ ವಿವಿಧ ಸೌಲಭ್ಯ ನೀಡಲಾಗುತ್ತದೆ. ಸರ್ಕಾರಿ ಕೆಲಸದಲ್ಲಿ ಉತ್ತಮವಾಗಿ ಕಾರ್ಯನಿರ್ವಹಿಸುವವರಿಗೆ ಸರ್ವೋತ್ತಮ ಸೇವಾ ಪ್ರಶಸ್ತಿ ನೀಡಿ ಗೌರವಿಸಲಾಗುವುದು ಎಂದು ಜಿಲ್ಲಾಧಿಕಾರಿ ಜಿ.ಲಕ್ಷ್ಮೀಕಾಂತ ರೆಡ್ಡಿ ತಿಳಿಸಿದರು.

ಜಿಲ್ಲಾಡಳಿತ, ಸರ್ಕಾರಿ ನೌಕರರ ಸಂಘದ ಸಂಯುಕ್ತಾಶ್ರಯದಲ್ಲಿ ಕಿರು ರಂಗಮಂದಿರದಲ್ಲಿ ಆಯೋಜಿಸಲಾಗಿದ್ದ 2023 ನೇ ಸಾಲಿನ ಸರ್ವೋತ್ತಮ ಸೇವಾ ಪ್ರಶಸ್ತಿ ಪ್ರದಾನ ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿದರು. ಸರ್ಕಾರಿ ಕೆಲಸದಲ್ಲಿ ಪ್ರಶಸ್ತಿ ನೀಡುವುದರಿಂದ ನೌಕರರಲ್ಲಿ ಕೆಲಸ ನಿರ್ವಹಣೆಗೆ ಇನ್ನೂ ಹೆಚ್ಚಿನ ಹುರುಪು ತುಂಬಿದಂತಾಗುತ್ತದೆ. ಕಲಾಮಾನ ಬದಲಾವಣೆಯಾದಂತೆ ಸರ್ಕಾರಿ ಕೆಲಸದಲ್ಲಿ ಸವಾಲುಗಳು ಸಹ ಹೆಚ್ಚಾಗುತ್ತಿದೆ. ಕೆಲಸದಲ್ಲಿ ನಿಖರತೆಗಾಗಿ ಕೌಶಲ್ಯಗಳನ್ನು ರೂಡಿಸಿಕೊಳ್ಳಬೇಕು. ಪ್ರಶಸ್ತಿ ಪಡೆದ ನೌಕರರು ತಮ್ಮ ಸಹೋದ್ಯೋಗಿಗಳಿಗೆ ಮಾದರಿಯಾಗಿ ಅವರಿಗೂ ಪ್ರಶಸ್ತಿ ಪಡೆಯುವಂತೆ ಪ್ರೇರಣೆ ನೀಡಬೇಕು ಎಂದರು.

ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಯುಕೇಶ್ ಕುಮಾರ್ ಮಾತನಾಡಿ ಒಂದು ರಾಜ್ಯ ಅಥವಾ ರಾಷ್ಟ್ರದ ಅಭಿವೃದ್ಧಿ ಸಾಧಿಸಲು ಎಲ್ಲ ಇಲಾಖೆಯ ನೌಕರರ ವರ್ಗದ ಪಾತ್ರ ಪ್ರಮುಖವಾಗಿರುತ್ತದೆ. ಅಂತಹ ನೌಕರರನ್ನು ಗುರುತಿಸಿ ಅವರ ಕಠಿಣ ಪರಿಶ್ರಮ, ದಕ್ಷತೆ, ಪ್ರಾಮಾಣಿಕತೆ, ಕ್ರಿಯಾಶೀಲತೆಯನೆಲ್ಲ ಪರಿಗಣಿಸಿ ಅದನ್ನು ನಾವು ಗೌರವಿಸಬೇಕು. ಜಿಲ್ಲೆಯಲ್ಲಿ ಮಾನ್ಯ ಮುಖ್ಯಮಂತ್ರಿ ಸೇರಿ ಗಣ್ಯರು ಭೇಟಿ ನೀಡುವುದು ಸಾಮಾನ್ಯ ಜಿಲ್ಲೆಯಲ್ಲಿ ಅಧಿಕಾರಿಗಳು ಹಾಗೂ ಸಿಬ್ಬಂದಿಗಳು ಸದಾ ಎಚ್ಚರಿಕೆಯಿಂದ ಲೋಪವಾಗದಂತೆ ಕಾರ್ಯನಿರ್ವಹಿಸುತ್ತಿರುವುದು ಶ್ಲಾಘನೀಯ ಎಂದರು.

ಕರ್ನಾಟಕ ರಾಜ್ಯ ಸರ್ಕಾರಿ ನೌಕರ ಸಂಘದ ಜಿಲ್ಲಾಧ್ಯಕ್ಷ ಡಾ.ಸಿ.ಪಿ.ಅರುಣ್ ಕುಮಾರ್ ಮಾತನಾಡಿದರು. ಪ್ರಶಸ್ತಿ ವಿಜೇತರು:ಕಾವೇರಿ ನೀರಾವರಿ ನಿಗಮದ ಸಹಾಯಕ ಕಾರ್ಯಪಾಲಕ ಅಭಿಯಂತರ ಬಿ.ಜೆ.ಗುರುರಾಜ್, ಕಾರ್ಮಿಕ ಇಲಾಖೆಯ ಸಹಾಯಕ ಕಾರ್ಮಿಕ ಆಯುಕ್ತೆ ನಾಜಿಯಾ ಸುಲ್ತಾನ, ಜಿಲ್ಲಾ ಖಜಾನೆಯ ಜಂಟಿ ನಿರ್ದೇಶಕಿ ಎನ್.ಯಶೋದ, ಆರೋಗ್ಯ ಇಲಾಖೆಯ ಹಿರಿಯ ಶುಶ್ರೂಷಕಿ ಎಂ.ಎಂ.ರತಿ, ಆರೋಗ್ಯ ಇಲಾಖೆಯ ಡಿವಿಬಿಡಿಸಿಓ ಅಧಿಕಾರಿ ಡಾ.ಎಸ್.ಚಿದಂಬರ, ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆಯ ಸಿಸ್ಟಮ್ ಅನಾಲಿಸ್ಟ್/ಎನ್.ಎಸ್.ಎಸ್ ಆಫೀಸರ್ ಎಂ.ಎಸ್.ಮಧುಸೂದನ್, ಆಹಾರ ಇಲಾಖೆಯ ಜಂಟಿ ನಿರ್ದೇಶಕಿ ಕುಮದಾ ಶರತ್, ಕೃಷಿ ಇಲಾಖೆಯ ಜಂಟಿ ನಿರ್ದೇಶಕ ಚಂದ್ರಶೇಖರ್, ಆರೋಗ್ಯ ಇಲಾಖೆಯ ಶುಶ್ರೂಷಕಿ ರೂಪ, ತೋಟಗಾರಿಕೆ ಇಲಾಖೆಯ ಉಪನಿರ್ದೇಶಕ ರುದ್ರೇಶ್ ಅವರಿಗೆ ಸರ್ವೋತ್ತಮ ಸೇವಾ ಪ್ರಶಸ್ತಿ ಹಾಗೂ 25000 ನಗದು ನೀಡಿ ಗೌರವಿಸಲಾಯಿತು. ಕಾರ್ಯಕ್ರಮದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಎಂ.ಡಿ.ಸುದರ್ಶನ, ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ವಿಭಾಗೀಯ ಉಪಾಧ್ಯಕ್ಷ ಮಾಲಂಗಿ ಸುರೇಶ್, ಮೈಸೂರು ಜಿಲ್ಲಾ ಶಾಖೆಯ ಕಾರ್ಯಾಧ್ಯಕ್ಷ ಪಿ. ರಾಘವೇಂದ್ರ , ರಾಜ್ಯ ಕಾರ್ಯದರ್ಶಿ ಗಣೇಶ್, ಉಪಾಧ್ಯಕ್ಷ ವಿಶ್ವನಾಥ್, ಪುಷ್ಪವತಿ ಉಪಸ್ಥಿತರಿದ್ದರು.

ಮೊದಲ ಪುಟದಿಂದ

## ಸಿಲಿಂಡರ್ ಸಮಸ್ಯೆ ಇಲ್ಲ

ಬುಕ್ ಮಾಡಬಾರದು. ಇಂತಹ ಕಠಿಣ ಪರಿಸ್ಥಿತಿಯಲ್ಲಿ ಸರ್ಕಾರ ಮತ್ತು ಆಯಿಲ್ ಕಂಪನಿಗಳ ಜೊತೆ ಸಹಕರಿಸಬೇಕೆಂದು ಮನವಿ ಮಾಡಿದರು.

ಭಾರತದಲ್ಲಿ ಸುಮಾರು ಶೇ.30ರಷ್ಟು ಮಾತ್ರ ಉತ್ಪಾದನೆ ಇದೆ. ಉಳಿದ ಶೇ.60ರಿಂದ 70ರಷ್ಟನ್ನು ಆಮದು ಮಾಡಿಕೊಳ್ತಾ ಇದ್ದೀವಿ. ಅಮೇರಿಕಾ, ಗಲ್ಫ್ ಅರೇಬಿಯನ್ ಮತ್ತು ರಷ್ಯಾ ದೇಶಗಳಿಂದ ಆಮದು ಬರುತ್ತದೆ. ಈಗ ಯುದ್ಧದ ಪರಿಸ್ಥಿತಿಯಿಂದ ವೆಸಲ್ಸ್ ಬರೋದು ಸ್ವಲ್ಪ ತಡವಾಗುತ್ತಿದೆ ಎಂದು ತಿಳಿಸಿದರು.

ಕಮರ್ಷಿಯಲ್ ಸಿಲಿಂಡರ್ ಬಳಕೆಯಲ್ಲಿ ಸ್ವಲ್ಪ ಕಷ್ಟವಾಗಬಹುದು. ಯಾಕೆಂದರೆ ಮೊದಲು ಮನೆ ಬಳಕೆಗೆ ಆದ್ಯತೆ ನೀಡಲಾಗುತ್ತದೆ. ತದನಂತರ ಆಸ್ಪತ್ರೆ, ಶಾಲೆ, ಕಾಲೇಜುಗಳಿಗೆ ಸರಬರಾಜುನಲ್ಲಿ ವ್ಯತ್ಯಯ ಆಗದಂತೆ ನೋಡಿಕೊಳ್ಳಬೇಕಾಗಿದೆ. ಹೋಟೆಲ್ ಕಲ್ಯಾಣ ಮಂಟಪಗಳಿಗೆ ಕಷ್ಟವಿದ್ದು ಆದ್ಯತೆಯ ಮೇರೆಗೆ ಸಿಲಿಂಡರ್ ಗಳನ್ನು ವಿತರಿಸಲಾಗುವುದು. ಈ ಕಠಿಣ ಪರಿಸ್ಥಿತಿಯನ್ನು ನಿರಂತರವಾಗಿ ಪರಿಶೀಲಿಸಲು ಸರ್ಕಾರದ ಕಾರ್ಯದರ್ಶಿ ಮಟ್ಟದಲ್ಲಿ ಪ್ರತಿವಾರ ಆಯಿಲ್ ಕಂಪನಿಗಳ ಜೊತೆ ಸಭೆ ನಡೆಯಲು ಸೂಚಿಸಲಾಗಿದೆ ಎಂದು ತಿಳಿಸಿದರು. ಈ ಸಂಕಷ್ಟದ ಸಮಯದಲ್ಲಿ ಅಡಿಗೆ ಅನಿಲವನ್ನು ಮಿತವಾಗಿ ಅವಶ್ಯಕತೆ ಇದ್ದರೆ ಮಾತ್ರ ಬಳಸಬೇಕು. ಜನರು ಆತಂಕಪಡದೆ ಮಿತವಾಗಿ ಉಪಯೋಗಿಸಿದರೆ ಯಾವುದೇ ದೊಡ್ಡ ಸಮಸ್ಯೆ ಎದುರಾಗುವುದಿಲ್ಲ ಎಂದು ಮನವಿ ಮಾಡಿದರು.

## ಸೌದೆ ಒಲೆ ಮೊರೆ

ತಯಾರು ಮಾಡುತ್ತಿದ್ದಾರೆ. ಗ್ಯಾಸ್ ಕಲೆಕ್ಷನ್ ಇದ್ದ ಒಲೆಗಳನ್ನು ಬಂದ್ ಮಾಡಲಾಗಿದೆ. ಎಲ್ಲವೂ ಸೌದೆ ಮಯವಾಗಿದೆ. ಸೌದೆ ಬಳಸಿಕೊಂಡು ಮಾಲೀಕರು ಅಡುಗೆ ಮಾಡಿ ಸುತ್ತಿದ್ದು, ಗ್ಯಾಸ್ ಹೆಚ್ಚು ಖರ್ಚಾಗುವ ಮೇನುಗಳನ್ನು ಬಂದ್ ಮಾಡಿದ್ದಾರೆ. ಚೈನೀಸ್, ಸೂಪ್‌ಗಳು, ದೋಸಾ ಸೇರಿದಂತೆ ಹೆಚ್ಚು ಗ್ಯಾಸ್ ಖರ್ಚಾಗುವ ಉಪಹಾರಗಳಿಗೆ ಬ್ರೇಕ್ ಹಾಕಿದ್ದಾರೆ.

ಮೊದಲ ಪುಟದಿಂದ

## ಮೂವರ ಬಂಧನ

ಸುಮಾರು ಒಂದೂವರೆ ವರ್ಷದ ಹಿಂದೆ ಸಿದ್ದಲಿಂಗಪ್ಪ ಇಬ್ಬರನ್ನು ರೆಡ್ ಹ್ಯಾಂಡ್ ಆಗಿ ಹಿಡಿದಿದ್ದರು. ಬಳಿಕ ಪತ್ನಿಗೆ ಹಲವಾರು ಬಾರಿ ಬುದ್ಧಿವಾದ ಹೇಳಿದ್ದರೂ ಸಂಬಂಧ ಮುರಿಯಲು ಒಪ್ಪಿರಲಿಲ್ಲ. ಆದರೆ ಈ ವಿಷಯದಿಂದ ಬೇಸತ್ತ ಶಾಲಿನಿ ತನ್ನ ಪ್ರಿಯಕರನೊಂದಿಗೆ ಸೇರಿ ಪತಿಯನ್ನು ಮುಗಿಸುವ ಯೋಜನೆ ರೂಪಿಸಿದ್ದಳು ಎಂದು ಪೊಲೀಸರು ತಿಳಿಸಿದ್ದಾರೆ. ಸಿದ್ದಲಿಂಗಪ್ಪ ಶೆಟ್ಟಿಹಳ್ಳಿಯ ಗಣಪತಿ ದೇವಾಲಯಕ್ಕೆ ಮಾ.6ರಂದು ಪೂಜೆಯ ಕೆಲಸಕ್ಕಾಗಿ ತೆರಳಿದ್ದರು. ಈ ವೇಳೆ ಶಾಲಿನಿ ತನ್ನ ಪ್ರಿಯಕರ ಹರೀಶ್‌ಗೆ ಮೆಸೇಜ್ ಮೂಲಕ ಮಾಹಿತಿ ನೀಡಿದ್ದಳು. ನಂತರ ಬೈಕ್‌ನಲ್ಲಿ ನಾಲೆ ಏರಿ ಮನೆಗೆ ಮರಳುತ್ತಿದ್ದ ಸಿದ್ದಲಿಂಗಪ್ಪನನ್ನು ಹರೀಶ್ ಹಾಗೂ ಅವನ ಇಬ್ಬರು ಸ್ನೇಹಿತರು ಮಾರ್ಗಮಧ್ಯೆ ಅಡ್ಡಗಟ್ಟಿದರು. ಬಳಿಕ ದೊಣ್ಣೆಯಿಂದ ತಲೆಗೆ ಹೊಡೆದು ಹತ್ಯೆಗೈದಿದ್ದಾರೆ ಎಂದು ತನಿಖೆಯಲ್ಲಿ ತಿಳಿದುಬಂದಿದೆ. ಪ್ರಕರಣದ ಕುರಿತು ತನಿಖೆಯನ್ನು ಪೊಲೀಸರು ಮುಂದುವರಿಸಿದ್ದಾರೆ.


## ಬೆಸ್ತ ಎಸ್‌ಟಿ ಸೇರ್ಪಡೆ

ಪಟ್ಟಿಯಲ್ಲಿರುವ ಜಾತಿಗಳಾದ ಟೋಕರೆ ಕೋಲಿ, ಕೋಯಾ ಕೋಲಿಡೋರೆ, ಕೋಲ್ಕಾ ಜಾತಿಗ ಳನ್ನು ಪರ್ಯಾಯ ಪದಗಳೆಂದು ಪರಿಗಣಿಸಲು ಹೊಸದಾಗಿ ಕುಲಶಾಸ್ತ್ರೀಯ ಅಧ್ಯಯನವನ್ನು ಕೈಗೊಳ್ಳಲು ಕರ್ನಾಟಕ ರಾಜ್ಯ ಬುಡಕಟ್ಟು ಸಂಶೋ ಧನಾ ಸಂಸ್ಥೆಯಿಂದ 2026ರ ಫೆ.19ರಂದು ಪ್ರಸ್ತಾ ವನೆ ಸ್ವೀಕೃತವಾಗಿದೆ. ಸರ್ಕಾರದ ಹಂತದಲ್ಲಿ ಪರಿ ಶೀಲಿಸಲಾಗುತ್ತಿದೆ ಎಂದು ಅವರು ತಿಳಿಸಿದರು.

# ಮಂಚೂಣೆಯ ಎಐ ತಂತ್ರಜ್ಞಾನ ಅಪಾಯಕಾರಿ

ಮೈಸೂರು: ಮನುಷ್ಯನ ಯೋಚನೆಗಳಿಂದಲೂ ಒಂದು ಹೆಜ್ಜೆ ಎಐ ತಂತ್ರಜ್ಞಾನ ಮುಂದೆ ಹೋಗಿರುವುದು ತುಂಬಾ ಅಪಾಯಕಾರಿ ಬೆಳವಣಿಗೆ ಆಗಿದೆ ಎಂದು ಮೈಸೂರು ವಿಶ್ವವಿದ್ಯಾನಿಲಯದ ಬಹದ್ದೂರ್ ನಿರ್ವಹಣಾ ಸಂಸ್ಥೆಯ ಹಿರಿಯ ಪ್ರಾಧ್ಯಾಪಕರಾದ ಪ್ರೊ. ಆರ್.ಮಹೇಶ್ ಕಳವಳ ವ್ಯಕ್ತಪಡಿಸಿದರು.

ನಗರದ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಕಾವೇರಿ ಸಭಾಂಗಣದಲ್ಲಿ ಡಾ.ಬಾಬು ಜಗಜೀವನರಾಮ್ ಅಧ್ಯಯನ, ಸಂಶೋಧನಾ ಮತ್ತು ವಿಸ್ತರಣಾ ಕೇಂದ್ರ ಮತ್ತು ಡಾ.ಬಾಬುಜಗಜೀವನರಾಮ್ ಸಂಶೋಧನಾ ಸಂಸ್ಥೆಯ ಸಹಯೋಗದೊಂದಿಗೆ ಬುಧವಾರ ನಡೆದ ಸಂಶೋಧನಾ ವಿಧಾನಗಳ ಕುರಿತು ಮೂರು ದಿನಗಳ ಕಾರ್ಯಾಗಾ ರವನ್ನು ಉದ್ಘಾಟಿಸಿ ಮಾತನಾಡಿದರು. ಸಂಶೋಧನೆಯನ್ನು ಪ್ರಾಮಾಣಿಕವಾಗಿ ನಾವೇ ಮಾಡಬೇಕು. ಅದು ತಂತ್ರಜ್ಞಾನ ಆಧಾರಿತವಾಗಿರಬಾರದು. ಇಂದು ಸಂಶೋಧನೆ ತಂತ್ರಜ್ಞಾನ ಆಧಾರಿತವಾಗಿದೆ. ಸಂಶೋಧನೆಗೆ ಪೂರಕ




ವಾದ ಎಲ್ಲಾ ವ್ಯವಸ್ಥೆಯನ್ನು ತಂತ್ರಜ್ಞಾನ ಕೊಡುವ ಶಕ್ತಿಯನ್ನು ಕೊಟ್ಟಿದೆ. ಎಐ ತಂತ್ರಜ್ಞಾನ ಇಂದು ನಮಗಿಂತ ಚೆನ್ನಾಗಿ ಯೋಚನೆ ಮಾಡಲು ಶುರು ಮಾಡಿದೆ. ಎಐ ತಂತ್ರಜ್ಞಾನ ಮುಂದೆ ಅದರ ಯೋಚನೆಗಳತ್ತ ನಮ್ಮನ್ನು ಕೊಂಡೊಯ್ಯಬಹುದು ಎಂದು ಹೇಳಿದರು.

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ.ಶರಣಪ್ಪ ವಿ.ಹಲಸೆ ಮಾತನಾಡಿ, ಸಂಶೋಧನೆ ಮಾಡುವಾಗ ವಿದ್ಯಾರ್ಥಿಗಳು ತಮ್ಮ ಸಂಪೂರ್ಣ ಪರಿಶ್ರಮದಿಂದ ಸಂಶೋಧನೆಗಳನ್ನು ಸಿದ್ಧಪಡಿಸಬೇಕು, ಎಐ ತಂತ್ರಜ್ಞಾನದ ಕಡೆ ಮೊರೆಹೋಗುವುದನ್ನು ಕಡಿಮೆ ಮಾಡಿ ತಮ್ಮಲ್ಲಿರುವ ಜ್ಞಾನವನ್ನು ಸಂಶೋಧನೆಯಲ್ಲಿ ಬಳಸಬೇಕು. ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯ ನಿಲಯದಲ್ಲಿ ಇಂದು 345 ವಿದ್ಯಾರ್ಥಿಗಳು ಸಂಶೋಧನೆಗೆ ಪ್ರವೇಶಾತಿ ಪಡೆದುಕೊಂಡಿದ್ದಾರೆ. ಇಂದಿನ ಸಂಶೋಧನೆಗಳು ತಮ್ಮ ಮೂಲ ತತ್ವವನ್ನು ಕಳೆದುಕೊಳ್ಳುತ್ತಿವೆ, ಸಂಶೋಧನೆಯಲ್ಲಿ ಪ್ಲಾಗರಿಸಂ (ಕೃತಿಚೌರ್ಯ) ಚೆಕ್ ಮಾಡುವುದು ಅವಶ್ಯಕವಾಗಿದೆ ಆದ್ದರಿಂದ ಯುಜಿಸಿ ಸಂಸ್ಥೆಯು ಸಂಶೋಧನೆಯಲ್ಲಿ ಸಂಶೋಧನಾ ನೀತಿ ಶಾಸ್ತ್ರ ಪತ್ರಿಕೆಯನ್ನು ಸೇರಿಸಲಾಗಿದೆ ಎಂದರು. ಕಾರ್ಯಕ್ರಮದಲ್ಲಿಶೈಕ್ಷಣಿಕ ವಿಭಾಗದ ಡೀನ್ ಪ್ರೊ.ರಾಮನಾಥಂ ನಾಯುಡು, ಪರೀಕ್ಷಾಂಗ ಕುಲಸಚಿವ ಸಿ. ಎಸ್.ಆನಂದಕುಮಾರ್, ಹಣಕಾಸು ಅಽಕಾರಿ ಪ್ರೊ.ನಿರಂಜನ್ ರಾಜ್ ಸೇರಿ ಇತರರಿದ್ದರು.

### ವಿಲೀನಕ್ಕೆ ಎಸ್.ಡಿ.ಎಂ.ಸಿ ಮತ್ತು ಸಾರ್ವಜನಿಕ ಶಿಕ್ಷಣ ಉಳಿಸಿ ಸಮಿತಿಗಳ ವಿರೋಧ

# ಸರ್ಕಾರಿ ಶಾಲೆಗಳ ವಿಲೀನ ಅಪ್ರಜಾತಾಂತ್ರಿಕ ನೀತಿ

ಚನ್ನಪಟ್ಟಣ: ಕೆಪಿಎಸ್ ಮ್ಯಾಗ್ನೆಟ್ ಶಾಲೆಗಳ ನೆಪದಲ್ಲಿ ಸರ್ಕಾರಿ ಶಾಲೆಗಳನ್ನು ಮುಚ್ಚುತ್ತಿರುವುದು ಅಪ್ರಜಾತಾಂತ್ರಿಕ ಮತ್ತು ಧಮನಕಾರಿ ನೀತಿ ಎಂದು ಆರೋಪಿಸಿರುವ ಎಐಡಿಎಸ್‌ಓ ಸಂಘಟನೆ, ಎಸ್.ಡಿ.ಎಂ.ಸಿ ಹಾಗೂ ಸಾರ್ವಜನಿಕ ಶಿಕ್ಷಣ ಉಳಿಸಿ ಸಮಿತಿಗಳ ಸದಸ್ಯರು ಚನ್ನಪಟ್ಟಣ ತಾಲ್ಲೂಕು ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಮನವಿ ಸಲ್ಲಿಸಿದ್ದಾರೆ. ಯಾವುದೇ ಗ್ರಾಮದ ಸರ್ಕಾರಿ ಶಾಲೆಯನ್ನು ಮುಚ್ಚಬಾರದು ಎಂದು ಒತ್ತಾಯಿಸಿದ್ದಾರೆ.

ಒಂದೇ ಒಂದು ಸರ್ಕಾರಿ ಶಾಲೆ ಮುಚ್ಚುವುದಿಲ್ಲ ಎಂದು ಸರ್ಕಾರ ಹೇಳುತ್ತಲೇ ಇದೆ. ಆದರೆ ಚನ್ನಪಟ್ಟಣ ತಾಲೂಕಿನ ಹೊಡಿಕೆ ಹೊಸಹಳ್ಳಿ, ಕನ್ನೀದೊಡ್ಡಿ, ಅಮ್ಮಳ್ಳಿದೊಡ್ಡಿ, ಸಂತೆಮೊಗೇನ ಹಳ್ಳಿ, ಸುಣ್ಣ ಘಟ್ಟ ಗ್ರಾಮಗಳ ಸರ್ಕಾರಿ ಶಾಲೆಗಳನ್ನು ಹೊಂಗನೂರು ಕೆಪಿಎಸ್ ಮ್ಯಾಗ್ನೆಟ್ ಶಾಲೆಗೆ ವಿಲೀನಗೊಳಿಸುವುದಾಗಿ ಸರ್ಕಾರ ಹೇಳಿದೆ. ಈ ಶಾಲೆಗಳ ವಿದ್ಯಾರ್ಥಿಗಳನ್ನು ಹೊಂಗನೂರು ಕೆಪಿಎಸ್ ಮ್ಯಾಗ್ನೆಟ್ ಶಾಲೆಗೆ ಕಳಿಸುವಂತೆ ಶಿಕ್ಷಕರ



ಮೇಲೆ ಒತ್ತಡ ಹೇರಲಾಗುತ್ತಿದೆ. ಶಿಕ್ಷಕರು ಸ್ಪಂದಿಸದಿದ್ದರೆ ಯಾವುದೇ ಮಾಹಿತಿ ನೀಡದೆ ಶಿಸ್ತು ಕ್ರಮ ಕೈಗೊಳ್ಳಲಾಗುವುದಾಗಿ ಕ್ಷೇತ್ರ ಶಿಕ್ಷಣಾಧಿಕಾರಿಗಳು ಮಾರ್ಚ್ 7ರಂದು ಆದೇಶ ಹೊರಡಿಸಿದ್ದಾರೆ ಎಂದು ಸಂಘಟನೆಗಳ ಪದಾಧಿಕಾರಿಗಳು ದೂರಿದ್ದಾರೆ.

ರಾಜ್ಯ ಸರ್ಕಾರ ಮತ್ತು ಶಿಕ್ಷಣ ಇಲಾಖೆಯ ವಿಲೀನ ಕ್ರಮವನ್ನು ಖಂಡಿಸಿರುವ ಎಐಡಿಎಸ್.ಓ, ಎಸ್.ಡಿ.ಎಂ.ಸಿ ಸಂಘಟನೆ, ಹೊಡಿಕೆ ಹೊಸಹಳ್ಳಿ, ಕನ್ನೀದೊಡ್ಡಿ, ಅಮ್ಮಳ್ಳಿದೊಡ್ಡಿ, ಸಂತೆಮೊಗೇನ ಹಳ್ಳಿ, ಸುಣ್ಣ ಘಟ್ಟ ಹಳ್ಳಿಗಳ ಸಾರ್ವಜನಿಕ ಶಿಕ್ಷಣ ಉಳಿಸಿ ಸಮಿತಿಗಳು, ರೈತ ಸಂಘಟನೆ, ಕನ್ನಡಪರ ಹಾಗೂ ಪ್ರಗತಿಪರ ಸಂಘಟನೆಗಳ ಸದಸ್ಯರು ಮತ್ತು ಐದೂ ಗ್ರಾಮಗಳ ನಿವಾಸಿಗಳ ನಿಯೋಗ ಚನ್ನಪಟ್ಟಣ ಕ್ಷೇತ್ರ ಶಿಕ್ಷಣಾಧಿಕಾರಿ ರಾಮಲಿಂಗಯ್ಯ ಅವರನ್ನು ಭೇಟಿ ಮಾಡಿ ತಮ್ಮ ಅನಿಸಿಕೆಗಳನ್ನು ವ್ಯಕ್ತಪಡಿಸಿ ಮನವಿ ಸಲ್ಲಿಸಿದ್ದಾರೆ. ಮಾರ್ಚ್ 7ರಂದು ಜಾರಿ ಮಾಡಿರುವ ನೋಟೀಸ್ ಅನ್ನು ಕೂಡಲೇ ಹಿಂಪಡೆಯಬೇಕು ಮತ್ತು ಯಾವ ಕಾರಣಕ್ಕೂ ಐದೂ ಹಳ್ಳಿಯ ಶಾಲೆಗಳನ್ನು ಮುಚ್ಚಬಾರದೆಂದು ಆಗ್ರಹಿಸಿದ್ದಾರೆ. ಮನವಿ ಸ್ವೀಕರಿಸಿದ ಕ್ಷೇತ್ರ ಶಿಕ್ಷಣಾಧಿಕಾರಿ ರಾಮಲಿಂಗಯ್ಯ ಅವರು ಉನ್ನತ ಅಧಿಕಾರಿಗಳೊಂದಿಗೆ ಚರ್ಚಿಸಿ ಸೂಕ್ತ ಕ್ರಮ ಕೈಗೊಳ್ಳುವುದಾಗಿ ಪ್ರತಿಕ್ರಿಯೆ ನೀಡಿದರು. ಒಂದು ವೇಳೆ ಸರ್ಕಾರ ಮತ್ತು ಶಿಕ್ಷಣ ಇಲಾಖೆಯು ಈ ಮನವಿಗಳಿಗೆ ಸ್ಪಂದಿಸದಿದ್ದರೆ, ಜನರ ಆಕ್ರೋಶವನ್ನು ಎದುರಿಸುವುದು ಅನಿವಾರ್ಯವಾಗಲಿದೆ ಎಂದು ಎಚ್ಚರಿಸಿದ್ದಾರೆ. ಎಐಡಿಎಸ್.ಓದ ರಾಜ್ಯಾಧ್ಯಕ್ಷರಾದ ಅಶ್ವಿನಿ.ಕೆ.ಎಸ್, ಉಪಾಧ್ಯಕ್ಷರಾದ ಅಪೂರ್ವ, ಎಸ್.ಡಿ.ಎಂ.ಸಿ ರಾಜ್ಯಾಧ್ಯಕ್ಷ ಉಮೇಶ್, ಉಪಾಧ್ಯಕ್ಷ ಶಂಭು ಗೌಡ, ಸಾರ್ವಜನಿಕ ಶಿಕ್ಷಣ ಉಳಿಸಿ ಜಿಲ್ಲಾ ಸಮಿತಿಯ ಅಧ್ಯಕ್ಷ ಮಂಜುನಾಥ್ ಮುಂತಾದವರು ಭಾಗವಹಿಸಿದ್ದರು.

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

# ಕೃಷಿ ತಂದ ಖುಷಿ





## ಕರುನಾಡಲ್ಲಿ ಅಭಿವೃದ್ಧಿಯ ಹೊಸ ಮನ್ವಂತರ



### ನಾಡಿನ ಕೃಷಿಗೆ ಆಧುನಿಕತೆಯ ಸ್ಪರ್ಶ

- ಕೃಷಿಯಲ್ಲಿ ಆಧುನಿಕ ತಂತ್ರಜ್ಞಾನವನ್ನು ಉತ್ತೇಜಿಸುವ ಉದ್ದೇಶದಿಂದ "ಹೈಟೆಕ್ ಹಾರ್ವೆಸ್ಟರ್ ಹಬ್" ಯೋಜನೆಗೆ ಚಾಲನೆ
- ಕೃಷಿ ಯಾಂತ್ರೀಕರಣ ಸಂಸ್ಕರಣಾ ಘಟಕಗಳಿಗಾಗಿ 1.31 ಲಕ್ಷ ಫಲಾನುಭವಿಗಳಿಗೆ **ರೂ.286 ಕೋಟಿ** ಆರ್ಥಿಕ ನೆರವು
- **ರೂ.252 ಕೋಟಿ** ವೆಚ್ಚದಲ್ಲಿ 1.50 ಲಕ್ಷ ಹೆಕ್ಟೇರ್ ಕೃಷಿ ಭೂಮಿಯಲ್ಲಿ ಸೂಕ್ಷ್ಮ ನೀರಾವರಿ ಘಟಕಗಳ ಅಳವಡಿಕೆ
- ಕೃಷಿ ಉತ್ಪನ್ನಗಳ ದೀರ್ಘಾವಧಿ ಸಂಗ್ರಹಣೆಗಾಗಿ 14,000 ಮೆಟ್ರಿಕ್ ಟನ್ ಸಾಮರ್ಥ್ಯದ **6 ಶೀತಲ ಘಟಕಗಳ** ಸ್ಥಾಪನೆಗೆ ಕ್ರಮ

ಕರ್ನಾಟಕ ನವ ನಿರ್ಮಾಣಕ್ಕೆ

## ಗ್ಯಾರಂಟಿ ಸರ್ಕಾರ...

**ಸಾಂಪ್ರದಾಯಿಕ ಬೇಸಾಯ ಪದ್ಧತಿಯಿಂದ ಸಂಕಷ್ಟದಲ್ಲಿದ್ದ ರಾಜ್ಯದ ಕೃಷಿಕರಿಗೆ ಆಧುನಿಕ ಸವಲತ್ತುಗಳನ್ನು ಒದಗಿಸಿ, ಕೃಷಿಯನ್ನು ಲಾಭದಾಯಕ ವೃತ್ತಿಯಾಗಿಸುವುದು ನಮ್ಮ ಸರ್ಕಾರದ ಸಂಕಲ್ಪವಾಗಿದೆ.**

ವೈಜ್ಞಾನಿಕ ಮನೋಧರ್ಮ ಬೆಳೆಸಿಕೊಳ್ಳುವುದು; ಪ್ರಶ್ನೆ ಮಾಡುವ ಮತ್ತು ಬದಲಾವಣೆಗೆ ಒಡ್ಡಿಕೊಳ್ಳುವ ಮನಃಸ್ಥಿತಿ ಬೆಳೆಸಿಕೊಳ್ಳುವುದು.- ಪ್ರತಿಯೊಬ್ಬ ಭಾರತೀಯನ ಸಂವಿಧಾನಬದ್ಧ ಮೂಲಭೂತ ಕರ್ತವ್ಯ

CMofKarnataka https://dipr.karnataka.gov.in/

ಕರ್ನಾಟಕ ವಾರ್ತೆ

ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡ / ಹಿಂದುಳಿದ ವರ್ಗ / ಬ್ರಾಹ್ಮಣ ಸಮುದಾಯಗಳ ಮಾಲೀಕತ್ವ ಮತ್ತು ಸಂಪಾದಕತ್ವದ ಪತ್ರಿಕೆಗಳಿಗೆ ಪ್ರೋತ್ಸಾಹ ರೂಪದ ಜಾಹೀರಾತು

# ತೀವ್ರಗಾಮಿ ಕ್ರಾಂತಿಕಾರಿಗಳ ಸ್ಮರಣೆ ಅಗತ್ಯ



ಗುಂಡ್ಲುಪೇಟೆ:– ಭಾರತದ ಸ್ವಾತಂತ್ರ ಹೋರಾಟಕ್ಕೆ ತೀವ್ರಗಾಮಿಗಳು ಹಾಗೂ ಕ್ರಾಂತಿಕಾರಿಗಳ ಕೊಡುಗೆ ಅಪಾರ ಎಂದು ಚಿಂತಕ ಟಿ ಎನ್ ರಾಮಕೃಷ್ಣರು ತಿಳಿಸಿದರು

ತಾಲೂಕಿನ ಕಬ್ಬಹಳ್ಳಿ ಶ್ರೀ ಮದ್ದಾನೇಶ್ವರ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಇತಿಹಾಸ ವಿಭಾಗದಿಂದ ಹಮ್ಮಿಕೊ ಳ್ಳಲಾಗಿದ್ದ ಸ್ವಾತಂತ್ರ ಹೋರಾಟಗಾರರ ಭಾವ ಚಿತ್ರ ಪ್ರದರ್ಶನ ಉಪನ್ಯಾಸ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು ಭಾರತದ ಸ್ವಾತಂತ್ರ ಹೋರಾಟಕ್ಕೆ ತೀವ್ರಗಾಮಿಗಳು ಹಾಗೂ ಕ್ರಾಂತಿಕಾರಿಗಳ ಕೊಡುಗೆ ಅಪಾರ ಹಾಗೆಯೇ ಕ್ರಾಂತಿಕಾರಿಗಳು ದೇಶದ ಪುನರು ತ್ಥಾನಕ್ಕೆ ಸಾಕಷ್ಟು ಶ್ರಮಿಸಿದ್ದಾರೆ ಅಂತವರ ಸ್ಮರಣೆ ಅಗತ್ಯ ಎಂದರು.

ಸುರೇಂದ್ರ ಜೆ. ಮಾತನಾಡಿ ಇಂದಿನ ಯುವ ಜನತೆಯಲ್ಲಿ ರಾಷ್ಟ್ರಾಭಿಮಾನ ಮೂಡಬೇಕು ಹೋರಾಟಗಾರರ ಆದರ್ಶಗಳನ್ನು ಮೈಗೂಡಿಸಿಕೊಂಡು ಸತ್ಪ್ರಜೆಗಳಾಗಿ ದೇಶದ ಪ್ರಗತಿಗೆ ಶ್ರಮಿಸಬೇಕು ಈ ನಿಟ್ಟಿನಲ್ಲಿ ಇಂತಹ ಕಾರ್ಯಕ್ರಮಗಳು ಪ್ರೇರಣೆಯಾಗಲಿದೆ ಎಂದು ವಿದ್ಯಾರ್ಥಿಗಳಿಗೆ ಸಲಹೆ ನೀಡಿದರು ಇತಿಹಾಸ ವಿಭಾಗದ ಮುಖ್ಯಸ್ಥ ಸುರೇಶ ಸಿ ಕೆ. ಇತಿಹಾಸ ಪ್ರಾಧ್ಯಾಪಕ ಡಾ.ಸಿ ಸುರೇಶ್ ಅಂಬೈ ಕಾರ್ಯಕ್ರಮವನ್ನು ಆಯೋಜಿಸಿದರು. ಅಂತಿಮ ಬಿ.ಎ ವಿದ್ಯಾರ್ಥಿಗಳಾದ ಮಹೇಶ್ವರಿ ಮತ್ತು ಚಿರಂಜೀವಿ ಕಾರ್ಯಕ್ರಮ ನಡೆಸಿಕೊಟ್ಟರು. ಸ್ವಾತಂತ್ರ್ಯ ಹೋರಾಟಗಾರರ ಭಾವಚಿತ್ರ ಪ್ರದರ್ಶನವನ್ನು ಕಾಲೇಜು ಆವರಣದಲ್ಲಿ ಏರ್ಪಡಿಸಲಾಗಿತ್ತು. ಈ ಸಂದರ್ಭದಲ್ಲಿ ಐ.ಕ್ಯೂ.ಎ.ಸಿ ಸಂಚಾಲಕರು ,ಇಂಗ್ಲಿಷ್ ವಿಭಾಗದ ಮುಖ್ಯಸ್ಥ ಮಹದೇವಸ್ವಾಮಿ ಆರ್ , ಅರ್ಥಶಾಸ್ತ್ರ ವಿಭಾಗದ ಮುಖ್ಯಸ್ಥೆ ಡಾ. ತೇಜಸ್ವಿನಿ ಹಾಗೂ ರಾಜ್ಯಶಾಸ್ತ್ರ ವಿಭಾಗದ ಮುಖ್ಯಸ್ಥ ಶ್ರೀನಿವಾಸ್ ಸಿ ಮತ್ತಿತರರು ವೇದಿಕೆಯಲ್ಲಿದ್ದರು


# ಶ್ರೀತಿಬ್ಬಳ್ಳಿ ಮಾರಮ್ಮ ಹಬ್ಬದ ಸಂಭ್ರಮ



ಚಾಮರಾಜನಗರ, ನಗರದ ರಾಮಸಮುದ್ರ ಬಡಾವಣೆಯಲ್ಲಿ ಗ್ರಾಮದೇವತೆ ಶ್ರೀತಿಬ್ಬಳ್ಳಿ ಮಾರಮ್ಮ ಹಬ್ಬದ ಸಂಭ್ರಮ ಕಳೆಗಟ್ಟಿದ್ದು, ಹಬ್ಬದ ಪ್ರಯುಕ್ತ ಕೊಂಡೋತ್ಸವ, ಮಡ ಉತ್ಸವ, ತಂಪೋತ್ಸವ ವಿಜೃಂಭಣೆಯಿಂದ ನಡೆಯಿತು.

ಬಡಾವಣೆಯ ತಿಬ್ಬಳ್ಳಿ ಕಟ್ಟೆ ಹತ್ತಿರ ಇರುವ ಶ್ರೀತಿಬ್ಬಳ್ಳಿ ಮಾರಮ್ಮ ದೇವಸ್ಥಾನದಲ್ಲಿ ಬೆಳಿಗ್ಗೆ ಹೋಮ, ವಿಶೇಷಪೂಜೆ ನಡೆಯಿತು. ದೇವಸ್ಥಾನದ ಮುಂಭಾಗದಲ್ಲಿ ಹಬ್ಬದ ಸಂಭ್ರಮ ಕಳೆಗಟ್ಟಿತು. ಹಬ್ಬದ ಅಂಗವಾಗಿ ಮಾರಮ್ಮ ದೇವಸ್ಥಾನವನ್ನು ವಿದ್ಯುತ್ ದೀಪಗಳಿಂದ ಹಾಗೂ ಹಸಿರುತೋರಣಗಳಿಂದ ಅಲಂಕರಿಸಲಾಗಿತ್ತು. ದೇವರಿಗೆ ವಿಶೇಷ ಪೂಜೆ ಸಲ್ಲಿಸಲಾಯಿತು. ಮಾರಮ್ಮ ದೇವಸ್ಥಾನದ ಮುಂಭಾಗದಲ್ಲಿ ಹರಕೆಹೊತ್ತವರು ಮಡೆ ಸೇವೆ ಸಲ್ಲಿಸಿದರು. ಭಕ್ತರು ಸರತಿ ಸಾಲಿನಲ್ಲಿ ನಿಂತು ಮಾರಮ್ಮ ದರ್ಶನ ಪಡೆದು ಪುನೀತರಾದರು. ದೇವಸ್ಥಾನದ ಮುಂಭಾಗದಲ್ಲಿ ಕೊಂಡೋತ್ಸವ ನಡೆಯುತ್ತದೆ. ಆದರೆ ಯಾವ ಭಕ್ತರು ಕೊಂಡ ಹಾಯುವುದಿಲ್ಲ . ಕೊಂಡೋತ್ಸವಕ್ಕೆ ಪೂಜೆ ಮಾತ್ರೆ ಮಾಡಲಾಗುತ್ತದೆ ಅದು ಇಲ್ಲಿನ ವಿಶೇಷ, ಗ್ರಾಮದ ಸಹಸ್ರಾರು ಜನ ಭಾಗವಹಿಸಿ ಭಕ್ತಿ ಭಾವ ಮೆರೆದರು.

ಯಜಮಾನ ನಾಗರಾಜು ಮಾತನಾಡಿ. ಪ್ರತಿವರ್ಷದಂತೆ ಈ ವರ್ಷವೂ ಕೂಡ ಗ್ರಾಮದೇವತೆ ಶ್ರೀತಿಬ್ಬಳ್ಳಿ ಮಾರಮ್ಮ ಹಬ್ಬವನ್ನು ಆಚರಣೆ ಮಾಡಲಾಗುತ್ತಿದ್ದು, ಯಾವುದೇ ಭೇದಭಾವವಿಲ್ಲದೆ ಎಲ್ಲರೂ ಒಗ್ಗಟ್ಟಿನಿಂದ ಆಚರಣೆ ಮಾಡುತ್ತಿದ್ದೇವೆ. ಮಡಸೇವೆ, ತಂಪೋತ್ಸವ, ಕೊಂಡೋತ್ಸವ ನಡೆಯುತ್ತಿದೆ. ಆದರೆ ಯಾರು ಕೊಂಡ ಹಾಯುವುದಿಲ್ಲ ಕೊಂಡೋತ್ಸವಕ್ಕೆ ಪೂಜೆ ಮಾತ್ರೆ ನಡೆಯುತ್ತದೆ. ಸಂಪ್ರದಾಯದಂತೆ ಕೊಂಡೋತ್ಸವ ನಡೆಯುತ್ತದೆ ಎಂದರು. ಯಜಮಾನರಾದ ನಾಗರಾಜು, ಪಾಪಣ್ಣ, ಆಂಜನೇಯ, ರೇವಣ್ಣ,ಚಂದ್ರಪ್ಪ, ಸಿದ್ದರಾಜು, ಚನ್ನಂಜಯ್ಯ, ಡಿ.ನಂಜಪ್ಪ, ಪ್ರಸನ್ನ, ಜಿ.ರಾಜಪ್ಪ ಸೇರಿದಂತೆ ಸಹಸ್ರಾರು ಸಂಖ್ಯೆಯಲ್ಲಿ ಗ್ರಾಮಸ್ಥರು, ಭಕ್ತರು ಭಾಗವಹಿಸಿದ್ದರು.



## ಕೃಷ್ಣ ವಂದನ

ಸ್ನೇಹಾ ಆನಂದ್



### ಹೇ ಕೃಷ್ಣಾ !

ಅಗಣಿತ ಮಹಿಮನೆ  
ಕೃಷ್ಣನೆ ನಿನ್ನ ಪೊಗಳಲೆಂತು ನಾನು,  
ಗುಣಗಣ ಸೇವಿತ  
ಮನೋನಿಯಾಮಕ ಭಜಿಸಲೆಂತು ನಾನು!

ಜಗತಿಗೆ ನೀನು ಕಾರಣಕರ್ತ  
ಪ್ರಗತಿಯ ಹಾದಿಯ ತೋರುವಿ ನೀನು,  
ಭಕುತಿಯ ಬೇಡುವೆ  
ಶರಣಾಗತನಾಗುವೆ ಕರುಣೆಯ ತೋರು ನೀನು!

ದೈತ್ಯ ಶಿಶುಪಾಲನ ವಧಿಸಿದೆ  
ಬಲಿಯೊಳು ದಾನವ ಬೇಡಿದೆ ನೀನು,  
ಹಿರಣ್ಯಕಶಪುವಿಗೆ ಮುಕ್ತಿಯ ನೀಡಿ  
ಪ್ರಲ್ಹಾದದ ಪ್ರೀತಿಗೆ ಮಣಿದೆ ನೀನು!

ಜಗತಿನ ದುಃಖವ ಕಳೆಯಲು ಪುಟ್ಟಿದೆ,  
ದೇವಕಿಯ ಗರ್ಭದೊಳಂದು  
ಹೇಮ ಗಿರೀಶನ ಹೆಸರಲಿ ಬಂದು,  
ಕನಕಗಿರಿಲಿ ನೀ ನಿಂದು!

# ಸಹಪಾಠಿ ಚಿಕಿತ್ಸೆಗೆ ಹಣ ಸಂಗ್ರಹಿಸಿದ ವಿದ್ಯಾರ್ಥಿಗಳು



ರಾಮನಗರ: ಸಹಪಾಠಿ ವಿದ್ಯಾರ್ಥಿಯೊಬ್ಬ ಕ್ಯಾನ್ಸರ್‌ನಿಂದ ಬಳಲುತ್ತಿರುವುದಕ್ಕೆ ಮರುಗಿದ ನಗರದ ಹೋಲಿ ಕ್ರೆಸೆಂಟ್ ಶಾಲೆಯ ವಿದ್ಯಾರ್ಥಿಗಳು ಒಂದು ಲಕ್ಷ ಎಪ್ಪತ್ತು ಸಾವಿರ ರೂ ಸಂಗ್ರಹಿಸಿ ಚಿಕಿತ್ಸೆ ಕೊಡಿಸುವಂತೆ ವಿದ್ಯಾರ್ಥಿ ಪೋಷಕರಿಗೆ ಹಣವನ್ನು ತಲುಪಿಸಿದ್ದಾರೆ.

ಹೋಲಿ ಕ್ರೆಸೆಂಟ್ ಶಾಲೆಯಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿ ಕ್ಯಾನ್ಸರ್ ಕಾಯಿಲೆ ಪೀಡಿತನಾಗಿದ್ದು, ಚಿಕಿತ್ಸೆ ಪಡೆಯುತ್ತಿದ್ದಾನೆ ಎಂಬ ಅಂಶ ಶಾಲೆಯ ವಿದ್ಯಾರ್ಥಿ ಸಮೂಹಕ್ಕೆ ತಿಳಿದು ಬಂದ ಕೂಡಲೆ ವಿದ್ಯಾರ್ಥಿಗಳು ತಮ್ಮ ಪೋಷಕರ ಸಹಾಯದಿಂದ 1,70, 000/– ರೂ ಸಂಗ್ರಹಿಸಿದ್ದಾರೆ. ಸಂಗ್ರಹವಾದ ಹಣವನ್ನು ಕ್ಯಾನ್ಸರ್ ಪೀಡಿತ ವಿದ್ಯಾರ್ಥಿಯ ತಂದೆ–ತಾಯಿಯರಿಗೆ ತಲುಪಿಸಿ ಚಿಕಿತ್ಸೆಗೆ ಸಹಾಯ ನೀಡಿದ್ದಾರೆ. ಸಹಪಾಠಿ ವಿದ್ಯಾರ್ಥಿಯ ಚಿಕಿತ್ಸೆಗೆ ಸ್ಪಂದಿಸಿದ ವಿದ್ಯಾರ್ಥಿಗಳು ಮಾನವೀಯತೆ ಮೆರೆದಿದ್ದಾರೆ ಎಂದು ಶಾಲೆಯ ಆಡಳಿತ ಮಂಡಳಿ ಶ್ಲಾಘಿಸಿದೆ.

ವಿದ್ಯಾರ್ಥಿಗಳಲ್ಲಿ ಈ ಸೇವಾ ಮನೋಭಾವನೆಯನ್ನು ಶಾಲೆಯ ಶಿಕ್ಷಕರು ಬಿತ್ತಿದ್ದಾರೆ, ವಿದ್ಯಾರ್ಥಿ ಶೀಘ್ರವಾಗಿ ಗುಣಕನಾಗಲೆಂದು ವಿದ್ಯಾರ್ಥಿಗಳು, ಪೋಷಕ ವೃಂದ, ಶಾಲೆಯ ಸಿಬ್ಬಂದಿ ಮತ್ತು ಆಡಳಿತ ಮಂಡಳಿ ಸದಸ್ಯರು ಭಗವಂತನಿಗೆ ಪ್ರಾರ್ಥನೆ ಸಲ್ಲಿಸಿದ್ದಾರೆ ಎಂದು ಶಾಲೆಯ ಕಾರ್ಯದರ್ಶಿ ಅಲ್ತಾಫ್ ಅಹಮದ್ ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಸಂಗ್ರಹವಾದ ಮೊತ್ತವನ್ನು ಪೋಷಕರಿಗೆ ತಲುಪಿಸಿದ ವೇಳೆ ಹೋಲಿ ಕ್ರೆಸೆಂಟ್ ಸಂಸ್ಥೆಯ ಅಧ್ಯಕ್ಷರಾದ ಡಾ॥ಶಾಜಿಯಾ, ಪಿ.ಯು.ಕಾಲೇಜು ವಿಭಾಗದ ಡೀನ್ ಡಾ॥ಫಕ್ರುದ್ದೀನ್, ಪ್ರಾಂಶುಪಾಲರಾದ ಸ್ಟ್ಯಾನ್ಲಿಪಾಲ್, ಶಾಲಾ ಪ್ರಾಂಶುಪಾಲರಾದ ಯೇಸುದಾಸ್, ಉಪಪ್ರಾಂಶುಪಾಲರಾದ ಲತಾಆನಂದ್ ಹಾಗೂ ಸಿಬ್ಬಂದಿ ವರ್ಗ ಉಪಸ್ಥಿತರಿದ್ದರು.

# ಹೆಜ್ಜಾಲದಲ್ಲಿ ಗುಜರಿ ಅಂಗಡಿಗೆ ಬೆಂಕಿ, ಬೆಲೆಬಾಳುವ ವಸ್ತುಗಳು ನಾಶ



ಬಿಡದಿ: ಗುಜರಿ ಅಂಗಡಿಯೊಂದಕ್ಕೆ ಆಕಸ್ಮಿಕ ಬೆಂಕಿ ಬಿದ್ದ ಪರಿಣಾಮ ಗೋಡನ್‌ನಲ್ಲಿದ್ದ ಲಕ್ಷಾಂತರ ರೂ. ಬೆಲೆಬಾಳುವ ವಸ್ತುಗಳು ನಾಶವಾಗಿರುವ ಘಟನೆ ಹೆಜ್ಜಾಲ ಸರ್ಕಲ್ ಬಳಿ ಎಸ್‌ವಿ ಕಾಲೋನಿಯಲ್ಲಿ ಮಂಗಳವಾರ ಸಂಜೆ ನಡೆದಿದೆ.

ಬಿಡದಿ ಹೋಬಳಿ ಹೆಜ್ಜಾಲ ಸರ್ಕಲ್ ಬಳಿ ಎಸ್‌ವಿಟಿ ಕಾಲೋನಿಯ ವಸತಿ ಪ್ರದೇಶದಲ್ಲಿ ತಮಿಳುನಾಡು ಮೂಲದ ಮಾಧು ಎಂಬಾತ ಗುಜರಿ ಅಂಗಡಿ ನಡೆಸುತ್ತಿದ್ದು ಮಂಗಳವಾರ ಸಂಜೆ 4 ಗಂಟೆಯ ವೇಳೆಗೆ ಏಕಾಏಕಿ ಬೆಂಕಿ ಕಾಣಿಸಿಕೊಂಡು ಅಂಗಡಿಯಲ್ಲಿದ್ದ ವಸ್ತುಗಳು ಅಗ್ನಿಗಾಹುತಿ ಆಗಿವೆ. ವಸತಿ ಪ್ರದೇಶದಲ್ಲಿರುವ ಗುಜರಿ ಅಂಗಡಿಯಲ್ಲಿ ಬೆಂಕಿ ಹೊತ್ತುಕೊಂಡು ದೊಡ್ಡ ಪ್ರಮಾಣದಲ್ಲಿ ಉರಿಯುತ್ತಿದ್ದರಿಂದ ಆಸುಪಾಸಿನ ವಾಸಿಗಳು ಭಯಭೀತರಾಗಿ ಮನೆಯಿಂದ ಹೊರಗೆ ಓಡಿಬಂದು ಆತಂಕಕ್ಕೆ ಒಳಗಾಗಿದ್ದರು.

ಈ ವೇಳೆ ಸ್ಥಳೀಯ ಗ್ರಾಪಂ ಸದಸ್ಯ ಶಾಂತರಾಜುರವರು ತಕ್ಷಣವೇ ಅಗ್ನಿಶಾಮಕ ಠಾಣೆ ಹಾಗೂ ಬಿಡದಿ ಪೊಲೀಸ್ ಠಾಣೆಗೆ ವಿಷಯ ತಿಳಿಸಿದರು. ಸುದ್ದಿ ತಿಳಿದ ಬಿಡದಿ ಠಾಣೆ ಸಿಪಿಐ ವಿಜಯ್‌ಕುಮಾರ್‌ರವರು ಸಿಬ್ಬಂದಿಯೊದಿಗೆ ಸ್ಥಳಕ್ಕೆ ದಾವಿಸಿ ಬಂದು ಯಾವುದೇ ಅನಾಹುತವಾಗದಂತೆ ರಕ್ಷಣಾ ಕಾರ್ಯದಲ್ಲಿ ತೊಡಗಿದರು. ಕೂಡಲೇ 3 ಅಗ್ನಿಶಾಮಕ ವಾಹನಗಳಲ್ಲಿ ದಾವಿಸಿ ಬಂದ ಸಿಬ್ಬಂದಿ ಬೆಂಕಿ ನಂದಿಸುವ ಕಾರ್ಯಾಚರಣೆಗಿಳಿದರು. ಧಗಧಗನೆ ಉರಿಯುತ್ತಿದ್ದ ಬೆಂಕಿಯನ್ನು ಸಿಬ್ಬಂದಿ ಸುಮಾರು ಒಂದು ಗಂಟೆಗೂ ಹೆಚ್ಚು ಕಾಲ ಹರಸಾಹಪಟ್ಟು ನಂದಿಸಿದರು. ತದನಂತರ ಆಸುಪಾಸಿನ ಜನರು ನಿಟ್ಟುಸಿರು ಬಿಟ್ಟರು. ಅಗ್ನಿ ಅವಘಡದಲ್ಲಿ ಗುಜರಿ ಅಂಗಡಿ ಗೋದಾಮಿನಲ್ಲಿದ್ದ ವಸ್ತು ಗಳು ಸುಟ್ಟು ಕರಕಲಾಗಿವೆ. ಆದರೆ ಯಾವುದೇ ಅನಾಹುತ ಸಂಭವಿ ಸಿಲ್ಲ. ಸ್ಥಳೀಯ ಗ್ರಾಪಂ ಸದಸ್ಯರ ಸಮಯಪ್ರಜ್ಞೆಗೆ ಹಾಗೂ ಸಕಾಲದಲ್ಲಿ ಆಗಮಿಸಿ ರಕ್ಷಣಾ ಕಾರ್ಯ ಕೈಗೊಂಡ ಪೊಲೀಸರು ಮತ್ತು ಅಗ್ನಿಶಾಮಕ ಸಿಬ್ಬದಿಗೆ ಎಸ್‌ವಿಟಿ ಕಾಲೋನಿ ನಿವಾಸಿಗಳು ಕೃತಜ್ಞತೆ ಸಲ್ಲಿಸಿದರು. ಬೆಂಕಿ ಅನಾಹುತಕ್ಕೆ ನಿಖರ ಕಾರಣ ತಿಳಿದುಬಂದಿಲ್ಲ. ಗುಜರಿ ಅಂಗಡಿ ಮಾಲೀಕ ಮಾಧು ಎಂಬಾತನನ್ನು ಪೊಲೀಸರು ವಿಚಾರಣೆ ನಡೆಸಿದ್ದು ಮುಂದಿನ ಕ್ರಮ ಕೈಗೊಂಡಿದ್ದಾರೆ.

# ಸಿಎಫ್ ಟಿಆರ್‌ನಲ್ಲಿ ಮಹಿಳಾ ದಿನಾಚರಣೆ




ಮೈಸೂರು: ನಗರದ ಸಿಎಸ್‌ಐಆರ್?ಕೇಂದ್ರ ಆಹಾರ ತಂತ್ರಜ್ಞಾನ ಸಂಶೋಧನಾ ಸಂಸ್ಥೆಯಲ್ಲಿ ಅಂತರಾಷ್ಟ್ರೀಯ ಮಹಿಳಾ ದಿನಾಚರಣೆ ನಡೆಯಿತು.

ಈ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾದ ಕೇಂದ್ರ ರೇಷ್ಮೆ ಸಂಶೋಧನೆ ಮತ್ತು ತರಬೇತಿ ಸಂಸ್ಥೆ ನಿರ್ದೇಶಕಿ ಡಾ.ಪಿ.ದೀಪಾ ಮಾತನಾಡಿ, ಮಹಿಳೆಯರನ್ನು ಶಿಕ್ಷಣ, ಕೌಶಲ್ಯಾಭಿವೃದ್ಧಿ ಮತ್ತು ಸಂಶೋಧನೆ ಮತ್ತು ನವೋತ್ಪಾದನೆ ಕ್ಷೇತ್ರಗಳಲ್ಲಿ ಅವಕಾಶಗಳ ಮೂಲಕ ಶಕ್ತಿಶಾಲಿಯಾಗಿಸಲು ಮಹತ್ವವನ್ನು ಹೇಳಿದರು. "ಶಾಂತಿ ಎಂದರೆ ಶಕ್ತಿ" ಮಹಿಳೆಯರ ಆಂತರಿಕ ಶಕ್ತಿ, ವೃತ್ತಿಪರ ಜೀವನದಲ್ಲಿ ಉತ್ಕೃಷ್ಟ ಸಾಧನೆ ಮಾಡಲು ಹಾಗೂ ಮನೆಯ ಹೊಣೆಗಾರಿಕೆಗಳನ್ನು ನಿರ್ವಹಿಸಲು ಸಹಾಯಕವಾಗಿದೆ. "ಮನೆಯಲ್ಲಿ ಲಯ ಎಂದರೆ ರಾಷ್ಟ್ರದಲ್ಲಿ ಲಯ" ಎಂಬ ಮಾತು ಮೂಲಕ ಮಹಿಳೆಯರು ಕುಟುಂಬದಲ್ಲಿ ತೋರಿಸುವ ಸಮತೋಲನ, ಪ್ರೇರಣೆ ಮತ್ತು ತೊಡಗಿಸಿಕೊಳ್ಳುವಿಕೆ ರಾಷ್ಟ್ರದ ಅಭಿವೃದ್ಧಿಗೆ ಮಹತ್ವಪೂರ್ಣ ಎಂದು ಹೇಳಿದರು.

ಸ್ಮೈಲ್ಸ್ ಹಾಸ್ಪಿಟಲ್ ಸಿಇಒ ಮತ್ತು ಸ್ಥಾಪಕ ಡಾ.ಎಂ.ಪರಮೇಶ್ವರ, ಸಿಎಫ್ ಟಿಆರ್‌ಐ ನಿರ್ದೇಶಕ ಡಾ.ಗಿರಿಧರ್, ಮುಖ್ಯ ವಿಜ್ಞಾನಿ ಡಾ.ಪುಷ್ಪಎಸ್.ಮೂರ್ತಿ, ಪ್ರಮುಖ ವಿಜ್ಞಾನಿ ಕ್ರಾಸಿನಾ ಕಾಸರ್ ಇನ್ನಿತರರು ಉಪಸ್ಥಿತರಿದ್ದರು.

# ಪುಟ್ಟಮ್ಮಣಿ ಉದ್ಯಾನದಲ್ಲಿ ಡಿಸಿಯಿಂದ ಸ್ವಚ್ಚತಾ ಕಾರ್ಯ



ಚಾಮರಾಜನಗರ, ನಗರ, ಸ್ವಚ್ಚ ನಗರ ಆಶಯದಡಿ ಜಿಲ್ಲಾಧಿಕಾರಿ ಶ್ರೀರೂಪ ಅವರು ಇಂದು ಚಾಮರಾಜನಗರ ಪಟ್ಟಣದ ಇತಿಹಾಸ ಪ್ರಸಿದ್ಧ ಪುಟ್ಟಮ್ಮಣಿ ಉದ್ಯಾನವನದಲ್ಲಿ ಸ್ವಚ್ಚತಾ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.

ನಗರದ ಅಂಚೆ ಕಚೇರಿ ಬಳಿಯ ಆದಿ ಶಕ್ತಿ ದೇವಸ್ಥಾನದ ಮುಂಭಾಗದಲ್ಲಿರುವ ಪುಟ್ಟಮ್ಮಣಿ ಉದ್ಯಾನವನದಲ್ಲಿ ಜಿಲ್ಲಾಡಳಿತ, ನಗರಸಭೆ, ರೋಟರಿ ಸಿಲ್ಕ್ ಸಿಟಿ, ಸಂಜೀವಿನಿ ಟ್ರಸ್ಟ್ ಹಾಗೂ ಯೂತ್ ಫಾರ್ ಸೇವಾ ಇವರ ಸಂಯುಕ್ತಾಶ್ರಯದಲ್ಲಿ ಸ್ವಚ್ಚತಾ ಕಾರ್ಯ ಹಮ್ಮಿಕೊಳ್ಳಲಾಗಿತ್ತು. ನಗರದ ಸಾಕಷ್ಟು ವರ್ಷಗಳಿಂದ ಪಾಳುಬಿದ್ದಿದ್ದ ರಾಜವಂಶಸ್ಥರ ಕಾಲದ ಪುಟ್ಟಮ್ಮಣಿ ಉದ್ಯಾನವನಕ್ಕೆ ಮರುಜೀವ ನೀಡಲು ಸ್ವಚ್ಛತಾ ಕಾರ್ಯಕ್ಕೆ ಚಾಲನೆ ನೀಡಲಾಯಿತು.

ಉದ್ಯಾನವನವು ಮುಖ್ಯ ರಸ್ತೆಯ ಪಕ್ಕದಲ್ಲಿಯೇ ಇದ್ದರೂ ಗಿಡಗಂಟಿಗಳು ಬೆಳೆದು ಅರಸರ ಕಾಲದ ಭವ್ಯ ಮಂಟಪ ಕಾಣದಂತಾಗಿತ್ತು. ಸ್ವತಹ ಜಿಲ್ಲಾಧಿಕಾರಿಗಳು, ನಗರಸಭೆಯ ಅಧಿಕಾರಿಗಳು ಕಸ ಸಂಗ್ರಹಿಸುವ ಮೂಲಕ ಸ್ವಚ್ಚತಾ ಕಾರ್ಯದಲ್ಲಿ ಭಾಗವಹಿಸಿದ್ದ ಇತರರನ್ನು ಪ್ರೇರೇಪಿಸಿದರು.

ಇದೇ ವೇಳೆ ಮಾತನಾಡಿದ ಜಿಲ್ಲಾಧಿಕಾರಿ ಶ್ರೀರೂಪ ಪ್ರತಿಬಾರಿ ಇಲ್ಲಿ ಸಂಚರಿಸುವಾಗ ಉದ್ಯಾನವನವನ್ನು ಗಮನಿಸುತ್ತಿದ್ದೆ. ಪುಟ್ಟಮ್ಮಣಿ ಉದ್ಯಾನವನ ತುಂಬಾ ಸುಂದರವಾಗಿದೆ. ಉದ್ಯಾನವನ ವಾಯುವಿಹಾರಿಗಳಿಗೆ ಅನುಕೂಲವಾಗಿದ್ದು, ಇದನ್ನು ಹಸರೀಕರಣಗೊಳಿಸುವ ನಿಟ್ಟಿನಲ್ಲಿ ಜನರಿಗೆ ಪರಿಸರ ಜಾಗೃತಿ ಮೂಡಿಸಬೇಕಾಗಿದೆ ಎಂದರು.

ನಗರಸಭೆ ಪೌರಾಯುಕ್ತರಾದ ಪರಶುರಾಮ್ ಛಲವಾದಿ, ಕಾರ್ಯಪಾಲಕ ಅಭಿಯಂತರ ರಾದ ಪ್ರಕಾಶ್, ಪರಿಸರ ಎಂಜಿನಿಯರ್ ರೂಪ, ಹಿರಿಯ ಆರೋಗ್ಯ ನಿರೀಕ್ಷಕರಾದ ಮಂಜುನಾಥ್, ರೋಟರಿ ಸಿಲ್ಕ್‌ಸಿಟಿ ಸಹಾಯಕ ಗೌರ್ನರ್ ಡಿ.ಎಸ್.ಗಿರೀಶ್, ಅಧ್ಯಕ್ಷರಾದ ಸಮಿತ್ ಕುಮಾರ್, ಬಿ.ಪಿ. ವಿಶ್ವಾಸ್, ರಕ್ಷಿತಾ, ಸಂಜೀವಿನಿ ಟ್ರಸ್ಟ್‌ನ ಸತೀಶ್, ಹಸಿರು ಪಡೆಯ ಕಾರ್ಯಕರ್ತರು ಇದ್ದರು.

# ವಾಸು ಪುಣ್ಯಸ್ಮರಣೆ



ಮೈಸೂರು: ಮಾಜಿ ಶಾಸಕ ವಾಸು ಅವರ 2ನೇ ವರ್ಷದ ಪುಣ್ಯ ಸ್ಮರಣೆ ಕಾರ್ಯಕ್ರಮವನ್ನು ಅವರ ಅಭಿಮಾನಿಗಳು ದೇವರಾಜ ಅರಸು ರಸ್ತೆ ಅರಳಿ ಮರದ ಕೆಳಗೆ ಆಚರಿಸಿದರು.

ಈ ಸಂದರ್ಭದಲ್ಲಿ ಮಾಜಿ ಮಹಾಪೌರರಾದ ರವಿಕುಮಾರ್, ರಾಜ್ಯ ಕುರುಬರ ಸಂಘದ ನಿಕಟಪೂರ್ವ ಅಧ್ಯಕ್ಷ ಸುಬ್ರಹ್ಮಣ್ಯ, ನಗರಪಾಲಿಕೆ ಮಾಜಿ ಸದಸ್ಯ ಪ್ರಶಾಂತ್ ಗೌಡ, ಕೊಪ್ಪಲು ಶ್ರೀನಿವಾಸ, ರಾಮ್ ಪ್ರಸಾದ್, ಮಹಾದೇವ, ಗುರುರಾಜ್ ಶೆಟ್ಟಿ, ಪ್ರವೀಣ್ ಜೈನ್, ವಕ್ತ ರಾಮ್, ವೇದರಾಜ, ಎಂಐಟಿ ಚೇತನ್, ಎಲ್‌ಐಸಿ ಶೇಖರ್, ಸುಂದರ್ ಕುಮಾರ್, ಗುರುಪ್ರಸಾದ್, ನಂದಕುಮಾರ್, ಗೋಪಿನಾಥ್, ಶಾಂತ, ಮಂಗಳ, ಮಂಜು, ಹನೋಜ್ ಸರಸ್ವತ, ರಾಕೇಶ್ ಭಟ್, ಮಂಜುನಾಥ್ ಗೌಡ ಉಪಸ್ಥಿತರಿದ್ದರು.

# ಅರ್ಚಕರ ತಸ್ತೀಕ್ 10ಸಾವಿರಕ್ಕೇರಿಸಲು ಆಗ್ರಹ

ಮೈಸೂರು: ಮುಜರಾಯಿ ದೇವಸ್ಥಾನಗಳಲ್ಲಿ ಶೇ. 90 ರಷ್ಟು ಗ್ರಾಮೀಣ ಪ್ರದೇಶಗಳಲ್ಲಿವೆ. ಇಲ್ಲಿರುವ ಸಿ ವರ್ಗದ ದೇವಸ್ಥಾನ ಸಂಪೂರ್ಣ ಕಡೆಗಣಿಸಲ್ಪಟ್ಟಿವೆ. ಇವುಗಳ ಅರ್ಚಕರಿಗೆ ಸದ್ಯಕ್ಕೆ ನೀಡುತ್ತಿರುವ ಮಾಸಿಕ 6 ಸಾವಿರ ರೂ., ತಸ್ತೀಕ್ ಜೀವನ ನಡೆಸಲು ಸಾಲದ ಕಾರಣ ಸರ್ಕಾರ ಕೂಡಲೇ ಅದನ್ನು 10 ಸಾವಿರ ರೂ.ಗಳಿಗೆ ಏರಿಸಬೇಕೆಂದು ಅಖಿಲ ಕರ್ನಾಟಕ ಹಿಂದೂ ದೇವಾಲಯಗಳ ಅರ್ಚಕರ, ಆಗಮಿಕರ ಮತ್ತು ಉಪಾಧಿವಂತರ ಒಕ್ಕೂಟದ ಜಿಲ್ಲಾಧ್ಯಕ್ಷ ಬನ್ನೂರು ನಾಗರಾಜು ಮನವಿ ಮಾಡಿದರು.

ನಗರದಲ್ಲಿ ಸುದ್ದಿಗಾರರೊಡನೆ ಮಾತನಾಡಿ, ಈಗ ಬರುತ್ತಿರುವ ಹಣದಲ್ಲಿಯೇ ತಮ್ಮ ಕುಟುಂಬ ನಿರ್ವಹಣೆ ಮಾಡುವುದು ಕಷ್ಟಕರವಾಗಿರುವಾಗ ದೇವಸ್ಥಾನದ ಪೂಜಾ ಸಾಮಗ್ರಿ ಸಹಾ ಖರೀದಿಸಬೇಕು. ಇದು ಸಾಧ್ಯವೇ ಎಂದು ಪ್ರಶ್ನಿಸಿದರು. ಈ ದೇವಾಲಯಗಳಲ್ಲಿ ಸ್ವಚ್ಛತೆ ಕಾಯ್ದುಕೊಳ್ಳಲು ಕ್ರಮ ಕೈಗೊಳ್ಳಬೇಕು, ಶೌಚಾಲಯ ಸೂಕ್ತ ಸ್ಥಳದಲ್ಲಿ ನಿರ್ಮಿಸಬೇಕು, ಸಿ ವರ್ಗದ ದೇವಸ್ಥಾನಗಳ ಎಲ್ಲಾ ಅರ್ಚಕರು, ಪರಿಚಾರಕರಿಗೆ ವಿಮೆ, ಸೇವಾ ಭದ್ರತೆ ಒದಗಿಸಬೇಕು, ಬಿ ಮತ್ತು ಸಿ ವರ್ಗದ ಮುಜರಾಯಿ ದೇವಸ್ಥಾನಗಳಿಗೆ ಉಚಿತ ವಿದ್ಯುತ್ ನೀಡಬೇಕು, ನಿವೃತ್ತಿ ಆದೇಶ ರದ್ದುಗೊಳಿಸಬೇಕು, ಈ ದೇವಾಲಯಗಳು ಶಿಥಿಲವಾಗಿರುವುದರಿಂದ ಜೀರ್ಣೋದ್ಧಾರ ಮಾಡಿಸಬೇಕು. ಇವುಗಳಿಗೆ ಸೇರಿದ ಅಂಗಡಿ ಮಳಿಗೆಗಳ ಬಾಡಿಗೆ ಪರಿಷ್ಕರಿಸಬೇಕು, ಅನಿವಾರ್ಯ ಸಂದರ್ಭ ಎದುರಾದಾಗ ಪೊಲೀಸ್ ರಕ್ಷಣೆ ನೀಡಬೇಕು ಎಂಬಿವೇ ಮೊದಲಾದ ಬೇಡಿಕೆ ಈಡೇರಿಕೆಗೆ ಕೋರಿದರು. ಇನ್ನಿತರ ಪದಾಧಿಕಾರಿಗಳಾದ ಗೋವಿಂದರಾಜ್, ಬಸವರಾಜ್, ಕೆ.ಎಸ್.ಎ. ದೀಕ್ಷಿತ್, ಟಿ.ಕೆ. ಶ್ಯಾಮಸುಂದರ್ ದೀಕ್ಷಿತ್, ಕೆ. ಮಂಜುನಾಥ್ ಇದ್ದರು.




# ಪ್ರಾದೇಶಿಕ ಆಯುಕ್ತರ ಭೇಟಿ

ಮೈಸೂರು: ಮೈಸೂರು ಪ್ರಾದೇಶಿಕ ಆಯುಕ್ತ ನಿತೇಶ್ ಪಾಟೀಲ್ ತಾಲ್ಲೂಕು ಕಛೇರಿಗೆ ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಪರಿಶೀಲನೆ ನಂತರ ಅಧಿಕಾರಿಗಳು ಮತ್ತು ಸಿಬ್ಬಂದಿಗಳ ಸಭೆ ನಡೆಸಿ 1–5 ಪ್ರಕರಣಗಳು ಮತ್ತು ಪೋಡಿ ಪ್ರಕರಣಗಳು, ಇ–ಪೌತಿ ಖಾತೆಯ ಪ್ರಗತಿ, 94–ಡಿ ರಡಿ ಹಕ್ಕುಪತ್ರ ವಿತರಣೆ ಮತ್ತು ಇ–ಸ್ವತ್ತು, ಆರ್ ಆರ್ ಟಿ ತಿದ್ದುಪಡಿ ಬಾಕಿ ಇರುವ ಪ್ರಕರಣಗಳು ಹಾಗೂ ಆನ್‌ಲೈನ್‌ನಲ್ಲಿ ಆರ್ ಆರ್ ವೈ ಮಾಡ್ಯೂಲ್ ಪುಗತಿ ವಿವರ ಭೂಮಿ ಪಂಡಂನ್ಸಿ ,ಭೂ ಸುರಕ್ಷಾ, ಆರ್ ಸಿಸಿಎಂಎಸ್, ಭೂಮಿ ಭೂ ಸುರಕ್ಷಾ ?–ಆಫೀಸ್ ವಿಷಯಗಳ ಪ್ರಗತಿ ಕುರಿತು ಮಾಹಿತಿ ಪಡೆದುಕೊಂಡು ಸಲಹೆ ಹಾಗೂ ಸೂಚನೆಗಳನ್ನು ನೀಡಿದರು. ಸಭೆಯಲ್ಲಿ ಮೈಸೂರು ತಹಸೀಲ್ದಾರ್ ಮಹೇಶ್ ಉದ್ದರು.



# 30,366.00 ಲೀ.ಬಿಯರ್ ನಾಶ



ಮೈಸೂರು: ಕೆ.ಎಸ್.ಬಿ.ಸಿ.ಎಲ್. ಮೈಸೂರು ಡಿಪೋ–1 ಹಾಗೂ ಕೆ.ಎಸ್.ಬಿ.ಸಿ.ಎಲ್. ಮೈಸೂರು ಡಿಪೋ–2ನಲ್ಲಿ ಮಾರಾಟವಾಗದೇ ಉಳಿದಿದ್ದ ವಿವಿಧ ಮಾದರಿಯ ಒಟ್ಟು 30.366.00 ಲೀಟರ್ ಬಿಯರನ್ನು ಕೂರ್ಗಳ್ಳಿ ಡಿಪೋನಲ್ಲಿ ಮೈಸೂರು ನಗರ ಅಬಕಾರಿ ಉಪ ಅಧೀಕ್ಷಕರ ಆದೇಶದ ಮೇರೆಗೆ ಮೈಸೂರು ಉಪ ವಿಭಾಗದ ಅಬಕಾರಿ ಉಪ ಅಧೀಕ್ಷಕ ಹೆಚ್.ಕೆ.ರಮೇಶ್ ನೇತೃತ್ವದಲ್ಲಿ ನಾಶಪಡಿಸಲಾಯಿತು.

ಈ ಸಂದರ್ಭದಲ್ಲಿ ಕೆ.ಎಸ್.ಬಿ.ಸಿ.ಎಲ್. ಮೈಸೂರು ಡಿಪೋ–1 ಹಾಗೂ 2 ರ ವ್ಯವಸ್ಥಾಪಕರು, ಅಬಕಾರಿ ಅಧಿಕಾರಿಗಳು ಹಾಗೂ ಸಿಬ್ಬಂದಿಗಳು ಉಪಸ್ಥಿತರಿದ್ದರು.

# ಇಂದಿನಿಂದ ಭಾನವಿ ಆಸ್ಪತ್ರೆಯಲ್ಲಿ ರಿಯಾಯಿತಿ ತಪಾಸಣೆ

ಮೈಸೂರು: ವಿಶ್ವ ಮೂತ್ರಪಿಂಡ ದಿನಾಚರಣೆ ಪ್ರಯುಕ್ತ ನಗರದ ಭಾನವಿ ಆಸ್ಪತ್ರೆಯಲ್ಲಿ ಮಾರ್ಚ್ 12ರಿಂದ ಒಂದು ತಿಂಗಳವರೆಗೆ ಮೂತ್ರಪಿಂಡ ಆರೋಗ್ಯ ರಕ್ಷಣೆಗೆ ಅಗತ್ಯ ತಪಾಸಣೆಗಳನ್ನು ರಿಯಾಯಿತಿ ದರದಲ್ಲಿ ಮಾಡಲಾಗುವುದು ಎಂದು ಆಸ್ಪತ್ರೆಯ ವೈದ್ಯ ಕೆ.ಮನು ತಿಳಿಸಿದರು.

ನಗರದಲ್ಲಿ ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ?4,000 ಮೌಲ್ಯದ ವಿವಿಧ ತಪಾಸಣೆಗಳನ್ನು ಕೇವಲ 999 ದರದಲ್ಲಿ ಮಾಡಲಾಗುವುದು. ಪ್ರಸ್ತುತ ಮೂತ್ರಪಿಂಡ ಸಂಬಂಧಿ ಕಾಯಿಲೆಗಳು ಹೆಚ್ಚುತ್ತಿದ್ದು, ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಿ ಅಗತ್ಯ ಸಲಹೆ ನೀಡುವುದು ಕಾರ್ಯಕ್ರಮದ ಉದ್ದೇಶ ಎಂದರು. ಸುದ್ದಿಗೋಷ್ಠಿಯಲ್ಲಿ ಆಸ್ಪತ್ರೆ ಪ್ರಧಾನ ವ್ಯವಸ್ಥಾಪಕ ಆರ್.ಪ್ರಶಾಂತ್, ನರ್ಸಿಂಗ್ ಅಧೀಕ್ಷಕ ಕೆ.ಎಸ್.ನಿರಂಜನ್ ಸ್ವಾಮಿ ಇದ್ದರು.




## ಕೊಡಗು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ ಹಾಗೂ ಬೋಧಕ ಆಸ್ಪತ್ರೆ ಡೀನ್ ಮತ್ತು ನಿರ್ದೇಶಕ ಡಾ.ಲೋಕೇಶ್ ಹೇಳಿಕೆ

# ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ ಕಾರ್ಯಗತಕ್ಕೆ ನಿರಂತರ ಪ್ರಯತ್ನ

ಮಡಿಕೇರಿ: ಜಿಲ್ಲಾಸ್ಪತ್ರೆಯಲ್ಲಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯ ವ್ಯವಸ್ಥೆಯ ಕಲ್ಪಿಸುವ ನಿಟ್ಟಿನಲ್ಲಿ ಪ್ರಸ್ತಾಪವಿದ್ದು, ಇದನ್ನು ಕಾರ್ಯಗತಗೊಳಿಸುವ ನಿಟ್ಟಿನಲ್ಲಿ ನಿರಂತರ ಪ್ರಯತ್ನ ಸಾಗುತ್ತಿದೆ ಎಂದು ಕೊಡಗು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ ಹಾಗೂ ಬೋಧಕ ಆಸ್ಪತ್ರೆ (ಜಿಲ್ಲಾಸ್ಪತ್ರೆ) ಡೀನ್ ಮತ್ತು ನಿರ್ದೇಶಕ ಡಾ. ಲೋಕೇಶ್ ಹೇಳಿದರು.

ಕೊಡಗು ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ವತಿಯಿಂದ ಇತ್ತೀಚಿಗೆ ಜಿಲ್ಲಾಸ್ಪತ್ರೆ ಡೀನ್ ಅವರೊಂದಿಗೆ ಆಯೋಜಿಸಲಾಗಿದ್ದ ಸಂವಾದ ಕಾರ್ಯಕ್ರಮದಲ್ಲಿ ಚರ್ಚಿಸಲಾದ ವಿಷಯಗಳ ಕುರಿತ ಪ್ರಗತಿ ಹಾಗೂ ಅನುಷ್ಠಾನ ಕುರಿತು ಮಾಹಿತಿ ಪಡೆಯುವ ನಿಟ್ಟಿನಲ್ಲಿ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಬಾಚರಣಿಯಂಡ ಅನು ಕಾರ್ಯಪ್ಪ ನೇತೃತ್ವದಲ್ಲಿ ಪತ್ರಕರ್ತರು ಜಿಲ್ಲಾಸ್ಪತ್ರೆಗೆ ತೆರಳಿ ವೈದ್ಯಾಧಿಕಾರಿಗಳೊಂದಿಗೆ ಚರ್ಚಿಸಿ, ಅಭಿವೃದ್ಧಿ ಕಾರ್ಯಗಳನ್ನು ವೀಕ್ಷಿಸಿದರು.



ಈ ಸಂದರ್ಭ ಪತ್ರಕರ್ತರೊಂದಿಗೆ ಮಾತನಾಡಿದ ಡಾ. ಲೋಕೇಶ್, ಪ್ರಸ್ತುತ ಜಿಲ್ಲಾಸ್ಪತ್ರೆ ವೇಗದಲ್ಲಿ ಅಭಿವೃದ್ಧಿ ಕಾಣುತ್ತಿದೆ. ವೈದ್ಯರ ಕೊರತೆಯಿದ್ದರೂ ಇರುವ ವೈದ್ಯರಿಂದ ರೋಗಿಗಳಿಗೆ ಅಗತ್ಯ ಚಿಕಿತ್ಸೆಯನ್ನು ನೀಡಲಾಗುತ್ತಿದೆ. ರೇಡಿಯೋಲಾಜಿಸ್ಟ್ ಹೊರತುಪಡಿಸಿ ಬೇರೆಲ್ಲ ವಿಭಾಗದಲ್ಲೂ ವೈದ್ಯರಿದ್ದು, ಹುದ್ದೆ ಭರ್ತಿಗೆ ಆಹ್ವಾನಿಸಲಾಗಿದೆ. ಆದರೆ, ಕೊಡಗಿಗೆ ನಿಯೋಜನೆಗಳು ವೈದ್ಯರು ಹಿಂದೇಟು ಹಾಕುತ್ತಿದ್ದಾರೆ ಎಂದು ಅಸಹಾಯಕತೆ ವ್ಯಕ್ತಪಡಿಸಿದರು.

ಅರ್ಥೋಪೆಡಿಕ್ ಸಮಸ್ಯೆಗೆ ರೋಬಾಟಿಕ್ ಸರ್ಜರಿಗೆ ಪೂರಕ ಯಂತ್ರೋಪಕರಣ ಖರೀದಿಗೆ ಟೆಂಡರ್ ಆಹ್ವಾನಿಸಲಾಗಿದೆ. ಈಗಾಗಲೇ ಕಿದ್ವಾಯಿ, ಬೆಂಗಳೂರಿನ ಸಂಜಯ್ ಗಾಂಧಿ ಆಸ್ಪತ್ರೆಯಲ್ಲಿ ರೋಬಾಟಿಕ್ ಶಸ್ತ್ರಚಿಕಿತ್ಸೆ ವ್ಯವಸ್ಥೆ ಇದೆ. ಮೆಮೋಗ್ರಾಫಿ ಚಿಕಿತ್ಸೆ, ಹೈಟೆಕ್ ಆ್ಯಂಬ್ಯುಲೆನ್ಸ್, ಡೇ ಕೇರ್ ಕಿಮೋ ಥೆರಪಿ ಆರಂಭಕ್ಕೂ ಕ್ರಮವಹಿಸಲಾಗುವುದು ಎಂದರು. ರೂ. 29 ಕೋಟಿ ವೆಚ್ಚದದಲ್ಲಿ ಕ್ರಿಟಿಕಲ್ ಕೇರ್ ಸೆಂಟರ್ ಹಾಗೂ ಕಾವೇರಿ ಬ್ಲಾಕ್ ಕಟ್ಟಡ ನಿರ್ಮಾಣ ಪ್ರಗತಿಯಲ್ಲಿದ್ದು, ಮೇ ತಿಂಗಳಿನಲ್ಲಿ ಪೂರ್ಣಗೊಳಿಸುವ ಗುರಿ ಹೊಂದಲಾಗಿದೆ. ತುರ್ತು ಚಿಕಿತ್ಸೆಗೆ ಕ್ರಿಟಿಕಲ್ ಕೇರ್ ಸೆಂಟರ್ ಸಹಾಯವಾಗಲಿದ್ದು, ಹೊಸ ಕಾವೇರಿ ಬ್ಲಾಕ್‌ನಲ್ಲಿ ಮತ್ತಷ್ಟು ಹಾಸಿಗೆ ಸಾಮರ್ಥ್ಯದ ಆಸ್ಪತ್ರೆಯೊಂದಿಗೆ ನಿಗಾ ಘಟಕವನ್ನು ಹೆಚ್ಚಿಸಲಾಗುವುದು. ಶಸ್ತ್ರ ಚಿಕಿತ್ಸೆ ಕೊಠಡಿಯೂ ಹೆಚ್ಚಾಗಲಿದೆ ಎಂದು ಡಾ. ಲೋಕೇಶ್ ಮಾಹಿತಿ ನೀಡಿದರು.

ವೈದ್ಯಕೀಯ ಅಧೀಕ್ಷಕ ಡಾ. ಸೋಮಶೇಖರ್ ಮಾತನಾಡಿ, ಮಹಿಳಾ ಮತ್ತು ಮಕ್ಕಳ ವಿಭಾಗದಲ್ಲಿ ಅತ್ಯಂತ ಗುಣಮಟ್ಟದ ಸೇವೆಯನ್ನು ಒದಗಿಸಲಾಗುತ್ತಿದೆ. ಕ್ರಿಟಿಕಲ್ ಕೇರ್ ಸೆಂಟರ್‌ನಿಂದಲೂ ಹೆಚ್ಚಿನ ಪ್ರಯೋಜನವಾಗಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು. ಜಿಲ್ಲಾ ಶಸ್ತ್ರಚಿಕಿತ್ಸಕ ಡಾ. ನಂಜುಂಡಯ್ಯ ಮಾತನಾಡಿ, ಸ್ಕ್ಯಾನಿಂಗ್ ಸೇವೆಗಳನ್ನು ಒಂದೇ ಕಟ್ಟಡದಲ್ಲಿ ತರಲಾಗುವುದು. ಒಪಿಡಿ ಕೌಂಟರ್‌ಗಳನ್ನು ಹೆಚ್ಚಿಸಲಾಗುವುದು. ಹೆಲ್ಪ್ ಡೆಸ್ಕ್ ಸ್ಥಾಪಿಸಲಾಗುವುದು. ಐಟಿಡಿಪಿ ಇಲಾಖೆಯಿಂದ 2 ಸಿಬ್ಬಂದಿ ನಿಯೋಜನೆಯಾಗಲಿದ್ದು, ಅವರಿಂದಲೂ ರೋಗಿಗಳಿಗೆ ಸಹಾಯ ದೊರೆಯಲಿದೆ ಎಂದು ವಿವರಿಸಿದರು. ಸ್ಥಾನೀಯ ವೈದ್ಯಾಧಿಕಾರಿಗಳಾದ ಡಾ. ಧನಂಜಯ್, ಡಾ. ಅಭಿನಂದನ್ ಹಾಗೂ ಸಾಮಾನ್ಯ ವೈದ್ಯ ಶಾಸ್ತ್ರ ವಿಭಾಗದ ವೈದ್ಯ ಡಾ. ಪವನ್ ಹಾಜರಿದ್ದರು.

# ಸಂಕ್ಷಿಪ್ತ ಸುದ್ದಿ

## ಪ್ರಶಸ್ತಿಗಾಗಿ ಅರ್ಜಿ ಸಲ್ಲಿಸುವ ಅವಧಿ ವಿಸ್ತರಣೆ

**ಪಾವಗಡ :**ತಾಲ್ಲೂಕು ಸಮಾಜ ಕಲ್ಯಾಣ ಇಲಾಖೆ ವತಿಯಿಂದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ಜನಾಂಗದವರ ಶ್ರೇಯಸ್ಸಿ ಗಾಗಿ ಪ್ರೋತ್ಸಾ ಹಿಸಿ, ಶ್ರಮಿಸಿ ಗಣನೀಯ ಸೇವೆ ಸಲ್ಲಿಸಿದ ಅರ್ಹ ವ್ಯಕ್ತಿಗಳನ್ನು ಗುರುತಿಸಿ ರಾಜ್ಯ ಮಟ್ಟದಲ್ಲಿ ಪ್ರಶಸ್ತಿ ನೀಡಲು ಅರ್ಜಿ ಅಹ್ವಾನಿಸಲಾಗಿದ್ದು, ಅರ್ಜಿ ಸಲ್ಲಿಸುವ ಅವಧಿಯನ್ನು ಮಾರ್ಚ್ 15ರವರೆಗೆ ವಿಸ್ತರಿಸಲಾಗಿದೆ.

ಪ್ರಶಸ್ತಿಯನ್ನು 2026ರ ಏಪ್ರಿಲ್ 5ರಂದು ಆಚರಿಸುವ ಡಾ: ಬಾಬು ಜಗ ಜೀವನರಾಂ ಅವರ 119ನೇ ಜನ್ಮ ದಿನಾಚರಣೆ ಹಾಗೂ ಏಪ್ರಿಲ್ 14ರಂದು ಆಚರಿಸುವ ಡಾ: ಬಿ.ಆರ್. ಅಂಬೇಡ್ಕರ್ ಅವರ 135ನೇ ಜನ್ಮ ದಿನಾಚರಣೆಯ ದಿನದಂದು ರಾಜ್ಯ ಮಟ್ಟದಲ್ಲಿ ನೀಡಲಾಗುವುದು.

ಆಸಕ್ತರು ಮಾರ್ಚ್ 15ರೊಳಗಾಗಿ ಪಾವಗಡ ತಾಲ್ಲೂಕಿನ ಸಮಾಜ ಕಲ್ಯಾಣ ಇಲಾಖೆಯ ಸಹಾಯಕ ನಿರ್ದೇಶಕರು–ಗ್ರೇಡ್–01 ಕಚೇರಿಯನ್ನು ಸಂಪರ್ಕಿಸಿ ಅವಶ್ಯಕ ದಾಖಲೆಗಳೊಂದಿಗೆ ಅರ್ಜಿ ಸಲ್ಲಿಸಬಹುದಾಗಿದೆ ಎಂದು ಇಲಾಖೆಯ ಸಹಾಯಕ ನಿರ್ದೇಶಕ ಜೆ.ಇ.ಮಲ್ಲಿಕಾರ್ಜುನಯ್ಯ ಮನವಿ ಮಾಡಿದ್ದಾರೆ.

## ನೊಂದ ಮಹಿಳೆಯರಿಂದ ದೂರು ಸ್ವೀಕಾರ

**ತುಮಕೂರು:** ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಅಂಗವಾಗಿ ರಾಷ್ಟ್ರೀಯ ಮತ್ತು ರಾಜ್ಯ ಮಹಿಳಾ ಆಯೋಗಗಳು ಮಾರ್ಚ್ 7 ರಿಂದ 13ರವರೆಗೆ ದೇಶಾದ್ಯಂತ "ಜನ್ ಸುನ್ವಾಯಿ(ಸಾರ್ವಜನಿಕ ವಿಚಾರಣೆ)" ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದು, ಇದರ ಅಂಗವಾಗಿ ನಗರದ ಜಿಲ್ಲಾ ಬಾಲಭವನ ಆವರಣದಲ್ಲಿ ಮಾರ್ಚ್ 12ರಂದು ಬೆಳಿಗ್ಗೆ 10 ಗಂಟೆಗೆ ಕರ್ನಾಟಕ ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷೆ ಡಾ॥ ನಾಗಲಕ್ಷ್ಮಿ ಚೌದರಿ ಹಾಗೂ ಕಾರ್ಯದರ್ಶಿ ರೂಪ ಅವರು ಸಾರ್ವಜನಿಕರಿಂದ ಹಾಗೂ ನೊಂದ ಮಹಿಳೆಯರಿಂದ ಅಹವಾಲು ಸ್ವೀಕರಿಸುವರು. ಸಾರ್ವಜನಿಕರು ಹಾಗೂ ನೊಂದ ಮಹಿಳೆಯರು ಈ ಅವಕಾಶವನ್ನು ಸದುಪಯೋಗ ಪಡಿಸಿಕೊಳ್ಳಬೇಕೆಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಉಪನಿರ್ದೇಶಕರು ಮನವಿ ಮಾಡಿದ್ದಾರೆ.

## ಅರ್ಜಿ ಆಹ್ವಾನ

**ತುಮಕೂರು:** ಡಿ. ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದಿಂದ 2025–26ನೇ ಸಾಲಿಗೆ ಆಹಾರ ವಾಹಿನಿ(ಆಹಾರ ಕಿಯೋಸ್ಕ್) ಯೋಜನೆಯಡಿ 3 ಲಕ್ಷ ರೂ.ಗಳ ಸಹಾಯಧನ ಸೌಲಭ್ಯ ಕಲ್ಪಿಸಲು ಸೇವಾಸಿಂಧು ತಂತ್ರಾಂಶದ ಮೂಲಕ ಆನ್‌ಲೈನ್‌ನಲ್ಲಿ ಅರ್ಜಿ ಆಹ್ವಾನಿಸಲಾಗಿದೆ.

ಆಹಾರ ವಾಹಿನಿ(ಆಹಾರ ಕಿಯೋಸ್ಕ್) ಯೋಜನೆಯಡಿ ಸ್ಥಳಾಂತರಿಸಬಹುದಾದ ತಿಂಡಿ ಮಳಿಗೆಗಳನ್ನು ನಾಲ್ಕು ಚಕ್ರಗಳ ಇಗಿ ಗೂಡ್ಸ್ ವಾಹನಗಳನ್ನು ಅಗತ್ಯಕ್ಕೆ ತಕ್ಕಂತೆ ನವೀಕರಿಸಿ ಫಲಾನುಭವಿಗಳಿಗೆ ವಿತರಿಸುವ ಯೋಜನೆಯಾಗಿದೆ. ನಿಗಮದಿಂದ ವಾಹನ ಖರೀದಿಗೆ 3 ಲಕ್ಷ ರೂ.ಗಳ ಸಹಾಯಧನವನ್ನು ಬಿಡುಗಡೆ ಮಾಡಲಾಗುವುದು. ಉಳಿಕೆ ಮೊತ್ತವನ್ನು ಬ್ಯಾಂಕ್/ಹಣಕಾಸು ಸಂಸ್ಥೆಗಳಿಂದ ಸಾಲ ಪಡೆಯಬಹುದಾಗಿದೆ.

## ಜನಸಂಪರ್ಕ ಸಭೆ



**ತುಮಕೂರು:** ಜಿಲ್ಲೆಯ ನಾಗರಿಕರಿಂದ ಅಹವಾಲು ಸ್ವೀಕರಿಸಿ/ಸಮಸ್ಯೆಗಳನ್ನು ಆಲಿಸಿ ಸಮಸ್ಯೆಗಳಿಗೆ ಪರಿಹಾರೋಪಾಯಗಳನ್ನು ಒದಗಿಸುವ ಸಲುವಾಗಿ ಮಾರ್ಚ್ 13ರಂದು ಕೊರಟಗೆರೆ ತಾಲ್ಲೂಕು ಕಚೇರಿ ಸಭಾಂಗಣದಲ್ಲಿ ಬೆಳಿಗ್ಗೆ 10 ರಿಂದ ಮಧ್ಯಾಹ್ನ 1 ಗಂಟೆಯವರೆಗೆ ಹಾಗೂ ಶಿರಾ ತಾಲ್ಲೂಕು ಕಚೇರಿ ಸಭಾಂಗಣದಲ್ಲಿ ಮಧ್ಯಾಹ್ನ 2.30 ರಿಂದ ಸಂಜೆ 5.30 ಗಂಟೆಯವರೆಗೆ 'ಜನಸಂಪರ್ಕ ಸಭೆ'ಯನ್ನು ಏರ್ಪಡಿಸಲಾಗಿದೆ.

ಕೊರಟಗೆರೆ ಹಾಗೂ ಶಿರಾ ತಾಲ್ಲೂಕಿನ ನಾಗರಿಕರು ಇದರ ಸದುಪಯೋಗ ಪಡೆದುಕೊಳ್ಳಬೇಕೆಂದು ಜಿಲ್ಲಾಧಿಕಾರಿ ಶುಭ ಕಲ್ಯಾಣ್ ತಿಳಿಸಿದ್ದಾರೆ.

# ರಾಜ್ಯ ಸರ್ಕಾರದಿಂದ ಎಸ್‌ಇಪಿ, ಟಿಎಸ್ ಅನುದಾನ ದುರ್ಬಳಕೆ

**ಚಾಮರಾಜನಗರ:** ಮತ್ತೆ ರಾಜ್ಯ ಸರ್ಕಾರ ಎಸ್‌ಇಪಿ, ಟಿಎಸ್‌ಪಿ ಅನುದಾನವನ್ನು ಗ್ಯಾರಂಟಿ ಯೋಜನೆಗಳಿಗೆ ದುರ್ಬಳಕೆ ಮಾಡಿಕೊಂಡಿದೆ ಎಂದು ಬಿಜೆಪಿ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಮೂಡ್ನಾಕೂಡು ಪ್ರಕಾಶ್ ಆರೋಪಿಸಿದರು.

## ಮೂಡ್ನಾಕೂಡು ಪ್ರಕಾಶ್ ಆರೋಪ



ನಗರದ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಭವನದಲ್ಲಿ ಕರೆದಿದ್ದ ಪತ್ರಿಕಾಗೋಷ್ಠಿಯಲ್ಲಿ ಅವರು ಮಾತನಾಡಿ,ಈ ಸಾಲಿನಲ್ಲಿ ಎಸ್‌ಇಪಿ, ಟಿಎಸ್‌ಪಿಗೆ ಸರ್ಕಾರವು 44 ಸಾವಿರ ಕೋಟಿ ಅನುದಾನವನ್ನು ಮೀಸಲಿಟ್ಟಿತ್ತು. ಅದರಲ್ಲಿ 14 ಸಾವಿರ ಕೋಟಿಯನ್ನು ಗ್ಯಾರಂ ಟಿ ಯೋಜನೆಗಳಿಗೆ ಬಳಕೆ ಮಾಡಿಕೊಂಡಿದ್ದು ಸಮಾಜ ಕಲ್ಯಾಣ ಇಲಾಖೆಗೆ ಕೇವಲ 7 ಸಾವಿರ ಕೋಟಿಯನ್ನು ಹಂಚಿಕೆ ಮಾಡ ಲಾಗಿದೆ ಎಂದು ಅಪಾದಿಸಿದರು.

ಎಸ್‌ಇಪಿ, ಟಿಎಸ್ಪಿ ಅನುದಾನವನ್ನು ಗ್ಯಾರಂಟಿ ಯೋಜನೆಗಳಿಗೆ ಬಳಕೆ ಮಾಡದಂತೆ ದಲಿತ ಶಾಸಕರು ಸಿಎಂ ಸಿದ್ದರಾಮಯ್ಯ ಅವರನ್ನು ಕೇಳಿಕೊಂಡರು ಕೂಡ ಇದಕ್ಕೆ ಕ್ಯಾರೆ ಎನ್ನದೇ ಅನುದಾನ ದುರ್ಬಳಕೆ ಮಾಡಿಕೊಳ್ಳಲಾಗಿದೆ ಎಂದರು.

ಕಳೆದ ಬಿಜೆಪಿ ಸರ್ಕಾರದ ಅವಧಿಯಲ್ಲಿ ದಲಿತರಿಗೆ ಸಾಕಷ್ಟು ಯೋಜನೆಗಳ ಮೂಲಕ ಅನುದಾನ ಮೀಸಲಿಡಲಾಗಿತ್ತು.

ಹೆಚ್.ಸಿ ಮಹದೇವಪ್ಪ ಸಮಾಜಕಲ್ಯಾಣ ಸಚಿವರು ಆಗಿದ್ದರು. ಇಲಾಖೆಯು ಮುಖ್ಯಮಂತ್ರಿ ಸಿದ್ದರಾಮಯ್ಯ, ಯತೀಂದ್ರ ಅವರ ಕೈಯಲ್ಲಿ ಬಂಧಿಯಾಗಿದೆ ಎಂಬ ಸಂಶಯ ಮೂಡಿದೆ ಇನ್ನಾದರೂ ಸಮುದಾಯದ ಸ್ವಾಮೀಜಿಗಳು, ಮುಖಂಡರು ಸಮುದಾಯದ ಒಳಿತಿಗಾಗಿ ಧ್ವನಿಯಾಗಬೇಕು. ಕೂಡಲೇ 14 ಸಾವಿರ ಕೋಟಿಯನ್ನು ದುರುಪಯೋಗವಾಗದಂತೆ ತಡೆಯಬೇಕು. ಅನುದಾನ ದುರ್ಬಳಕೆ ಮಾಡಿಕೊಳ್ಳುವ ಬದಲು ದಲಿತ ಸಂಬಂಧಿಸಿದ ನಿಗಮಗಳಿಗೆ ಬೀಗ ಹಾಕಿಸಿದರೆ ಸಮುದಾಯದ ಜನ ನೆಮ್ಮದಿಯಾಗಿ ಜೀವನ ನಡೆಸುತ್ತಾರೆ ಎಂದರು.

ಇಲ್ಲಿಯ ತನಕ 1,56,701 ಕೋಟಿ ಅನುದಾನವನ್ನು ದಲಿತರಿಗೆ ಮೀಸಲಿಟ್ಟದ್ದು ಇದರಲ್ಲಿ 53,500 ಕೋಟಿ ಅನುದಾನ ದುರ್ಬಳಕೆಯಾಗಿದೆ. ಕೂಡಲೇ ಸಮುದಾಯದವರು ಜಾಗೃತರಾಗಬೇಕು ಎಂದರು

ಮುಖಂಡರಾದ ಮಂಜು ಕೋಡಿಉಗನೆ ಮಾತನಾಡಿ, ರಾಜ್ಯ ಕಾಂಗ್ರೆಸ್ ಸರ್ಕಾರ ಬಜೆಟ್ ನಲ್ಲಿ ದಲಿತ ಕಲ್ಯಾಣಕ್ಕಾಗಿ ಮೀಸಲಿಟ್ಟ ಅನುದಾನವನ್ನು ಅನ್ಯ ಕಾರ್ಯಕ್ರಮಗಳಿಗೆ ಬಳಸುವ ಮೂಲಕ ದಲಿತರಿಗೆ ಮೋಸ ಮಾಡುವುದು ಸರಿಯಲ್ಲ. ರಾಜ್ಯ ಸರ್ಕಾರ ಬಜೆಟ್ ನಲ್ಲಿ ಹನೂರು ತಾಲೂಕು ಅಭಿವೃದ್ಧಿ ಗಾಗಿ 490 ,ಕೋಟಿ ಬಿಡುಗಡೆ ಮಾಡಿರುವುದಕ್ಕೆ ಕ್ಷೇತ್ರದ ಸಂಸದ ಸುನೀಲ್ ಬೋಸ್ ಮುಖ್ಯಮಂತ್ರಿಗಳಿಗೆ ಅಭಿನಂದನೆ ಸಲ್ಲಿಸಿದ್ದಾರೆ. ಅದಕ್ಕೆ ಬದಲಾಗಿ ಕೇಂದ್ರ ಸರ್ಕಾರದಿಂದ ಹನೂರಿಗೆ ಅನುದಾನ ತರಲಿ ಎಂದು ಒತ್ತಾಯಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಬಿಜೆಪಿ ಜಿಲ್ಲಾ ಕಾರ್ಯದರ್ಶಿ ಮೂರ್ತಿ, ಎಸ್ಸಿ ಮೋರ್ಚಾ ಪ್ರಧಾನ ಕಾರ್ಯದರ್ಶಿ ಪರಮೇಶ್, ಶೇಷಪ್ಪ ಪಾಸ್ವಾನ್, ರಾಮಸಮುದ್ರ ಶಿವಣ್ಣ ಹಾಜರಿದ್ದರು.

# ಕಬ್ಬು ಬೆಳೆಗಾರರಿಗೆ ಹೆಚ್ಚುವರಿ ಕಬ್ಬಿನ ಹಣವನ್ನು ಪಾವತಿಸಿ: ಕುಮಾರ



**ಮಂಡ್ಯ:** ಕಬ್ಬು ಬೆಳೆಗಾರರಿಗೆ ರಾಜ್ಯ ಸರ್ಕಾರ ಹಾಗೂ ಸಕ್ಕರೆ ಕಾರ್ಖಾನೆಗಳೆರಡು ಸೇರಿ ಪ್ರತಿ ಟನ್ ಕಬ್ಬಿಗೆ ಬಾಕಿ ನೀಡಬೇಕಾಗಿರುವ ರೂ 100 ಹೆಚ್ಚುವರಿ ಹಣವನ್ನು ರೈತರ ಖಾತೆಗೆ ಹಣ ಸಂದಾಯ ಮಾಡಬೇಕು ಎಂದು ಸಕ್ಕರೆ ಕಾರ್ಖಾನೆ ಮಾಲೀಕರಿಗೆ ಜಿಲ್ಲಾಧಿಕಾರಿಗಳು ಸೂಚನೆ ನೀಡಿದರು.

ಜಿಲ್ಲಾಧಿಕಾರಿಗಳ ಕಛೇರಿಯಲ್ಲಿ ಬುಧವಾರ ಕಬ್ಬು ಸರಬರಾಜು ಹೆಚ್ಚುವರಿ ಕಬ್ಬಿನ ಬೆಲೆ ಕುರಿತು ಜಿಲ್ಲಾಧಿಕಾರಿಗಳು ಸಕ್ಕರೆ ಕಾರ್ಖಾನೆ ಮಾಲೀಕರೊಂದಿಗೆ ಸಭೆ ನಡೆಸಿ ಮಾತನಾಡಿದರು.

2025–26ನೇ ಸಾಲಿನಲ್ಲಿ ಸಕ್ಕರೆ ಕಾರ್ಖಾನೆಗಳಿಗೆ ಕಬ್ಬು ಪೂರೈಸಿದ ರೈತರಿಗೆ ಎಫ್‌ಆರ್‌ಪಿ (ಈಖಿಕ) ಮೇಲೆ ಪ್ರತಿ ಟನ್‌ಗೆ ?100 ಹೆಚ್ಚುವರಿ ಹಣವನ್ನು ಜಮಾ ಮಾಡಲು ತೀರ್ಮಾನಿಸಲಾಗಿದೆ.

ಇದರಲ್ಲಿ ರಾಜ್ಯ ಸರ್ಕಾರವು ?50 ಆರ್ಥಿಕ ನೆರವು ಮತ್ತು ಕಾರ್ಖಾನೆಗಳು ಹೆಚ್ಚುವರಿ ?50 ಸೇರಿಸಿ, ಒಟ್ಟು ?100 ರೈತರ ಖಾತೆಗೆ ನೇರವಾಗಿ ಜಮಾ ಮಾಡಬೇಕು. ಈಗಾಗಲೇ ಸರ್ಕಾರದ ಹಂತದಲ್ಲಿ ಈಗಾಗಲೇ ಹಣವನ್ನು ಬಿಡುಗಡೆಯಾಗಿದ್ದು ಕಾರ್ಖಾನೆಯವರು ಯಾವುದೇ ಸಬೂಬು ಹೇಳದೇ ರೈತರ ಹಣ ಸಂದಾಯ ಮಾಡಬೇಕು ಎಂದು ಜಿಲ್ಲಾಧಿಕಾರಿಗಳು ನಿರ್ದೇಶನ ನೀಡಿದರು.

ಸರ್ಕಾರದ ಆದೇಶವನ್ನು ಸಕ್ಕರೆ ಕಾರ್ಖಾನೆ ಮಾಲೀಕರು ಪಾಲಿಸಬೇಕು. ಮಂಡ್ಯ ಸಕ್ಕರೆ ಕಾರ್ಖಾನೆಯ ಮಾಲೀಕರು ಸರ್ಕಾರ ನೀಡಿರುವ ರೂ 50ಗಳನ್ನು ಸಹಾಯ ಧನವನ್ನು ಪಡೆದು ಕಾರ್ಖಾನೆಯ ಹೆಚ್ಚುವರಿ ಹಣ 50 ಸೇರಿಸಿ ಒಟ್ಟು ರೂ 100 ರೈತರ ಖಾತೆಗೆ ಸಂದಾಯ ಮಾಡಬೇಕು ಎಂದು ತಿಳಿಸಿದರು. ಸಭೆಯಲ್ಲಿ ಆಹಾರ ಮತ್ತು ನಾಗರೀಕ ಪೂರೈಕೆ ಇಲಾಖೆಯ ಜಂಟಿ ನಿರ್ದೇಶಕರಾದ ಪ್ರತೀಕ್ ಹೆಗ್ಡೆ ಹಾಗೂ ಸಕ್ಕರೆ ಕಾರ್ಖಾನೆಯ ಮಾಲೀಕರು ಉಪಸ್ಥಿತರಿದ್ದರು.

### ಬೆಂಗಳೂರಿನಲ್ಲಿ ಒಳ ಮೀಸಲಾತಿ ಹೋರಾಟ ಸಮಿತಿಯಿಂದ ಬೃಹತ್ ಪ್ರತಿಭಟನೆ:

# ಜಿಲ್ಲೆಯಿಂದ ಸಾವಿರಕ್ಕೂ ಅಧಿಕ ಮಂದಿ ಭಾಗಿ



- **ಸಚಿವ ಹೆಚ್.ಸಿ. ಮಹದೇವಪ್ಪರಿಂದ ಮಾದಿಗ ಸಮುದಾಯಕ್ಕೆ ಅನ್ಯಾಯ: ಬಸವನಪುರ ರಾಜಶೇಖರ ಆರೋಪ**

ಚಾಮರಾಜನಗರ: ಒಳಮೀಸಲಾತಿಯಿಲ್ಲದೆ ಉದ್ಯೋಗ ಭರ್ತಿ ಮಾಡುವ ಕಾಂಗ್ರೆಸ್ ಸರ್ಕಾರದ ಮಹಾದ್ರೋಹ ಖಂಡಿಸಿ ಒಳಮೀಸಲಾತಿ ಹೋರಾಟ ಸಮಿತಿಯಿಂದ ವತಿಯಿಂದ ಮಾ.12 ರಂದು ಬೆಂಗಳೂರಿನ ಸ್ವಾತಂತ್ರ್ಯ ಉದ್ಯಾನವನದಲ್ಲಿ ಬೃಹತ್ ಪ್ರತಿಭಟನೆ ಹಮ್ಮಿಕೊಳ್ಳಲಾಗಿದ್ದು, ಈ ಪ್ರತಿಭಟನೆಗೆ ಜಿಲ್ಲೆಯಿಂದ ಸಾವಿರಕ್ಕೂ ಅಧಿಕ ಮುಖಂಡರು 20 ಬಸ್ಸಿನಲ್ಲಿ ಭಾಗವಹಿಸುತ್ತೇನೆ ಎಂದು ಡಾ.ಬಾಬುಜಗಜೀವನರಾಂ ಸಂಘಟನೆಗಳ ಒಕ್ಕೂಟ ಗೌರವಾಧ್ಯಕ್ಷ ಬಸವನಪುರ ರಾಜಶೇಖರ ತಿಳಿಸಿದರು.

ನಗರದ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಭವನದಲ್ಲಿ ಕರೆದಿದ್ದ ಪತ್ರಿಕಾಗೋಷ್ಠಿಯಲ್ಲಿ ಅವರು ಮಾತನಾಡಿ, ಒಳ ಮೀಸಲಾತಿ ವಿಧೇಯಕವು ರಾಜ್ಯಪಾಲರ ಸಹಿ ಪಡೆದು ಅನುಮೋದನೆಗೊಂಡಿದೆ ಎಂದು ಸಂತೋಷ ಪಡುವ ಸಂದರ್ಭದಲ್ಲಿ ಒಳ ಮೀಸಲಾತಿ ಅನ್ವಯವಾಗದಂತೆ 56 ಸಾವಿರ ಹುದ್ದೆಗಳನ್ನು ಭರ್ತಿ ಮಾಡುತ್ತೇವೆ ಎಂಬ ಮಾರ್ಚ್ 16ರ ಸಚಿವ ಸಂಪುಟದ ತೀರ್ಮಾನ ಸಂವಿಧಾನ ಮತ್ತು ಸಾಮಾಜಿಕ ನ್ಯಾಯಕ್ಕೆ ಬಗೆದ ಘೋರ ಅನ್ಯಾಯವಾಗಿದೆ ಎಂದು ಆರೋಪಿಸಿದರು.

ಈ. ಮೂಲಕ 35 ವರ್ಷಗಳ ಒಳ ಮೀಸಲಾತಿ ಹೋರಾಟಕ್ಕೆ ಮಹಾದ್ರೋಹ ಎಸಗಲಾಗಿದೆ. ಸರ್ಕಾರದ ಈ ತೀರ್ಮಾನವನ್ನು ಒಳ ಮೀಸಲಾತಿ ಹೋರಾಟಗಾರರು, ಸಾಮಾಜಿಕ ನ್ಯಾಯದ ಪರವಿರುವ ಪ್ರಜ್ಞಾವಂತರೆಲ್ಲರೂ ಒಕ್ಕೊರಲಿನಿಂದ ಉಗ್ರವಾಗಿ ಖಂಡಿಸುತ್ತೇವೆ ಎಂದರು.

ಚುನಾವಣೆ ಪೂರ್ವದಲ್ಲಿ ಸರ್ಕಾರ ಬಂದ ಮೊದಲನೇ ಅಧಿವೇಶನದಲ್ಲಿಯೇ ಒಳ ಮೀಸಲಾತಿಯನ್ನು ನಮ್ಮ ಸರ್ಕಾರ ಜಾರಿಗೊಳಿಸುತ್ತದೆ ಎಂದು ಪ್ರಣಾಳಿಕೆಯಲ್ಲಿ ಕಾಂಗ್ರೆಸ್ ಘೋಷಿಸಿತ್ತು. ಚಿತ್ರದುರ್ಗ ಸಮಾವೇಶದಲ್ಲಿಯೂ ಅದೇ ಭರವಸೆ ನೀಡಲಾಗಿತ್ತು. ಸರ್ಕಾರ ಬಂದು 2 ವರ್ಷ ಮುಗಿಯುತ್ತಿದ್ದರೂ ಒಳ ಮೀಸಲಾತಿಯನ್ನು ಜಾರಿಗೊಳಿಸುವ ಪ್ರಾಮಾಣಿಕ ಪ್ರಯತ್ನ ನಡೆಸಲಿಲ್ಲ. ಅಂತಿಮವಾಗಿ ಸುಪ್ರೀಂ ಕೋರ್ಟಿನ ತೀರ್ಪಿನ ನಂತರ ಹೋರಾಟದ ಒತ್ತಡಕ್ಕೆ ಮಣಿದು ಸಚಿವ ಸಂಪುಟದಲ್ಲಿ ಒಳ ಮೀಸಲಾತಿ ಜಾರಿಗೆ ತರುತ್ತೇವೆಂದು ತಾತ್ವಿಕವಾಗಿ ಒಪ್ಪಿಕೊಂಡು 25 ಆಗಸ್ಟ್ 2025 ರಂದು ಆದೇಶ ಹೊರಡಿಸಿದಿರಿ. 2025ರ ಚಳಿಗಾಲದ ಅಧಿವೇಶನದಲ್ಲಿ ಶಾಸನ ಬದ್ಧ ಕಾಯ್ದೆ ಮಾಡಿಕೊಂಡು ರಾಜ್ಯಪಾಲರಿಂದ ಅಂತಿಮ ಅಂಗೀಕಾರ ಪಡೆಯಲಾಗಿದೆ. ಇಷ್ಟೆಲ್ಲ ಇದ್ದರೂ ಒಳ ಮೀಸಲಾತಿ ಇಲ್ಲದೇ ನೇಮಕಾತಿಗಳನ್ನು ಭರ್ತಿ ಮಾಡುವಂತೆ ಸಚಿವ ಸಂಪುಟ ತೀರ್ಮಾನ ತೆಗೆದುಕೊಳ್ಳುವುದು ಸರ್ಕಾರಕ್ಕೆ ಆತ್ಮಸಾಕ್ಷಿ ಇಲ್ಲ ಎಂಬುದನ್ನು ಸಾರುತ್ತದೆ ಎಂದು ಹೇಳಿದರು. ಸುಪ್ರೀಂ ಕೋರ್ಟ್ ತೀರ್ಪಿನಂತೆ ಒಳಮೀಸಲಾತಿ ಜಾರಿಗೊಳಿಸಬೇಕಾದ ಸಮಾಜ ಕಲ್ಯಾಣ ಇಲಾಖೆಯ ಸಚಿವರೇ ಒಳಮೀಸಲಾತಿಗೆ ಅಡ್ಡಲಾಗಿ ನಿಂತಿದ್ದಾರೆ. ಎಲ್ಲಾ ಪರಿಶಿಷ್ಟರಿಗೆ ಸಾಮಾಜಿಕ ನ್ಯಾಯ ಒದಗಿಸುವ ಬದಲು ಸದಾ ಪಕ್ಷಪಾತಿಯಾಗಿ ನಡೆದುಕೊಳ್ಳುತ್ತಾ ಬಂದಿದ್ದಾರೆ. ಹಾಗಾಗಿ ಇಡೀ ಅಧಿಕಾರಿ ವರ್ಗ ಒಳಮೀಸಲಾತಿ ವಿಫಲಗೊಳಿಸಲು ಕೆಲಸ ಮಾಡುತ್ತಿದೆ. ಈ ಅನ್ಯಾಯಗಳನ್ನು ಇನ್ನು ಸಹಿಸಿಕೊಳ್ಳಲು ಸಾಧ್ಯವಿಲ್ಲ. ಹಾಗಾಗಿ ಪ್ರಜ್ಞಾವಂತರು ಮತ್ತು ಸಮುದಾಯ ಮಾಡು ಇಲ್ಲವೇ ಮಡಿ ಎಂಬ ಅಂತಿಮ ಹೋರಾಟಕ್ಕೆ ಕರೆ ನೀಡುತ್ತಿದೆ. ಮಾರ್ಚ್ 12ರಂದು ಬೆಂಗಳೂರಿನಲ್ಲಿ ಬೃಹತ್ ಪ್ರತಿಭಟನೆ ನಡೆಸಿ ಸರ್ಕಾರಕ್ಕೆ ಬುದ್ಧಿ ಕಲಿಸಲು ಮುಂದಾಗಿದ್ದೇವೆ.ಇದು ಮಾದಿಗ ಸಮುದಾಯ ಅಳಿವು–ಉಳಿವಿನ ಈ ನಿರ್ಣಾಯಕ ಹೋರಾಟದಲ್ಲಿ ಜಿಲ್ಲೆಯ ಮಾದಿಗ ಸಮುದಾಯದವರು ಸ್ವಯಂಪ್ರೇರಿತಾಗಿ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಯಶಸ್ವಿಗೊಳಿಸಿಕೊಡಬೇಕು ಎಂದು ಮನವಿ ಮಾಡಿದರು.

ಪತ್ರಿಕಾಗೋಷ್ಠಿಯಲ್ಲಿ ಒಕ್ಕೂಟದ ಜಿಲ್ಲಾಧ್ಯಕ್ಷ ಹೆಚ್. ಹೆಚ್.ನಾಗರಾಜು, ಸಂಘಟನೆ ಗೌರವ ಸಲಹೆಗಾರ ಅರಕಲವಾಡಿ ಜವರಯ್ಯ ಮಾತನಾಡಿದರು ಜಿಲ್ಲಾ ಉಪಾಧ್ಯಕ್ಷ ಮೂಡಹಳ್ಳಿ ಮೂರ್ತಿ, ಚನ್ನಬಸವಯ್ಯ

ಸಂಘಟನೆ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಎಂ.ಶಿವಕುಮಾರ್, ಸಹ ಕಾರ್ಯದರ್ಶಿ ರಾಮಸಮುದ್ರ ಶಿವಕುಮಾರ್, ಯುವಕಮುಖಂಡ ರಾಮಸಮುದ್ರ ಶಿವಣ್ಣ, ಮುಖಂಡ ಸುಂದರ್ ಹಾಜರಿದ್ದರು.

# ದ್ವಿತೀಯ ಪಿಯುಸಿ ವಿದ್ಯಾರ್ಥಿಗಳಿಗೆ ಉಚಿತ ಟ್ಯೂಷನ್ : ನರ್ಗೀಸ್‌ಬಾನು



ಚಾಮರಾಜನಗರ, ಜಿಲ್ಲಾ ನೆಟ್‌ಬಾಲ್ ಅಸೋಸಿಯೇಷನ್ ವತಿಯಿಂದ

ದ್ವಿತೀಯ ಪಿಯುಸಿ ವಿಜ್ಞಾನ ವಿಭಾಗದ ವಿದ್ಯಾರ್ಥಿಗಳಿಗೆ ಉಚಿತ ಟ್ಯೂಷನ್ ಹೇಳಿಕೊಡಲಾಗುತ್ತದೆ ಎಂದು ಅಸೋಸಿಯೇಷನ್ ಗೌರವಾಧ್ಯಕ್ಷೆ ನರ್ಗೀಸ್‌ಬಾನು ಹೇಳಿದರು.

ನಗರದ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಭವನದಲ್ಲಿ ಕರೆದಿದ್ದ ಪತ್ರಿಕಾಗೋಷ್ಠಿಯಲ್ಲಿ ಅವರು ಮಾತನಾಡಿ, ಜಿಲ್ಲೆಯಲ್ಲಿ ಪ್ರತಿಭಾವಂತ ಕ್ರೀಡಾ ಮಕ್ಕಳನ್ನು ಪ್ರೋತ್ಸಾಹಿಸುವ ನಿಟ್ಟಿನಲ್ಲಿ ಜಿಲ್ಲಾ ನೆಟ್‌ಬಾಲ್ ಅಸೋಸಿಯೇಷನ್ ಪ್ರಾರಂಭ ಮಾಡಿದ್ದೇವು ಈಗ ಕ್ರೀಡಾ ಜೊತೆಗೆ ಪ್ರತಿಭಾವಂತ ದ್ವಿತೀಯ ಪಿಯುಸಿ ವಿದ್ಯಾರ್ಥಿಗಳಿಗೆ ಶೈಕ್ಷಣಿಕ ನೆರವು ನೀಡಲು ಅಸೋಸಿಯೇಷನ್ ನಿರ್ಧರಿಸಿ ಈ ವರ್ಷದಿಂದ ದ್ವಿತೀಯ ಪಿಯುಸಿ ವಿದ್ಯಾರ್ಥಿಗಳಿಗೆ ನುರಿತ ಉಪನ್ಯಾಸಕರಿಂದ ಉಚಿತ ಟ್ಯೂಷನ್ ಹೇಳಿಸಿಕೊಡಲಾಗುತ್ತದೆ. ಇಂತಹ ಅವಕಾಶವನ್ನು ವಿದ್ಯಾರ್ಥಿಗಳು ಸದುಪಯೋಗಪಡಿಸಿಕೊಳ್ಳಬೇಕು ಎಂದು ಮನವಿ ಮಾಡಿದರು.

ಜಿಲ್ಲಾ ನೆಟ್‌ಬಾಲ್ ಅಸೋಷಿಯೇಷನ್ ಅಧ್ಯಕ್ಷ ವಿ.ಶ್ರೀನಿವಾಸಪ್ರಸಾದ್ ಮಾತನಾಡಿ, ಶಿಕ್ಷಣ, ಕ್ರೀಡೆಯು ಒಂದೇ ನಾಣ್ಯದ ಎರಡು ಮುಖ ಇದ್ದಂತೆ ಜಿಲ್ಲೆಯಲ್ಲಿ ಕ್ರೀಡೆ ಜೊತೆಗೆ ಶಿಕ್ಷಣಕ್ಕೂ ಒತ್ತು ನೀಡುವ ಸಲುವಾಗಿ ನಮ್ಮ ಅಸೋಷಿಯೇಷನ್ ವತಿಯಿಂದ ದ್ವಿತೀಯ ವಿಜ್ಞಾನ ವಿಭಾಗದ ಪಿಯುಸಿ ಮಕ್ಕಳಿಗೆ ಉಚಿತ ಟ್ಯೂಷನ್ ಹೇಳಿಕೊಡಲಾಗುತ್ತದೆ. ಇಂತಹ ಅವಕಾಶವನ್ನು ಜಿಲ್ಲೆಯ ವಿದ್ಯಾರ್ಥಿಗಳು ಸದುಪಯೋಗಪಡಿಸಿಕೊಳ್ಳಬೇಕು ಎಂದು ಮನವಿ ಮಾಡಿದರು.

ಪ್ರಸ್ತುತ ದಿನಗಳಲ್ಲಿ ಶಿಕ್ಷಣಕ್ಕೆ ಬಾರಿ ಮಹತ್ವವಿದೆ. ಇಂದಿನ ಟ್ಯೂಷನ್ ಶುಲ್ಕದ ಹಾವಳಿಯಲ್ಲಿ ಬಡ ಪ್ರತಿಭಾವಂತ ಮಕ್ಕಳು ಟ್ಯೂಷನ್ ಪಡೆಯುವುದು ಬಹಳ ಕಷ್ಟವಾಗಿದೆ. ಅದನ್ನು ಮನಗಂಡು ನಮ್ಮ ಅಸೋಷಿಯೇಷನ್ ಕ್ರೀಡೆಗೆ ಎಷ್ಟು ಮಹತ್ವ ಕೊಟ್ಟಿದೆ ಅಷ್ಟೇ ಮಹತ್ವವನ್ನು ಶಿಕ್ಷಣಕ್ಕೂ ಕೊಡುತ್ತಿದೆ. ಬಡ ಪ್ರತಿಭಾವಂತ ವಿದ್ಯಾರ್ಥಿಗಳ ಪ್ರತಿಭೆ

ಹೊರತರುವ ಸಲುವಾಗಿ ಉಚಿತ ಟ್ಯೂ

ಷನ್ ಆರಂಭಿಸಲಾಗಿದೆ. ಈಗಾಗಲೇ ಅಭಿಯಾನ ನಡೆಸಲಾಗುತ್ತಿದೆ. ಮುಂದಿನ ದಿನಗಳಲ್ಲಿ ನೀಟ್, ಸಿಇಟಿ, ಜೆಇಇ ಸ್ಪರ್ಧಾತ್ಮಕ ಪರೀಕ್ಷೆ ಉಚಿತ ಟ್ಯೂಷನ್ ಹೇಳಿಕೊಡಲು ಚಿಂತಿಸಲಾಗಿದೆ ಹೆಚ್ಚಿನ ಮಾಹಿತಿಗಾಗಿ 9901614577. 8660422976 ಸಂಪರ್ಕಿಸಬಹುದು ಎಂದರು. ಪತ್ರಿಕಾಗೋಷ್ಠಿಯಲ್ಲಿ ಜಿಲ್ಲಾ ನೆಟ್‌ಬಾಲ್ ಅಸೋಸಿಯೇಷನ್ ಸದಸ್ಯರಾದ ಅಕ್ಷಯ್, ಯಳಂದೂರು ಲೋಕೇಶ್, ಸುರೇಶ್ ಹಾಜರಿದ್ದರು.

# ಮಹಿಳಾ ದಿನಾಚರಣೆ ಪ್ರಯುಕ್ತ 500 ಮಹಿಳೆಯರಿಗೆ ತವರು ಮನೆ ಉಡುಗೊರೆ



**ಬ್ಯಾಟರಾಯನಪುರ :** ಅಂತರಾಷ್ಟ್ರೀಯ ಮಹಿಳಾ ದಿನಾಚರಣೆ ಪ್ರಯುಕ್ತ ಬ್ಯಾಟರಾಯನಪುರ ಕ್ಷೇತ್ರದ ಜಕ್ಕೂರಿನಲ್ಲಿ ಡಾ.ಬಿ ಆರ್ ಅಂಬೇಡ್ಕರ್ ಸಮುದಾಯ ಭವನ, ಜಕ್ಕೂರು ಕ್ರೆಡಿಟ್ ಕೋ ಆಪರೇಟಿವ್ ಸೊಸೈಟಿ ಆಶ್ರಯದಲ್ಲಿ ಜಿಲ್ಲಾ ಪಂಚಾಯಿತಿ ಮಾಜಿ ಅಧ್ಯಕ್ಷ ಜಕ್ಕೂರು ರವಿಕುಮಾರ್ ಅವರ ನೇತೃತ್ವದಲ್ಲಿ ಭಾನುವಾರ ಆಯೋಜಿಸಿದ್ದ ಕಾರ್ಯಕ್ರಮವನ್ನು ಸಾಮಾಜಿಕ ಕಾರ್ಯಕರ್ತೆ ಮೀನಾಕ್ಷಿ ಕೃಷ್ಣ ಭೈರೇಗೌಡ ಉದ್ಘಾಟಿಸಿದರು.

ನಂತರ ಅವರು ಮಾತನಾಡಿ ಜಕ್ಕೂರು ಕ್ರೆಡಿಟ್ ಕೋ ಆಪರೇಟಿವ್ ಸೊಸೈಟಿ ಡಾ.ಬಿ.ಆರ್. ಅಂಬೇಡ್ಕರ್ ಸಮುದಾಯ ಭವನದ ವತಿಯಿಂದ ಅಂತರಾಷ್ಟ್ರೀಯ ಮಹಿಳಾ ದಿನಾಚರಣೆಯನ್ನು ಮಹಿಳೆಯರಿಗೆ ತವರು ಮನೆ ಉಡುಗೊರೆ ನೀಡುವ ಮೂಲಕ ಅರ್ಥಪೂರ್ಣ ರೀತಿಯಲ್ಲಿ ಆಚರಿಸುತ್ತಾ ಬಂದಿದ್ದು, ಮಹಿಳೆಯರನ್ನು ವಿಶೇಷ ರೀತಿಯಲ್ಲಿ ಗೌರವಿಸುವ ಸೊಸೈಟಿಯ ಕಾರ್ಯವೈಖರಿ ಪ್ರಶಂಸಾರ್ಹ ಎಂದರು.

ಕಾರ್ಯಕ್ರಮ ಉದ್ದೇಶಿಸಿ ಮಾಜಿ ಜಿಲ್ಲಾ ಪಂಚಾಯತಿ ಅಧ್ಯಕ್ಷ, ಜಕ್ಕೂರು ಕ್ರೆಡಿಟ್ ಕೋಆಪರೇಟಿವ್ ಸೊಸೈಟಿಯ ಸಂಸ್ಥಾಪಕ ಅಧ್ಯಕ್ಷ ಜಕ್ಕೂರ್ ರವಿಕುಮಾರ್ ಅವರು ಮಾತನಾಡಿ ' ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಪ್ರಯುಕ್ತ ಜಕ್ಕೂರು ಕ್ರೆಡಿಟ್ ಕೋಆಪರೇಟಿವ್ ಸೊಸೈಟಿ ಹಾಗೂ ಡಾ.ಬಿ.ಆರ್.ಅಂಬೇಡ್ಕರ್ ಸಮುದಾಯ ಭವನದ ವತಿಯಿಂದ ಕಳೆದ ಹಲವು ವರ್ಷಗಳಿಂದ ತವರು ಮನೆ ಉಡುಗೊರೆ ನೀಡುತ್ತಾ ಬಂದಿದ್ದು,ವಿಶೇಷತೆ ಎಂಬಂತೆ ಯುಗಾದಿ ಮತ್ತು ರಂಜಾನ್ ಹಬ್ಬದ ಈ ಶುಭ ಸಂದರ್ಭದಲ್ಲಿ 500 ಕ್ಕೂ ಹೆಚ್ಚು ಮಹಿಳೆಯರಿಗೆ ತವರು ಮನೆ ಉಡುಗೊರೆಯೊಂದಿಗೆ ಗೌರವಿಸುತ್ತಿರುವುದು ಸಂತೋಷ ಉಂಟು ಮಾಡಿದೆ. ಮಹಿಳೆಯರು ಆರ್ಥಿಕವಾಗಿ ಸ್ವಾವಲಂಬಿಗಳಾಗಿ ಬದುಕಬೇಕು ಎಂಬ ನಿಟ್ಟಿನಲ್ಲಿ ಜಕ್ಕೂರು ಕ್ರೆಡಿಟ್ ಕೋ ಆಪರೇಟಿವ್ ಸೊಸೈಟಿ ಕಳೆದ ಹಲವು ವರ್ಷಗಳಿಂದ ಸ್ವಯಂ ಉದ್ಯೋಗ ಕೈಗೊಳ್ಳುವ ಮಹಿಳೆಯರಿಗೆ ಆರ್ಥಿಕ ನೆರವು, ವಿದ್ಯಾರ್ಥಿಗಳ ವ್ಯಾಸಂಗಕ್ಕೆ ಸಹಾಯ ಹಸ್ತ, ದುರ್ಬಲ ಆರ್ಥಿಕ ವರ್ಗದ ಜನತೆಗೆ ಅಗತ್ಯ ಸಹಕಾರ ನೀಡುತ್ತಾ ಬಂದಿದ್ದು, ಸರ್ವೇ ಜನಾಃ ಸುಖಿನೋ ಭವಂತು ಎಂಬ ಮುಕ್ತಿಯಂತೆ ಎಲ್ಲ ವರ್ಗದ ಜನತೆಯ ಕಲ್ಯಾಣಕ್ಕಾಗಿ ಸೊಸೈಟಿ ಶ್ರಮಿಸುತ್ತಿದೆ ಎಂದರು.

ಕಾರ್ಯಕ್ರಮದಲ್ಲಿ ಸ್ತ್ರೀ ಶಕ್ತಿ ಗುಂಪಿನ 500 ಮಹಿಳೆಯರಿಗೆ ಸೀರೆ, ಹರಿಶಿನ ಕುಂಕುಮ, ಫಲ ಪುಷ್ಪ ತಾಂಬೂಲ ಸಹಿತ ತವರು ಮನೆ ಉಡುಗೊರೆ ನೀಡಿ ಗೌರವಿಸಲಾಯಿತು.

ಕಾರ್ಯಕ್ರಮದಲ್ಲಿ ಸಮಾಜ ಸೇವಕರಾದ ಜಯಲಕ್ಷ್ಮಿ ರವಿಕುಮಾರ್, ಆಯುರ್ವೇದ ತಜ್ಞರಾದ ಡಾ.ಶ್ವೇತಾ ಚಿದಾನಂದ್, ರಾಷ್ಟ್ರಮಟ್ಟದ ಬಾಸ್ಕೆಟ್ ಬಾಲ್ ಆಟಗಾರ್ತಿ ನೀರೂಷಾ ದಿವಾಕರ್, ಶೋಭಾ ಆರ್ಕಿಡ್ ವೆಲ್ಫೇರ್ ಅಸೋಸಿಯೇಷನ್ ಅಧ್ಯಕ್ಷೆ ಸುಚಿತ್ರಾ ಮಿಶ್ರಾ, ಕಾರ್ಯದರ್ಶಿ ಮಿತ್ರಿಕಾ ಧ್ರುವ, ಅಮೃತಹಳ್ಳಿ ಠಾಣೆಯ ಠಾಣಾಧಿಕಾರಿ ವಿದ್ಯಾಶ್ರೀ, ಜಕ್ಕೂರು ಕ್ರೆಡಿಟ್ ಕೋಆಪರೇಟಿವ್ ಸೊಸೈಟಿಯ ಉಪಾಧ್ಯಕ್ಷೆ ರತ್ನಮ್ಮ ದೇವರಾಜು, ನಿರ್ದೇಶಕರಾದ ಸುಮಿತ್ರ ನಾಗೇಶ್, ಮಾಲಾ ವಿ. ಭಟ್, ವೀಣಾ ಆರ್. ವೆಂಕಟೇಶ್ ಬ್ರಹ್ಮಕುಮಾರಿ ಸಮಾಜದ ಅಕ್ಕ ಪವಿತ್ರಾ, ಎ.ಎನ್. ಶೀಲಾ ಭಾಸ್ಕರ್ ಸೇರಿದಂತೆ ಇನ್ನಿತರರಿದ್ದರು.

## ಅವಧಿ ಮೀರಿದ 15.30 ಲಕ್ಷ ರೂ. ಮೌಲ್ಯದ 6269 ಲೀಟರ್ ಬಿಯರ್ ನಾಶ



ಚಾಮರಾಜನಗರ, ಅವಧಿ ಮೀರಿದ 15.30 ಲಕ್ಷ ರೂ. ಮೌಲ್ಯದ 6269.690 ಬಲ್ಕ್ ಲೀಟರ್ ಬಿಯರ್ ಅನ್ನು ನಾಶ ಪಡಿಸಲಾಯಿತು. ನಗರದ ಹೊರ ವಲಯದ ಬದನಗುಪ್ಪೆ ?ಕೆಲ್ಲಂಬಳ್ಳಿ ಕೈಗಾರಿಕಾ ಪ್ರದೇಶದಲ್ಲಿರುವ ಪಾನೀಯ ನಿಗಮದಲ್ಲಿ ಅಬಕಾರಿ ಉಪ ಅಧೀಕ್ಷಕ ವಿಜಯಕುಮಾರ್ ಸಮ್ಮುಖದಲ್ಲಿ ಅವಧಿ ಮೀರಿದ ಬಲ್ಕ್ ಲೀಟರ್ ಬಿಯರ್ ದಾಸ್ತಾನುಗಳನ್ನು ನೆಲಕ್ಕೆ ಸುರಿಯುವ ಮೂಲಕ ನಾಶ ಪಡಿಸಲಾಯಿತು. ಇದರ ಮೌಲ್ಯ 15.30 ಲಕ್ಷ ರೂ. ಎಂದು ಹೇಳಲಾಗಿದೆ.

### ಹುಬ್ಬಳ್ಳಿ, ಬೆಳಗಾವಿ ವಿಮಾನ ನಿಲ್ದಾಣವನ್ನೂ ಅಂತರರಾಷ್ಟ್ರೀಯ ನಿಲ್ದಾಣವಾಗಿ ಘೋಷಿಸಿ

# ತಮಿಳುನಾಡಿಗೆ ಬೆಣ್ಣೆ, ನಮಗೆ ಸುಣ್ಣ: ಕೇಂದ್ರದ ವಿರುದ್ಧ ಎಂ ಬಿ ಪಾಟೀಲ ಅಸಮಾಧಾನ

**ಬೆಂಗಳೂರು:** ತಮಿಳುನಾಡಿನ ಮಧುರೈ ವಿಮಾನ ನಿಲ್ದಾಣವನ್ನು ಅಂತಾರಾಷ್ಟ್ರೀಯ ನಿಲ್ದಾಣವಾಗಿ ಘೋಷಿಸಿರುವ ಕೇಂದ್ರದ ನರೇಂದ್ರ ಮೋದಿ ನೇತೃತ್ವದ ಸರಕಾರವು ರಾಜ್ಯದ ಹುಬ್ಬಳ್ಳಿ ಮತ್ತು ಬೆಳಗಾವಿ ವಿಮಾನ ನಿಲ್ದಾಣಗಳ ಬಗ್ಗೆ ಇಂತಹ ನಿರ್ಧಾರ ಘೋಷಿಸದೆ ಇರುವುದು ತಾರತಮ್ಯ ಧೋರಣೆಯ ಪ್ರದರ್ಶನವಾಗಿದೆ. ಇದು ಸರ್ವಥಾ ಸರಿಯಲ್ಲ. ಅವರಿಗೆ ಬೆಣ್ಣೆ, ನಮಗೆ ಸುಣ್ಣ ಎಂದರೆ ಹೇಗೆ ಎಂದು ಮೂಲಸೌಕರ್ಯ ಅಭಿವೃದ್ಧಿ ಸಚಿವ ಎಂ ಬಿ ಪಾಟೀಲ ಬುಧವಾರ ಪ್ರಶ್ನಿಸಿದ್ದಾರೆ.

ಈ ಬಗ್ಗೆ ಮಾತನಾಡಿರುವ ಅವರು, ಕೇಂದ್ರ ಸರಕಾರವು ಹತ್ತಿರದಲ್ಲೇ ಇರುವ ತಮಿಳುನಾಡು ಚುನಾವಣೆಯ ಮೇಲೆ ಕಣ್ಣಿಟ್ಟುಕೊಂಡು ಹೀಗೆ ಮಾಡಿರಬಹುದು. ಆದರೆ ನಮ್ಮ ರಾಜ್ಯದ ಬೇಡಿಕೆ ಬಗ್ಗೆ ಅದು ಉದಾಸೀನ ಮನೋಭಾವ ಪ್ರದರ್ಶಿಸಿರುವುದು ಪ್ರಶ್ನಾರ್ಹ ಎಂದಿದ್ದಾರೆ.



ಹುಬ್ಬಳ್ಳಿ ಮತ್ತು ಬೆಳಗಾವಿ ವಿಮಾನ ನಿಲ್ದಾಣಗಳನ್ನು ಅಂತಾರಾಷ್ಟ್ರೀಯ ಮಟ್ಟಕ್ಕೆ ಏರಿಸಬೇಕು. ಇದರಿಂದ ಉತ್ತರ ಕರ್ನಾಟಕ ಭಾಗಕ್ಕೆ ಅನುಕೂಲ ಆಗುತ್ತದೆ ಎಂದು ಕಳೆದ ವರ್ಷ (2025ರ ಜೂನ್ 24ರಂದು) ಕೇಂದ್ರ ವಿಮಾನಯಾನ ಸಚಿವ ರಾಮಮೋಹನ್ ನಾಯ್ಡು ಅವರಿಗೆ ಪತ್ರ ಬರೆಯಲಾಗಿತ್ತು. ಈಗ ನೋಡಿದರೆ ಹೀಗಾಗಿದೆ. ಧಾರವಾಡ ಸಂಸದರಾಗಿ ಕೇಂದ್ರ ಸಂಪುಟದಲ್ಲಿರುವ ಪ್ರಹ್ಲಾದ್ ಜೋಶಿ, ಬೆಳಗಾವಿ ಸಂಸದ ಜಗದೀಶ್ ಶೆಟ್ಟರ್ ಮತ್ತು ಹಾವೇರಿ ಸಂಸದ ಬಸವರಾಜ ಬೊಮ್ಮಾಯಿ ಈಗ ನಿರ್ದಿಷ್ಟವಾಗಿ ಧ್ವನಿ ಎತ್ತಿ, ರಾಜ್ಯದ ಹಿತಾಸಕ್ತಿಯ ಪರ ನಿಲ್ಲಬೇಕು ಎಂದು ಅವರು ಆಗ್ರಹಿಸಿದ್ದಾರೆ.

ಹುಬ್ಬಳ್ಳಿ ಮತ್ತು ಬೆಳಗಾವಿ ವಿಮಾನ ನಿಲ್ದಾಣ ಎರಡರ ಪೈಕಿ ಒಂದನ್ನಾದರೂ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ ಎಂದು ಘೋಷಿಸಬೇಕು. ಎರಡನ್ನೂ ಉನ್ನತೀಕರಿಸಿದರೆ ಅದು ಇನ್ನೂ ಸ್ವಾಗತಾರ್ಹ. ರಾಜ್ಯದ ಅಗತ್ಯವನ್ನು ಕೇಂದ್ರ ಮನಗಾಣಬೇಕು ಎಂದು ಅವರು ಅಭಿಪ್ರಾಯಪಟ್ಟಿದ್ದಾರೆ.

# ಯೂಟ್ಯೂಬ್: ಡಿಜಿಟಲ್ ಯುಗದ ಮಾಯಾ ಲೋಕ




ಮಾನವ ಇತಿಹಾಸದಲ್ಲಿ ಮಾಹಿತಿ ತಂತ್ರಜ್ಞಾನವು ಹಲವು ಕ್ರಾಂತಿಗಳನ್ನು ಕಂಡಿದೆ. ಅಚ್ಚುಯಂತ್ರದ ಆವಿಷ್ಕಾರವು ಜ್ಞಾನವನ್ನು ಪುಸ್ತಕ ರೂಪದಲ್ಲಿ ಮನೆಮನೆಗೆ ತಲುಪಿಸಿದರೆ, ಕಳೆದ ಎರಡು ದಶಕಗಳಲ್ಲಿ ಅಂತರಜಾಲವು "ಮಾಹಿತಿಯ ಪ್ರಜಾಪ್ರಭುತ್ವೀಕರಣಕ್ಕೆ (Democratization of Information) ದೃಶ್ಯ ಮಾಧ್ಯಮದ ಮೂಲಕ ಚಾಲನೆ ನೀಡಿದೆ"

ಈ ದೃಶ್ಯ ಕ್ರಾಂತಿಯ ಮುಂಚೂಣಿಯಲ್ಲಿರುವ ಹೆಸರು 'ಯೂಟ್ಯೂಬ್' (YouTube). ಒಂದು ಕಾಲದಲ್ಲಿ ಕೇವಲ ತಮಾಷೆಯ ವಿಡಿಯೋಗಳ ತಾಣವಾಗಿದ್ದ ಈ ವೇದಿಕೆ ಇಂದು ಜಾಗತಿಕ ಜ್ಞಾನಕೋಶವಾಗಿ, ಅತಿದೊಡ್ಡ ಉದ್ಯೋಗದಾತನಾಗಿ ಮತ್ತು ಸಾಂಸ್ಕೃತಿಕ ರಾಯಭಾರಿಯಾಗಿ ಹೊರಹೊಮ್ಮಿದೆ. ಯೂಟ್ಯೂಬ್ ಕೇವಲ ಒಂದು ಆಪ್ ಆಗಿ ಉಳಿಯದೆ, ಪ್ರತಿಯೊಬ್ಬರ ವೈಯಕ್ತಿಕ ಮತ್ತು ವೃತ್ತಿಪರ ಜೀವನದ ಅವಿಭಾಜ್ಯ ಅಂಗವಾಗಿದೆ. ಯೂಟ್ಯೂಬ್ Content Ecosystem ಆಗಿ ರೂಪುಗೊಂಡಿದೆ.

**ಆರಂಭ ಮತ್ತು ವಿಕಾಸ: ಸಿಲಿಕಾನ್ ವ್ಯಾಲಿಯಿಂದ ಜಗತ್ತಿನ ಮೂಲೆ ಮೂಲೆಗೆ:** ಯೂಟ್ಯೂಬ್‌ನ ಜನ್ಮವೃತ್ತಾಂತವು ಒಂದು ಸಣ್ಣ ಆಲೋಚನೆಯಿಂದ ಆರಂಭವಾಯಿತು. 2005ರ ಫೆಬ್ರವರಿಯಲ್ಲಿ ಪೇಪಾಲ್ (PayPal) ಕಂಪನಿಯ ಮಾಜಿ ಉದ್ಯೋಗಿಗಳಾದ ಚಾಡ್ ಹರ್ಲಿ, ಸ್ಟೀವ್ ಚೆನ್ ಮತ್ತು ಜಾವೆದ್ ಕರೀಮ್ ಅವರು ಒಂದು ಸಮಸ್ಯೆಗೆ ಪರಿಹಾರ ಹುಡುಕ ಹೊರಟರು. ಅಂದು ಅಂತರಜಾಲದಲ್ಲಿ ವಿಡಿಯೋಗಳನ್ನು ಹಂಚಿಕೊಳ್ಳುವುದು ಅಥವಾ ಹುಡುಕುವುದು ಅತ್ಯಂತ ಕಷ್ಟದ ಕೆಲಸವಾಗಿತ್ತು. ಫೈಲ್‌ಗಳು ದೊಡ್ಡದಾಗಿದ್ದವು ಮತ್ತು ಇಮೇಲ್ ಮೂಲಕ ಕಳುಹಿಸುವುದು ಸಾಧ್ಯವಿರಲಿಲ್ಲ. ಈ ಕೊರತೆಯನ್ನು ನೀಗಿಸಲು ಅವರು ಒಂದು ಸರಳ ವಿಡಿಯೋ ಶೇರಿಂಗ್ ವೆಬ್‌ಸೈಟ್ ಸೃಷ್ಟಿಸಿದರು.

2005ರ ಏಪ್ರಿಲ್ 23ರಂದು ಅಪ್‌ಲೋಡ್ ಆದ "Me at the zoo" ಎಂಬ ಜಾವೆದ್ ಕರೀಮ್ ಅವರ 18 ಸೆಕೆಂಡುಗಳ ವಿಡಿಯೋದಿಂದ ಆರಂಭವಾದ ಈ ಪಯಣ, ತಂತ್ರಜ್ಞಾನ ಲೋಕದ ದಿಕ್ಕನ್ನೇ ಬದಲಿಸಿತು. ಕೇವಲ ಒಂದೇ ವರ್ಷದಲ್ಲಿ, ಅಂದರೆ 2006ರಲ್ಲಿ ಸರ್ಚ್ ಇಂಜಿನ್ ದೈತ್ಯ 'ಗೂಗಲ್' (Google) ಸಂಸ್ಥೆಯು ಇದನ್ನು 1.65 ಬಿಲಿಯನ್ ಡಾಲರ್‌ಗಳಿಗೆ ಖರೀದಿಸಿತು. ಅಂದು ಅನೇಕರು ಇದೊಂದು ದುಬಾರಿ ಮತ್ತು ವಿಫಲ ಹೂಡಿಕೆ ಎಂದು ಟೀಕಿಸಿದ್ದರು. ಆದರೆ ಇಂದು ಯೂಟ್ಯೂಬ್‌ನ ಮೌಲ್ಯ ನೂರಾರು ಬಿಲಿಯನ್ ಡಾಲರ್‌ಗಳಷ್ಟಿದೆ. "ಗೂಗಲ್ ನಂತರದ ಸ್ಥಾನದಲ್ಲಿರುವ ವಿಶ್ವದ ಎರಡನೇ ಅತಿ ದೊಡ್ಡ ಸರ್ಚ್ ಇಂಜಿನ್ ಇದಾಗಿದೆ". ಪ್ರತಿ ನಿಮಿಷಕ್ಕೆ ನೂರಾರು ಗಂಟೆಗಳ ವಿಡಿಯೋ ವಿಷಯಗಳು ಇಲ್ಲಿ ಜಗತ್ತಿನ ಮೂಲೆ ಮೂಲೆಗಳಿಂದ ಅಪ್‌ಲೋಡ್ ಆಗುತ್ತಿವೆ.

**ಸೌಲಭ್ಯಗಳು ಮತ್ತು ತಾಂತ್ರಿಕ ವೈವಿಧ್ಯತೆ:**

ಯೂಟ್ಯೂಬ್ ತನ್ನ ಬಳಕೆದಾರರಿಗೆ ನೀಡುವ ವೈವಿಧ್ಯಮಯ ಸೌಲಭ್ಯಗಳೇ ಅದರ ಯಶಸ್ಸಿನ ಗುಟ್ಟು. ಇದರ ಅಲ್ಗಾರಿದಮ್ (Algorithm) ಬಳಕೆದಾರರ ಆಸಕ್ತಿಯನ್ನು ಗುರುತಿಸಿ ಅವರಿಗೆ ಬೇಕಾದ ವಿಡಿಯೋಗಳನ್ನು ಶಿಫಾರಸು ಮಾಡುತ್ತದೆ.

* ಶಾರ್ಟ್ಸ್ (Shorts): ಟಿಕ್‌ಟಾಕ್ ಅಂತಹ ಕಿರು ವಿಡಿಯೋ ಅಪ್ಲಿಕೇಶನ್‌ಗಳ ಸ್ಪರ್ಧೆಯ ನಡುವೆ, ಯೂಟ್ಯೂಬ್ 'ಶಾರ್ಟ್ಸ್' ಪರಿಚಯಿಸಿತು. ಇದು ಅತಿ ವೇಗವಾಗಿ ಸೃಜನಶೀಲ ಮಾಹಿತಿ ಅಥವಾ ಮನೋರಂಜನೆಯನ್ನು ತಲುಪಿಸುವ ಕಲೆಯಾಗಿದೆ.
* **ಲೈವ್ ಸ್ಟ್ರೀಮಿಂಗ್:** ಸುದ್ದಿ ಸಂಸ್ಥೆಗಳಿಂದ ಹಿಡಿದು ವೈಯಕ್ತಿಕ ಕಲಾವಿದರವರೆಗೆ ಎಲ್ಲರೂ ನೇರ ಪ್ರಸಾರದ ಮೂಲಕ ಪ್ರೇಕ್ಷಕರೊಂದಿಗೆ ಸಂವಹನ ನಡೆಸಲು ಇದು ಅನುವು ಮಾಡಿಕೊಟ್ಟಿದೆ. ಕ್ರೀಡೆ, ಬಾಹ್ಯಾಕಾಶ ಉಡಾವಣೆಗಳು ಮತ್ತು ರಾಜಕೀಯ ಭಾಷಣಗಳು ಇಂದು ನೇರವಾಗಿ ಜನರ ಸ್ಮಾರ್ಟ್‌ಫೋನ್‌ಗಳಿಗೆ ತಲುಪುತ್ತಿವೆ.
* **ಸಮುದಾಯ ಟ್ಯಾಬ್:** ವಿಡಿಯೋಗಳ ಆಚೆಗೂ ಪೋಸ್ಟ್‌ಗಳು, ಚಿತ್ರಗಳು ಮತ್ತು ಸಮೀಕ್ಷೆಗಳ ಮೂಲಕ ಚಂದಾದಾರರೊಂದಿಗೆ ನಿರಂತರ ಸಂಪರ್ಕದಲ್ಲಿರಲು ಇದು ಸೃಜನಾಕಾರರಿಗೆ ಸಹಕಾರಿ.
* **ಯೂಟ್ಯೂಬ್ ಕಿಡ್ಸ್:** ಮಕ್ಕಳಿಗಾಗಿ ಪ್ರತ್ಯೇಕ ಸುರಕ್ಷಿತ ವೇದಿಕೆಯನ್ನು ಒದಗಿಸುವ ಮೂಲಕ ಪೋಷಕರಿಗೆ ನಿರಾಳತೆ ನೀಡಿದೆ.

**ಜ್ಞಾನದ ಹೊಸ ಆಯಾಮಗಳು: ಪಾಡ್‌ಕಾಸ್ಟ್ ಮತ್ತು ಸಂವಹನ :**

ಇತ್ತೀಚಿನ ವರ್ಷಗಳಲ್ಲಿ ಯೂಟ್ಯೂಬ್‌ನಲ್ಲಿ 'ಪಾಡ್‌ಕಾಸ್ಟ್' (Podcasts) ಸಂಸ್ಕೃತಿ ವಿಪರೀತ ಜನಪ್ರಿಯತೆ ಗಳಿಸಿದೆ. ಈ ಹಿಂದೆ ಕೇವಲ ರೇಡಿಯೋ ಅಥವಾ ಆಡಿಯೋ ರೂಪದಲ್ಲಿದ್ದ ದೀರ್ಘ ಸಂಭಾಷಣೆಗಳು ಈಗ ದೃಶ್ಯರೂಪದಲ್ಲಿ ಲಭ್ಯವಿದ್ದು, ಗಂಭೀರ ವಿಷಯಗಳ ಚರ್ಚೆಗೆ ವೇದಿಕೆ ಒದಗಿಸಿವೆ. ವಿಜ್ಞಾನ, ಆಧ್ಯಾತ್ಮಿಕತೆ, ಇತಿಹಾಸ ಮತ್ತು ರಾಜಕೀಯದಂತಹ ಗಹನವಾದ ವಿಷಯಗಳನ್ನು ಗಂಟೆಗಟ್ಟಲೆ ಸುದೀರ್ಘವಾಗಿ ಚರ್ಚಿಸುವ ಈ ಕ್ರಮವು, ಓದುವ ಹವ್ಯಾಸ ಕಡಿಮೆಯಾಗುತ್ತಿರುವ ಕಾಲದಲ್ಲಿ 'ಕೇಳುವ ಮತ್ತು ನೋಡುವ' ಮೂಲಕ ಜ್ಞಾನಾರ್ಜನೆ ಮಾಡಲು ದಾರಿಯಾಗಿದೆ.

ಭಾರತದಲ್ಲಿ 'ದಿ ರಣವೀರ್ ಶೋ' ಅಥವಾ ಕನ್ನಡದ ಅನೇಕ ಪಾಡ್‌ಕಾಸ್ಟ್‌ಗಳು ಯುವಜನತೆಯಲ್ಲಿ ಹೊಸ ಆಲೋಚನೆಗಳನ್ನು ಬಿತ್ತುತ್ತಿವೆ. ಇದು ಕೇವಲ ಮೇಲ್ಪದರದ ಮಾಹಿತಿಯಲ್ಲದೆ, ವಿಷಯದ ಆಳಕ್ಕೆ ಇಳಿಯಲು ಪ್ರೇಕ್ಷಕರಿಗೆ ಪ್ರೇರಣೆ ನೀಡುತ್ತಿದೆ.

ಆರ್ಥಿಕ ಸಾಕ್ಷರತೆ ಮತ್ತು ಶೇರ್ ಮಾರುಕಟ್ಟೆ:

ಹಿಂದೆ ಹಣಕಾಸಿನ ಹೂಡಿಕೆ ಅಥವಾ ಶೇರ್ ಮಾರುಕಟ್ಟೆಯ ಬಗ್ಗೆ ತಿಳಿಯಲು ಕೇವಲ ತಜ್ಞರ ಅಥವಾ ಬ್ಯಾಂಕ್ ಅಧಿಕಾರಿಗಳ ಮೊರೆ ಹೋಗಬೇಕಿತ್ತು. ಆದರೆ ಇಂದು ಯೂಟ್ಯೂಬ್ ಸಾಮಾನ್ಯ ಮಧ್ಯಮ ವರ್ಗದ ಜನರ ಆರ್ಥಿಕ ಜೀವನದಲ್ಲಿ ಕ್ರಾಂತಿ ತಂದಿದೆ:

* ವೈಯಕ್ತಿಕ ಹಣಕಾಸು: ಉಳಿತಾಯ ಮಾಡುವುದು ಹೇಗೆ? ಎಸ್‌ಐಪಿ (SIP) ಹೂಡಿಕೆ ಲಾಭದಾಯಕವೇ? ತೆರಿಗೆ ಉಳಿಸುವುದು ಹೇಗೆ? ಎನ್ನುವುದನ್ನು ತಜ್ಞರು ಸರಳ ಕನ್ನಡ ಮತ್ತು ಇತರೆ ಭಾಷೆಗಳಲ್ಲಿ ವಿವರಿಸುತ್ತಿದ್ದಾರೆ.
* ಶೇರ್ ಮಾರುಕಟ್ಟೆ ಶಿಕ್ಷಣ: ಶೇರ್ ಮಾರುಕಟ್ಟೆಯ ಏರಿಳಿತಗಳು ಮತ್ತು ದೀರ್ಘಕಾಲೀನ ಹೂಡಿಕೆಯ ತತ್ವಗಳ ಬಗ್ಗೆ ಮೂಡಿರುವ ಅರಿವು ಜನರಲ್ಲಿರುವ ಭಯವನ್ನು ಹೋಗಲಾಡಿಸಿ ಆರ್ಥಿಕ ಶಿಸ್ತನ್ನು ತರುತ್ತಿದೆ. ಇದು ಸಾಮಾನ್ಯ ಜನರನ್ನು ಆರ್ಥಿಕವಾಗಿ ಸಬಲರನ್ನಾಗಿ ಮಾಡುತ್ತಿದೆ.

ಶಿಕ್ಷಣ ಮತ್ತು ಆರೋಗ್ಯ ಮಾಹಿತಿ :

ಯೂಟ್ಯೂಬ್ ಇಂದು ವಿಶ್ವದ ಅತಿ ದೊಡ್ಡ ಮುಕ್ತ ವಿಶ್ವವಿದ್ಯಾಲಯ ಎಂದರೆ ತಪ್ಪಾಗಲಾರದು. ಶಿಕ್ಷಣ ಕ್ಷೇತ್ರದಲ್ಲಿ ಇದರ ಪ್ರಭಾವ ಅಳೆಯಲಾಗದ್ದು:

1. ಸ್ಪರ್ಧಾತ್ಮಕ ಪರೀಕ್ಷೆಗಳು: ಹಳ್ಳಿಯಲ್ಲಿರುವ ಒಬ್ಬ ಬಡ ವಿದ್ಯಾರ್ಥಿ ಇಂದು ಯುಪಿಎಸ್‌ಸಿ ಅಥವಾ ಕೆಎಎಸ್ ಪರೀಕ್ಷೆಗೆ ದಿಲ್ಲಿ ಅಥವಾ ಬೆಂಗಳೂರಿಗೆ ಹೋಗದೆ ಯೂಟ್ಯೂಬ್ ಮೂಲಕ ಉನ್ನತ ದರ್ಜೆಯ ತರಬೇತಿ ಪಡೆಯುತ್ತಿದ್ದಾನೆ. ಇದು ಶಿಕ್ಷಣದ ವೆಚ್ಚವನ್ನು ಗಣನೀಯವಾಗಿ ತಗ್ಗಿಸಿದೆ.
2. ತಾಂತ್ರಿಕ ಕೌಶಲಗಳು: ಕೋಡಿಂಗ್, ಗ್ರಾಫಿಕ್ ಡಿಸೈನ್, ವಿಡಿಯೋ ಎಡಿಟಿಂಗ್‌ನಂತಹ ಉದ್ಯೋಗಾಧಾರಿತ ಕೌಶಲಗಳನ್ನು ಇಲ್ಲಿ ಉಚಿತವಾಗಿ ಕಲಿಯಬಹುದು.
3. ಗೃಹ ವಿಜ್ಞಾನ: ಅಡುಗೆಯಿಂದ ಹಿಡಿದು ಮನೆಯ ಅಲಂಕಾರದವರೆಗೆ ಪ್ರತಿಯೊಂದು ಕಲೆಯೂ ಇಲ್ಲಿ ಸಿದ್ಧಸೂತ್ರಗಳ ರೂಪದಲ್ಲಿ ಲಭ್ಯವಿದೆ.
   ಅಂತೆಯೇ, ಆರೋಗ್ಯ ಮತ್ತು ಫಿಟ್‌ನೆಸ್ ಕ್ಷೇತ್ರದಲ್ಲೂ ಯೂಟ್ಯೂಬ್ ಪ್ರಭಾವ ಅಸಾಧಾರಣ. ಆಧುನಿಕ ಜೀವನಶೈಲಿಯ ಒತ್ತಡಗಳ ನಡುವೆ ಯೋಗ, ಧ್ಯಾನ ಮತ್ತು ಜಿಮ್ ತರಬೇತಿಗಳ ವಿಡಿಯೋಗಳು ಜನರನ್ನು ಆರೋಗ್ಯದ ಕಡೆಗೆ ಪ್ರೇರೇಪಿಸುತ್ತಿವೆ. ತಜ್ಞ ವೈದ್ಯರು ನೀಡುವ, ಸಲಹೆಗಳು ಸಮಾಜದಲ್ಲಿನ ಆರೋಗ್ಯದ ಕುರಿತಾದ ತಪ್ಪು ಕಲ್ಪನೆಗಳನ್ನು ಹೋಗಲಾಡಿಸಲು ನೆರವಾಗಿದೆ.

**ಸಾಮಾಜಿಕ ಪರಿಣಾಮ:** ಭಾರತದಂತಹ ವೈವಿಧ್ಯಮಯ ದೇಶದಲ್ಲಿ ಯೂಟ್ಯೂಬ್ ಒಂದು 'ಡಿಜಿಟಲ್ ಪ್ರಜಾಪ್ರಭುತ್ವ'ವನ್ನು ಸೃಷ್ಟಿಸಿದೆ.

**ಪ್ರಾದೇಶಿಕ ಭಾಷೆಗಳ ಪುನರುತ್ಥಾನ:** ಹಿಂದೆ ಕೇವಲ ಮುಖ್ಯವಾಹಿನಿಯ ಭಾಷೆಗಳಿಗೆ ಮಾತ್ರ ಮಾಧ್ಯಮಗಳಲ್ಲಿ ಆದ್ಯತೆ ಇರುತ್ತಿತ್ತು. ಆದರೆ ಇಂದು ಕನ್ನಡದ ವಿವಿಧ ಉಪಭಾಷೆಗಳಾದ ಕುಂದಾಪುರ ಕನ್ನಡ, ಉತ್ತರ ಕರ್ನಾಟಕದ ಜವಾರಿ ಭಾಷೆ ಅಥವಾ ಮಲೆನಾಡಿನ ಸೊಗಡು ಯೂಟ್ಯೂಬ್‌ನಲ್ಲಿ ರಾರಾಜಿಸುತ್ತಿವೆ. ಇದು ಸ್ಥಳೀಯ ಅಡುಗೆ, ಸಂಪ್ರದಾಯ ಮತ್ತು ಪ್ರವಾಸಿ ತಾಣಗಳನ್ನು ಜಗತ್ತಿಗೆ ಪರಿಚಯಿಸಿದೆ.

"ಯೂಟ್ಯೂಬ್ ಇಂದು AI (Artificial Intelligence) ತಂತ್ರಜ್ಞಾನವನ್ನು ಬಳಸಿ ಬಳಕೆದಾರರಿಗೆ ಸ್ವಯಂಚಾಲಿತ ಸಬ್‌ಟೈಟಲ್‌ಗಳನ್ನು (Captions) ನೀಡುತ್ತಿದೆ. ಇದರಿಂದ ಭಾಷೆಯ ಅಡೆತಡೆಗಳಿಲ್ಲದೆ ಜಗತ್ತಿನ ಯಾವುದೇ ಮೂಲೆಯ ವಿಡಿಯೋವನ್ನು ಕನ್ನಡಿಗರು ಅರ್ಥೈಸಿಕೊಳ್ಳಲು ಸಾಧ್ಯವಾಗುತ್ತಿದೆ."

**ಸೃಜನಶೀಲತೆಯ ಮುಕ್ತ ಅವಕಾಶ:** ಯಾವುದೇ ಸಿನಿಮೀಯ ಹಿನ್ನೆಲೆ ಅಥವಾ 'ಗಾಡ್ ಫಾದರ್' ಇಲ್ಲದಿದ್ದರೂ, ಕೇವಲ ಪ್ರತಿಭೆ ಮತ್ತು ಒಂದು ಸ್ಮಾರ್ಟ್‌ಫೋನ್ ಇದ್ದರೆ ಸಾಕು, ಹಳ್ಳಿಯ ಪ್ರತಿಭೆಯೂ ಇಂದು ಜಾಗತಿಕ ಮಟ್ಟದ ಸ್ಟಾರ್ ಆಗಬಹುದು.

**ಆರ್ಥಿಕ ಸ್ವಾವಲಂಬನೆ:** ಭಾರತದಲ್ಲಿ ಇಂದು 'ಕಂಟೆಂಟ್ ಕ್ರಿಯೇಟರ್' ( ಸೃಜನಶೀಲ ಆರ್ಥಿಕತೆ) ಎಂಬುದು ಒಂದು ಪೂರ್ಣಾವಧಿ ವೃತ್ತಿಯಾಗಿದೆ. ಇದು ಲಕ್ಷಾಂತರ ಜನರಿಗೆ ಉದ್ಯೋಗ ನೀಡಿದೆ ಮತ್ತು ದೇಶದ ಡಿಜಿಟಲ್ ಆರ್ಥಿಕತೆಗೆ ದೊಡ್ಡ ಮಟ್ಟದ ಕೊಡುಗೆ ನೀಡುತ್ತಿದೆ.

ಮನೋರಂಜನಾ ಕ್ಷೇತ್ರದ ಬದಲಾದ ಭೂಪಟ

ಯೂಟ್ಯೂಬ್ ಸಾಂಪ್ರದಾಯಿಕ ಟಿವಿ ಮತ್ತು ಸಿನಿಮಾ ರಂಗಕ್ಕೆ ದೊಡ್ಡ ಸವಾಲೊಡ್ಡಿದೆ. ಹಿಂದೆ ಮನೋರಂಜನೆ ಎಂದರೆ ಕೇವಲ ದೊಡ್ಡ ಬಜೆಟ್‌ನ ಸಿನಿಮಾಗಳಾಗಿದ್ದವು. ಆದರೆ ಈಗ ಚಿತ್ರಣ ಬದಲಾಗಿದೆ:

**ಸಮಯದ ಸ್ವಾತಂತ್ರ್ಯ:** ಟಿವಿಯಂತೆ ಇಲ್ಲಿ ನಾವು ಕಾರ್ಯಕ್ರಮದ ಸಮಯಕ್ಕೆ ಕಾಯಬೇಕಿಲ್ಲ. ನಮಗೆ ಬೇಕಾದಾಗ, ಬೇಕಾದ ವಿಡಿಯೋವನ್ನು ನೋಡುವ ಆಯ್ಕೆ ನಮ್ಮದಾಗಿದೆ.

* ಪ್ರೇಕ್ಷಕರ ಪ್ರತಿಕ್ರಿಯೆ: ಇಲ್ಲಿ ಕಲಾವಿದ ಮತ್ತು ಪ್ರೇಕ್ಷಕರ ನಡುವೆ ನೇರ ಸಂವಹನವಿದೆ. ಕಾಮೆಂಟ್ ಮೂಲಕ ಪ್ರೇಕ್ಷಕರು ನೀಡುವ ಸಲಹೆಗಳು ಕಲಾವಿದರನ್ನು ತಿದ್ದಿಕೊಳ್ಳಲು ನೆರವಾಗುತ್ತವೆ.
* ಕಿರುಚಿತ್ರಗಳ ಕ್ರಾಂತಿ: ಸಿನಿಮಾ ರಂಗಕ್ಕೆ ಬರಲು ಬಯಸುವ ಯುವಕರಿಗೆ ಯೂಟ್ಯೂಬ್ ಒಂದು ದೊಡ್ಡ ವೇದಿಕೆಯಾಗಿದೆ. ಸಾವಿರಾರು ಅದ್ಭುತ ಕಿರುಚಿತ್ರಗಳು ಮತ್ತು ವೆಬ್ ಸಿರೀಸ್‌ಗಳು ಇಲ್ಲಿ ಜನ್ಮತಳೆದಿವೆ.

ಯೂಟ್ಯೂಬ್‌ನ ಅಗಾಧತೆ ಮತ್ತು ಪ್ರಭಾವವನ್ನು ಅರ್ಥಮಾಡಿಕೊಳ್ಳಲು ಈ ಕೆಳಗಿನ ಅಂಕಿ-ಅಂಶಗಳು ಸಹಕಾರಿಯಾಗಿವೆ. ಈ ದತ್ತಾಂಶಗಳು ಜಾಗತಿಕ ಮತ್ತು ಭಾರತೀಯ ಮಾರುಕಟ್ಟೆಯ ಇತ್ತೀಚಿನ ಪ್ರವೃತ್ತಿಗಳನ್ನು ಪ್ರತಿಬಿಂಬಿಸುತ್ತವೆ:

1. ಬಳಕೆದಾರರ ವ್ಯಾಪ್ತಿ (ಗ್ಜಡಿ ಃಭಿಜ)

* ಜಾಗತಿಕ ಬಳಕೆದಾರರು: ಪ್ರತಿ ತಿಂಗಳು ಯೂಟ್ಯೂಬ್‌ಗೆ ಲಾಗಿನ್ ಆಗುವ ಸಕ್ರಿಯ ಬಳಕೆದಾರರ ಸಂಖ್ಯೆ 2.7 ಬಿಲಿಯನ್ ದಾಟಿದೆ. ಇದು ವಿಶ್ವದ ಜನಸಂಖ್ಯೆಯ ಸರಿಸುಮಾರು ಮೂರನೇ ಒಂದು ಭಾಗದಷ್ಟಿದೆ.
* ಭಾರತದ ಪಾಲು: ಭಾರತವು ಯೂಟ್ಯೂಬ್‌ನ ಅತಿ ದೊಡ್ಡ ಮಾರುಕಟ್ಟೆಯಾಗಿದ್ದು, ಇಲ್ಲಿ 500 ಮಿಲಿಯನ್ ಗಿಂತಲೂ (50 ಕೋಟಿ) ಹೆಚ್ಚು ಸಕ್ರಿಯ ಬಳಕೆದಾರರಿದ್ದಾರೆ.
* ಲಿಂಗ ಅನುಪಾತ: ಜಾಗತಿಕವಾಗಿ ಶೇ. 54ರಷ್ಟು ಪುರುಷರು ಮತ್ತು ಶೇ. 46ರಷ್ಟು ಮಹಿಳಾ ಬಳಕೆದಾರರಿದ್ದಾರೆ.

2. ವೀಕ್ಷಣಾ ಅವಧಿ ಮತ್ತು ವಿಷಯದ ಪ್ರಮಾಣ (Watch Time & Content)

* ಪ್ರತಿ ನಿಮಿಷದ ಅಪ್‌ಲೋಡ್: ಪ್ರತಿ ನಿಮಿಷಕ್ಕೆ ಯೂಟ್ಯೂಬ್‌ಗೆ ಸರಿಸುಮಾರು 500 ಗಂಟೆಗಳಿಗಿಂತಲೂ ಹೆಚ್ಚು ಅವಧಿಯ ವಿಡಿಯೋ ವಿಷಯಗಳನ್ನು ಅಪ್‌ಲೋಡ್ ಮಾಡಲಾಗುತ್ತದೆ.
* ದೈನಂದಿನ ವೀಕ್ಷಣೆ: ಜಗತ್ತಿನಾದ್ಯಂತ ಜನರು ಪ್ರತಿದಿನ 1 ಬಿಲಿಯನ್ ಗಂಟೆಗಳಿಗೂ ಹೆಚ್ಚು ಅವಧಿಯ ವಿಡಿಯೋಗಳನ್ನು ವೀಕ್ಷಿಸುತ್ತಾರೆ.
* ಮೊಬೈಲ್ ಬಳಕೆ: ಯೂಟ್ಯೂಬ್‌ನ ಒಟ್ಟು ವೀಕ್ಷಣೆಯ ಶೇ. 70ಕ್ಕಿಂತ ಹೆಚ್ಚು ಭಾಗವು ಸ್ಮಾರ್ಟ್‌ಫೋನ್‌ಗಳ ಮೂಲಕವೇ ನಡೆಯುತ್ತದೆ.

3. ಆರ್ಥಿಕತೆ ಮತ್ತು ಆದಾಯ (Economy & Revenue)

* ಜಾಹೀರಾತು ಆದಾಯ: ಗೂಗಲ್ (Alphabet Inc.) ವರದಿಗಳ ಪ್ರಕಾರ, ಯೂಟ್ಯೂಬ್ ಪ್ರತಿ ವರ್ಷ ಸರಾಸರಿ 30 ರಿಂದ 32 ಬಿಲಿಯನ್ ಡಾಲರ್ ಆದಾಯವನ್ನು ಕೇವಲ ಜಾಹೀರಾತುಗಳಿಂದ ಗಳಿಸುತ್ತದೆ.
* ಯೂಟ್ಯೂಬ್ ಪ್ರೀಮಿಯಂ: ಯೂಟ್ಯೂಬ್ ಪ್ರೀಮಿಯಂ ಮತ್ತು ಮ್ಯೂಸಿಕ್ ಚಂದಾದಾರರ ಸಂಖ್ಯೆ ಜಾಗತಿಕವಾಗಿ 100 ಮಿಲಿಯನ್ ದಾಟಿದೆ.
* ಕ್ರಿಯೇಟರ್ ಎಕಾನಮಿ: ಕಳೆದ ಮೂರು ವರ್ಷಗಳಲ್ಲಿ ಯೂಟ್ಯೂಬ್ ತನ್ನ ಕ್ರಿಯೇಟರ್‌ಗಳಿಗೆ (Content Creators) ಹಂಚಿರುವ ಹಣ 50 ಬಿಲಿಯನ್ ಡಾಲರ್‌ಗಳಿಗಿಂತಲೂ ಅಧಿಕ.

4. ಯೂಟ್ಯೂಬ್ ಶಾರ್ಟ್ಸ್ (ಜಂಣಖಿಣಭಜ ಖುಂಡಿಣ)

* ಶಾರ್ಟ್ಸ್ ಪರಿಚಯಿಸಿದ ನಂತರ ಅದರ ಜನಪ್ರಿಯತೆ ಗಗನಕ್ಕೇರಿದೆ. ಪ್ರತಿದಿನ ಶಾರ್ಟ್ಸ್ ವಿಡಿಯೋಗಳು ಜಾಗತಿಕವಾಗಿ 70 ಬಿಲಿಯನ್‌ಗಿಂತಲೂ ಹೆಚ್ಚು ವ್ಯೂವ್ಸ್ (ಗುಜಕಿ) ಪಡೆಯುತ್ತಿವೆ.

5. ಭಾರತೀಯ ಆರ್ಥಿಕತೆಗೆ ಕೊಡುಗೆ

* ಆಕ್ಸ್‌ಫರ್ಡ್ ಎಕನಾಮಿಕ್ಸ್ ವರದಿಯ ಪ್ರಕಾರ, ಯೂಟ್ಯೂಬ್ ಕ್ರಿಯೇಟರ್ ಎಕಾನಮಿಯು ಭಾರತದ ಜಿಡಿಪಿಗೆ (ಉಆಕ) ಪ್ರತಿ ವರ್ಷ 10,000 ಕೋಟಿ ರೂಪಾಯಿಗಳಿಗಿಂತಲೂ ಹೆಚ್ಚು ಕೊಡುಗೆ ನೀಡುತ್ತಿದೆ ಮತ್ತು ಸುಮಾರು 7.5 ಲಕ್ಷ ಪೂರ್ಣಾವಧಿ ಉದ್ಯೋಗಗಳಿಗೆ ಸಮಾನವಾದ ಅವಕಾಶಗಳನ್ನು ಸೃಷ್ಟಿಸಿದೆ.

ಯೂಟ್ಯೂಬ್ ಇಂದು ಕೇವಲ ವಿಡಿಯೋ ನೋಡುವ ವೇದಿಕೆಯಲ್ಲ, ಅದೊಂದು ಸ್ವತಂತ್ರ ಆರ್ಥಿಕ ವ್ಯವಸ್ಥೆಯಾಗಿ ಬೆಳೆದು ನಿಂತಿದೆ.

ಸವಾಲುಗಳು ಮತ್ತು ಜವಾಬ್ದಾರಿಯುತ ಬಳಕೆ

ಯೂಟ್ಯೂಬ್ ಎಂಬುದು ಎರಡೂ ಕಡೆ ಹರಿತವಿರುವ ಕತ್ತಿಯಿದ್ದಂತೆ. ಮಾಹಿತಿ ಮತ್ತು ಜ್ಞಾನದ ಜೊತೆಗೆ ಇಲ್ಲಿ ತಪ್ಪು ಮಾಹಿತಿ (Misinformation) ಹರಡುವ ಅಪಾಯವೂ ಇದೆ. ತಪ್ಪು ಹಾದಿಗೆಳೆಯುವ ವೈದ್ಯಕೀಯ ಸಲಹೆಗಳು ಅಥವಾ ಸುಳ್ಳು ಸುದ್ದಿಗಳು ಸಮಾಜದ ಶಾಂತಿ ಕದಡಬಹುದು.

ಆದ್ದರಿಂದ, ಒಬ್ಬ ಜವಾಬ್ದಾರಿಯುತ ಮತ್ತು ಪ್ರೌಢ ವೀಕ್ಷಕರಾಗಿ ನಾವು ಕೆಲವು ಅಂಶಗಳನ್ನು ಗಮನಿಸಬೇಕು:

1. ಮೂಲದ ಪರಿಶೀಲನೆ: ಮಾಹಿತಿಯನ್ನು ಸ್ವೀಕರಿಸುವ ಮೊದಲು ಅದು ಅಧಿಕೃತ (ಗಿಜಡುಜಿಜಜ) ಚಾನೆಲ್‌ನಿಂದ ಬಂದಿದೆಯೇ ಎಂದು ಗಮನಿಸಬೇಕು.
2. ಸಮಯದ ನಿರ್ವಹಣೆ: ವಿಡಿಯೋಗಳ ವೀಕ್ಷಣೆಯು ಒಂದು ವ್ಯಸನವಾಗದಂತೆ ನೋಡಿಕೊಳ್ಳಬೇಕು.
3. ವಿವೇಚನೆಯ ಬಳಕೆ: ವಿಶೇಷವಾಗಿ ಹಣಕಾಸಿನ ಹೂಡಿಕೆ ಮಾಡುವಾಗ ಕೇವಲ ವಿಡಿಯೋಗಳನ್ನೇ ನಂಬದೆ ಸ್ವಂತ ಸಂಶೋಧನೆಯೂ ಅಗತ್ಯ.
   ಯೂಟ್ಯೂಬ್ ಇಂದು ತಂತ್ರಜ್ಞಾನದ ಒಂದು ಭಾಗವಲ್ಲ; ಅದು ಆಧುನಿಕ ಭಾರತದ ಡಿಜಿಟಲ್ ಲೋಕದ ಚಕ್ರವರ್ತಿಯಾಗಿದೆ . ಕೃತಕ ಬುದ್ಧಿಮತ್ತೆ (AI) ಮತ್ತು ವರ್ಚುವಲ್ ರಿಯಾಲಿಟಿ (VR) ತಂತ್ರಜ್ಞಾನದ ಸ್ಪರ್ಧೆಯೊಂದಿಗೆ ಮುಂದಿನ ದಿನಗಳಲ್ಲಿ ಯೂಟ್ಯೂಬ್ ಇಂದಿಗಿಂತಲೂ ಹೆಚ್ಚು ಪರಿಣಾಮಕಾರಿಯಾಗಲಿದೆ.

ಯೂಟ್ಯೂಬ್ ಹಂಚಿಕೊಂಡ ಜ್ಞಾನದ, ಬೆಳೆದ ಪ್ರತಿಭೆಯ ಮತ್ತು ಬದಲಾದ ಲಕ್ಷಾಂತರ ಬದುಕುಗಳ ಕನ್ನಡಿಯಾಗಿದೆ. ಇದು ಪ್ರತಿಯೊಬ್ಬರಿಗೂ ಮಾತನಾಡಲು ದನಿ ನೀಡಿದೆ ಮತ್ತು ಕಲಿಯಲು ಹಾದಿ ಮಾಡಿಕೊಟ್ಟಿದೆ. ಈ ಡಿಜಿಟಲ್ ಕ್ರಾಂತಿಯನ್ನು ಸರಿಯಾಗಿ ಬಳಸಿಕೊಂಡರೆ, ಸಮಾಜದ ಅಭಿವೃದ್ಧಿಗೆ ಇದಕ್ಕಿಂತ ದೊಡ್ಡ ಶಕ್ತಿ ಮತ್ತೊಂದಿಲ್ಲ.



| ರಚನೆ : ಸ್ವಾಮಿನಾಥನ್
ಮೊಬೈಲ್ : 9880041516
Email : Swamynathann@gmail.com

# ಅದಮ್ಯ ಆತ್ಮವಿಶ್ವಾಸಕ್ಕೆ ಮತ್ತೊಂದು ಹೆಸರು.. ಶಾನು



| ವೀಣಾ ಹೇಮಂತ್‌ಗೌಡ ಪಾಟೀಲ್

ವಾಟ್ಸಪ್ ಸ್ಟೇಟಸ್ ಒಂದರಲ್ಲಿ ಆಕೆಯ ಮಾತುಗಳ ತುಣುಕನ್ನು ಕೇಳಿ ಅದರ ಮೂಲವನ್ನು ಹುಡುಕುತ್ತಾ ಹೋದಾಗ ಫೇಸ್ಬುಕ್ನಲ್ಲಿ ಆಕೆಯ ಆರು ನಿಮಿಷಗಳ ಭಾಷಣದ ವಿಡಿಯೋ ದೊರಕಿತು. ವಿಡಿಯೋದಲ್ಲಿ ಆಕೆಯ ಕುರಿತು ಸ್ವತಃ ಆಕೆಯೇ ಹೇಳಿಕೊಳ್ಳುವ ಸಮಯದಲ್ಲಿ ಕೂಡ ಆಕೆಗೆ ದನಿಯಲ್ಲಿ ಅತ್ಯಂತ ಸಹಜತೆಯನ್ನು ಕಂಡು ಆಕೆಯ ಆತ್ಮವಿಶ್ವಾಸಕ್ಕೆ ಮನಸ್ಸು ಬೆರಗಾಗಿತ್ತು. ಶಿಕ್ಷಣ ಹಾಗೂ ಸಾಮಾಜಿಕ ಗುರುತಿಸುವಿಕೆ ಕೊಡುವ ಆತ್ಮವಿಶ್ವಾಸ ಆಕೆಯ ಪ್ರತಿ ಮಾತುಗಳಲ್ಲಿ ಪ್ರತಿಧ್ವನಿಸುತ್ತಿತ್ತು ಎಂದರೆ ತಪ್ಪಿಲ್ಲ.

ಹಾಸನ ಜಿಲ್ಲೆಯ ಸಕಲೇಶಪುರ ತಾಲ್ಲೂಕು ಕೇಂದ್ರದಲ್ಲಿ ವಾಸವಾಗಿದ್ದ ಸಂಪ್ರದಾಯಸ್ಥ ಮುಸಲ್ಮಾನ ಕುಟುಂಬದಲ್ಲಿ ಹುಟ್ಟಿದ ಆಕೆ ಶಿಕ್ಷಕರ ತರಬೇತಿ ಪಡೆದು ಶಾಲೆಯೊಂದರಲ್ಲಿ ನೌಕರಿ ಮಾಡುತ್ತಿದ್ದಳು.

'ಭಾರ್ಯಾ ರೂಪವತೀ ಶತ್ರು' ಎಂಬ ಮಾತು ಸಂಸ್ಕೃತದಲ್ಲಿ ಇದೆ ಅದು ಈಕೆಯ ಗಂಡನ ಪಾಲಿಗೆ ನಿಜವಾಯಿತು. ಆಕೆಯ ಸೌಂದರ್ಯವನ್ನು ಮೆಚ್ಚಿ ಮದುವೆಯಾದ ಪತಿಗೆ ಆಕೆಯ ಸೌಂದರ್ಯವೇ ಅಸಹನೆಗೆ ಕಾರಣವಾಯಿತು. ವಿನಾಕಾರಣ ಪತ್ನಿಯನ್ನು ಸಂಶಯಿಸಲು ಆರಂಭಿಸಿದ ಆತ

ಅನುಮಾನದಿಂದ ಅತ್ಯಂತ ಕೀಳಾಗಿ ಆಕೆಯೊಂದಿಗೆ ವರ್ತಿಸುತ್ತಿದ್ದ. ಹೀನಾಯ ಮಾತುಗಳಿಂದ ಪತ್ನಿಯನ್ನು ಅವಮಾನಿಸುತ್ತಿದ್ದ.

ಕೈಯಲ್ಲಿ ಒಂದು ಪುಟ್ಟ ನೌಕರಿ ಹಾಗೂ ಚಿಕ್ಕ ಮಗ ಇರುವುದರಿಂದಲೇ ಬಹುಶಹ ಆಕೆಗೆ ಬದುಕು ಸಹನೀಯವಾಗಿರಬಹುದು. ಪತಿಯ ಸಂಬಳದಲ್ಲಿ ಮನೆಯ ಖರ್ಚು ವೆಚ್ಚಗಳನ್ನು ಪೂರೈಸಲು ಸಾಧ್ಯವಾಗದೇ ಇರುವುದರಿಂದಲೇ ಆಕೆ ನೌಕರಿ ಮಾಡಲು ಸಮ್ಮತಿಸಿದ್ದನಾತ.

ಹೀಗೆಯೇ ಬದುಕು ಕಳೆಯುತ್ತಿರಲು 2013ರಲ್ಲಿ ಆಕೆಗೆ ಬೆಂಗಳೂರಿನ ಪ್ರತಿಷ್ಠಿತ ಶಾಲೆಯೊಂದರಲ್ಲಿ ನೌಕರಿ ದೊರೆಯಿತು. ಸಹಜವಾಗಿಯೇ ತನ್ನ ಮಗನಿಗೆ ಆ ಶಾಲೆಯಲ್ಲಿ ಉಚಿತ ಶಿಕ್ಷಣ ಹಾಗೂ ತನಗೆ ಆರ್ಥಿಕವಾಗಿ ಅನುಕೂಲವಾಗಬಹುದಾದ ನೌಕರಿ ದೊರೆತ ಕಾರಣ ಆಕೆ ಆ ನೌಕರಿಗೆ ಸೇರಿಕೊಳ್ಳಲು ಹಠ ಹಿಡಿದಳು. ಈ ಕುರಿತು ದಂಪತಿಗಳಲ್ಲಿ ಸಾಕಷ್ಟು ಮಾತುಕತೆಗಳು ನಡೆದು ಮನಸ್ತಾಪಕ್ಕೆ ಕಾರಣವಾದವು.... ಹೇಗಾದರೂ ಮಾಡಿ ಮಗನಿಗೆ ಒಳ್ಳೆಯ ಶಿಕ್ಷಣ ಕೊಡಿಸುವ ಆಶಯ ಆಕೆಯದಾಗಿದ್ದು ಪತಿಯನ್ನು ಒಪ್ಪಿಸಿ ತಾನು ಮತ್ತು ತನ್ನ ಮಗ ಬೆಂಗಳೂರಿಗೆ ತೆರಳಲು ಎಲ್ಲಾ ತಯಾರಿ ಮಾಡಿಕೊಂಡಳು.

ಆ ದಿನ ಸಾಯಂಕಾಲ ಆಗತಾನೆ ತಾನು ಇಷ್ಟಪಟ್ಟು ಕುಡಿಯುವ ಹಾಲು ಹಾಕದೆ ಮಾಡಿಕೊಳ್ಳುವ ಕಪ್ಪು ಚಹಾವನ್ನು ಮಾಡಿಕೊಂಡು ಅದನ್ನು ತಂದು ದಿವಾನದ ಮೇಲೆ ಕುಳಿತು ಆಕೆ ಕುಡಿಯುತ್ತಿದ್ದಳು. ಆ ಸಮಯಕ್ಕೆ ವಿಪರೀತ ಕುಡಿದು ಬಂದ ಪತಿ ಆಕೆ ಚಹಾ ಕುಡಿಯುತ್ತಿದ್ದಂತದೇ ಮತ್ತೊಂದು ಬಟ್ಟಲಿನಲ್ಲಿ

ದ್ರಾವಕವೊಂದನ್ನು ತಂದು ಮುಂದಿಟ್ಟು ಇದನ್ನು ಕುಡಿದು ನೀನು ಸತ್ತು ಹೋಗು ಎಂದು ಹೇಳಲಾರಂಭಿಸಿದ.

ಆತನ ಇಂತಹ ನೂರಾರು ಹುಚ್ಚಾಟಗಳನ್ನು ನೋಡಿದ್ದ ಆಕೆ ಪತಿಯ ಮಾತನ್ನು ಅಷ್ಟಾಗಿ ಪರಿಗಣನೆಗೆ ತೆಗೆದುಕೊಳ್ಳದೆ ತನ್ನ ಪಾಡಿಗೆ ತಾನು ಚಹಾ ಕುಡಿಯುತ್ತಿದ್ದಳು. ಇದರಿಂದ ಮತ್ತಷ್ಟು ಸಿಟ್ಟಿಗೆದ್ದ ಪತಿ ಆ ಸೆರಾಮಿಕ್ ಕಪ್ ನಲ್ಲಿದ್ದ ದ್ರಾವಕವನ್ನು ಆಕೆಯ ಕತ್ತಿನ ಮೇಲೆ



ಸುರಿದನು. ಉಗುರು ಬೆಚ್ಚಗಿನ ದ್ರಾವಣ ಆಕೆಯ ಮೈ ಮೇಲೆ ಬಿದ್ದಾಗ ಮೊದಮೊದಲು ಏನೂ ಅನ್ನಿಸದೆ ಹೋದರೂ ಆಕೆಯ ಮೈ ಮೇಲಿನ ಬಟ್ಟೆಗಳು ತಂತಾನೆ ಕರಗಲಾರಂಭಿಸಿದಾಗ ಅದು ಎಸಿಡ್ ಎಂದು ಆಕೆಗೆ ಗೊತ್ತಾಯಿತು. ಆಕೆಯ ಯಾವ ಪ್ರಯತ್ನವೂ ಇಲ್ಲದೆ ಬಟ್ಟೆಗಳು ತಂತಾನೇ ತೊಲಗಿ ಎಸಿಡ್ ಆಕೆಯ ಚರ್ಮ ಹಾಗೂ ದೇಹದ ಭಾಗಗಳಿಗೆ ತಾಕಿ ಉಂಟು ಮಾಡುವ ಉರಿಗೆ ಆಕೆ ಒದ್ದಾಡತೊಡಗಿದಳು. ಆಕೆಯ ಕುತ್ತಿಗೆಯ ಮೆದುವಾದ ಭಾಗ, ಎದೆ ಹಾಗೂ ಹೊಟ್ಟೆಯ ಭಾಗಗಳು ಸಂಪೂರ್ಣ ಸುಡಲಾರಂಭಿಸಿ ನೋವಿನಿಂದ ಆಕೆ ಕಿರುಚಲು ಆರಂಭಿಸಿದಳು.ಕೂಡಲೇ ಅಕ್ಕಪಕ್ಕದ ಮನೆಯವರು ಓಡಿಬಂದು ಆಕೆಯ ಮೈ ಮೇಲೆ ಬಟ್ಟೆಯನ್ನು ಹೊದಿಸಿ ಆಸ್ಪತ್ರೆಗೆ ಕರೆದೊಯ್ದರು.

ಇಲ್ಲಿಂದ ಆಕೆಯ ಬದುಕಿನ ಮತ್ತೊಂದು ಅಧ್ಯಾಯ ಆರಂಭವಾಯಿತು. ಸರಿ ಸುಮಾರು ಆರು ತಿಂಗಳ ಕಾಲ ಆಕೆ ಆಸ್ಪತ್ರೆಯಲ್ಲಿ ಚಿಕಿತ್ಸೆಗೆ ಒಳಗಾಗಬೇಕಾಯಿತು. ತನ್ನ ಮನೆಯನ್ನು ಮಾರಿದ ಆಕೆಯ ತಾಯಿ ಆಕೆಯ ಚಿಕಿತ್ಸೆಯ ಖರ್ಚು ವೆಚ್ಚಗಳನ್ನು ಭರಿಸಿದಳು. 25 ಲಕ್ಷ ರೂಪಾಯಿಗೂ ಹೆಚ್ಚು ಹಣ, ಸರಿಸುಮಾರು ಅರೆಂಟು ತಿಂಗಳುಗಳ ಕಾಲ ಆಸ್ಪತ್ರೆಯ ವಾಸ ಹಾಗೂ ಮುಂದಿನ ಮೂರು ವರ್ಷಗಳ ಕಾಲ ಮುಂದುವರೆದ ಚಿಕಿತ್ಸೆ ಆಕೆಯನ್ನು ದೈಹಿಕವಾಗಿ ಹಣ್ಣು ಮಾಡಿತು ನಿಜ... ಆದರೆ ಆಕೆಯ ಅಂತಸ್ಸೆಲೆಯ ಅದಮ್ಯ ಚೈತನ್ಯ ಆಕೆಯನ್ನು ಮತ್ತೆ ಬದುಕಿಗೆ ಮರಳಲು ಪ್ರೋತ್ಸಾಹಿಸಿತು.

ತಾನು ಚೆನ್ನಾಗಿ ಓದಿ ಉದ್ಯೋಗ ಹಿಡಿದು ತನ್ನ ಮತ್ತು ತನ್ನ ಮಗುವಿನ ಭವಿಷ್ಯವನ್ನು ಗಟ್ಟಿಗೊಳಿಸಿಕೊಳ್ಳಬೇಕು ತನ್ನ ಹೆತ್ತಮ್ಮನನ್ನು ನೋಡಿಕೊಳ್ಳಬೇಕು ಎಂಬ ನಿಶ್ಚಯದಿಂದ ಬೂದಿಯಿಂದ ಹುಟ್ಟುವ ಫೀನಿಕ್ಸ್ ಪಕ್ಷಿಯಂತೆ ಆಕೆ ತನ್ನಿಡಿ ದೇಹದ ಭಾಗವನ್ನು ಸುಟ್ಟುಕೊಂಡರೂ ತನ್ನ ಮಾನಸಿಕ ದೃಢತೆಯಿಂದ ಎದ್ದು ನಿಂತಳು.

ಮುಂದೆ ಸ್ನಾತಕೋತ್ತರ ಎಮ್ ಎ ಪದವಿಯನ್ನು ಹಾಗೂ ಬಿಎಡ್ ಪದವಿಯನ್ನು ಪಡೆದ ಆಕೆ ಬ್ಯಾಂಕಿಂಗ್ ಪರೀಕ್ಷೆಗಳನ್ನು ಕೂಡ ಪಾಸಾದಳು. ಇದೀಗ ಬ್ಯಾಂಕಿಂಗ್ ಪರೀಕ್ಷೆಗಳನ್ನು ಎದುರಿಸುವ ವಿದ್ಯಾರ್ಥಿಗಳಿಗೆ ತರಬೇತು ತರಬೇತುದಾರಳಾಗಿ ಕಾರ್ಯನಿರ್ವಹಿಸುತ್ತಿರುವ ಆಕೆ ತನ್ನ ಬದುಕಿನಲ್ಲಿ ನಡೆದ ದಾರುಣ ಘಟನೆಯ ಕುರಿತು ಅತ್ಯಂತ ಸಹಜವಾದ ದನಿಯಲ್ಲಿ ಹೇಳುವಾಗ ಆಕೆಯ ಆತ್ಮ ವಿಶ್ವಾಸ ಕಂಡು ಮನಸ್ಸು ಸಂತಸದಿಂದ ಕುಣಿಯುತ್ತದೆ.

ಹೆಮ್ಮೆಯ ಭಾವ ಮೂಡುತ್ತದೆ.

ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆಯ ಸಂದರ್ಭದಲ್ಲಿ ತನ್ನನ್ನು ಕರೆಸಿ ಮಾತನಾಡಿಸಿದ ಸಂಸ್ಥೆ ಯೊಂದರ ಕಾರ್ಯಕ್ರಮದಲ್ಲಿ ಆಕೆ ತನ್ನಂತೆ ಕರ್ನಾಟಕದಲ್ಲಿ ಅಸಿಡ್ ದಾಳಿಗೊಳಗಾದ ಹೆಣ್ಣು ಮಕ್ಕಳ ಸಂಖ್ಯೆ ಸರಿ ಸುಮಾರು 98 ಇದ್ದು ಅದರಲ್ಲಿ ಕೇವಲ 49 ಜನರನ್ನು ಮಾತ್ರ ಗುರುತಿಸಲಾಗಿದೆ ಎಂದು ಹೇಳಿದರು. ಸರ್ಕಾರದಿಂದ ಪ್ರತಿ ತಿಂಗಳು ಎಸಿಡ್ ಸಂತ್ರಸ್ತರಿಗೆ ದೊರೆಯುವ ರೂ 10,ಸಾವಿರ ಮಾಸಾಶನ ದೊರೆಯುತ್ತಿದೆ. ಎಸಿಡ್ ಸಂತ್ರಸ್ತರ ಮಕ್ಕಳ ಶಿಕ್ಷಣಕ್ಕೆ ಸವಲತ್ತುಗಳನ್ನು ನೀಡುವ ಕುರಿತು ಹಾಗೂ ಆಸಿಡ್ ಸಂತ್ರಸ್ತರಿಗೆ ಮನೆಯನ್ನು ಒದಗಿಸಿ ಕೊಡುವ ಕುರಿತು ಮಾತು ಕತೆಗಳು ಸರ್ಕಾರದೊಂದಿಗೆ ಜಾರಿಯಲ್ಲಿದ್ದು ಇನ್ನೇನು ಕೆಲವೇ ದಿನಗಳಲ್ಲಿ ಈ ಕುರಿತು ಅಧಿಕೃತ ಮಾಹಿತಿ ದೊರೆಯಲಿದೆ ಎಂಬ ವಿಶ್ವಾಸ ಆಕೆಯದ್ದು.




ವಿಕೃತ ಮನಸ್ಥಿತಿಯ ಜನರ ಅಕೃತ್ಯಕ್ಕೆ ಬಲಿಯಾದ ತನ್ನಂತಹ ಹೆಣ್ಣು ಮಕ್ಕಳನ್ನು ನೋಡಿ ಮುಜುಗರ, ಅಸಹ್ಯ ಪಟ್ಟುಕೊಳ್ಳುವ ಜನರಿಗೆ ಆಕೆ ಹೇಳುವುದು ಇಷ್ಟೇ ನಾವು ಕೂಡ ನಿಮ್ಮಂತೆಯೇ ಮನುಷ್ಯರು. ನಮಗೆ ಕೂಡ ನಿಮ್ಮಷ್ಟೇ ಬದುಕುವ ಹಕ್ಕಿದೆ. ಕೆಟ್ಟ ಮನಸ್ಥಿತಿಯ ಜನರ ಪೈಶಾಚಿಕತೆಗೆ ತಾವು ಬಲಿಯಾಗಿದ್ದೇವೆ.... ತಮ್ಮನ್ನು ಹೀನಾಯವಾಗಿ ಕಾಣಬೇಡಿ ಎಂದು ಕಳಕಳಿಯಿಂದ ಕೇಳಿಕೊಳ್ಳುತ್ತಾರೆ.

ಶಿಕ್ಷಣ ಮತ್ತು ಉದ್ಯೋಗ ಕೊಡ ಮಾಡುವ ಆರ್ಥಿಕ ಅನುಕೂಲಗಳು ವ್ಯಕ್ತಿಯಲ್ಲಿ ಆತ್ಮವಿಶ್ವಾಸವನ್ನು ಮೂಡಿಸುತ್ತದೆ ಎಂಬುದನ್ನು ಗಟ್ಟಿಯಾಗಿ ಹೇಳುವ ಆಕೆ ತನ್ನ ಶಿಕ್ಷಣವೇ ಇಂದು ತನ್ನನ್ನು ಸಬಲಗೊಳಿಸಿದೆ.

ಇಂತಹ ಪರಿಸ್ಥಿತಿಯಲ್ಲಿ ಬದುಕಿನಲ್ಲಿ ಭರವಸೆಯನ್ನು ಹೊಂದಿ ಮುಂದೆ ಸಾಗಬೇಕು ಎಂದು ಹೆಣ್ಣು ಮಕ್ಕಳಿಗೆ ಕರೆ ನೀಡಿರುವ ಶಾನು ಅವರ ಅದಮ್ಯ ದೃಢ ವಿಶ್ವಾಸಕ್ಕೆ ಶರಣು.

Published by Mihir Akash K.R Printed by M.S.Shivaprakash on behalf of Mihir Akash K.R. Printed at M.S. Shivaprakash, IDEAL OFFSET PRINTERS, #337, SLJ Temple Street, Old Town Mandya Dist-571401, Karnataka. Published from No 170, Nirvikalpa Road, E&F block, Ramakrishna Nagar, Mysore - 570022, Editor K.N Ravi,